enquiry and it was found that there was no such register number of a lorry with the R.T.O Such a vehicle does not exist. And as far as the State Government it concerned, I am submitting, there is no such loss. No hardship is caused to the Government servants. There is no loss of records whatsoever. In view of this, this may be left here.

MR. SPEAKER.—Let us stop at that we shall take up discussion on Demands for grants.

ನಿನ್ನೆ ಕು. ಪ್ರಮೀಳ ಅವರು ೪೧ ನಿಮಿಷ ತೆಗೆದುಕೊಂಡಿದ್ದಾರೆ. ಇನ್ನು ಇವತ್ತು ಎಷ್ಟು ಬೇಕಾಗುತ್ತದೆ?

ಕುಮಾರಿ ಎಸ್. ಪ್ರಮೀಳ.—ಅದರಲ್ಲಿ ಅರ್ಧ ಭಾಗವನ್ನು ಆಚರಣೆಯಲ್ಲಿ ಆ ಕಡೆಯವರೇ ತೆಗೆದುಕೊಂಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಮಾತನಾಡಿದ ೪೦ ನಿಮಿಷವನ್ನು ೧೦೦ ರಿಂದ ಗುಣಿಸಬೇಕು. ನಿಮ್ಮ ಮಾತನ್ನು ಬರೆದುಕೊಳ್ಳುವುದು ಕಷ್ಟ ಮತ್ತು ನಾವು ಕೇಳುವುದೂ ಕಷ್ಟ. ಅವರು ೪೦ ನಿಮಿಷ ಎಂದರೆ ೪ ತಾಸು ತೆಗೆದುಕೊಂಡ ಹಾಗೆ.

ಅಧ್ಯಕ್ಷರು.—ಸದನದ ಸದಸ್ಯರಲ್ಲಿ ಮನವಿ ಏನೆಂದರೆ, ನಾವು ಕಾರ್ಯಕ್ರಮದಲ್ಲಿ ಹಿಂದೆ ಇದ್ದೇವೆ. ಬಿ.ಎ.ಸಿ.ನಲ್ಲಿ ಇಷ್ಟೇ ದಿವಸದಲ್ಲಿ ಮುಗಿಸಬೇಕೆಂದು ಮತ್ತೆ ಹೊಸದಾಗಿ ತೀರ್ಮಾನವಾಗಿದೆ, ಅದಕ್ಕೆ ಸಭೆ ಕೂಡ ಅನುಮತಿ ಕೊಟ್ಟಿದೆ. ನಾವು ಕಾಲಕ್ಕೆ ಸರಿಯಾಗಿ ಮುಗಿಸದೇ ಹೋದರೆ ಬಹುವಂಟ್ಟಿಗೆ ಗಿಲಟಿನ್‌ಗೆ ಹಾಕುವ ಪರಿಸ್ಥಿತಿ ಬರಬಹುದು. ಅದಕ್ಕೆ ಅವಕಾಶ ಆಗದಂತೆ ನೋಡಿಕೊಳ್ಳ ಬೇಕಾಗುತ್ತದೆ.

FINANCIAL BUSINESS

Discussion on the Demands for Grants for 1982-83.

Demand Nos. 61 and 62.

ಶ್ರೀಮತಿ ಪ್ರಮೀಳ.—ನಾನು ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅದರ ಬಗ್ಗೆ ನನ್ನ ಹತ್ತಿರ ಹೆಚ್ಚಿನ ಮಾಹಿತಿ ಇಲ್ಲ. ನಾನು ಮಕ್ಕಳು ಮತ್ತು ಮಹಿಳೆಯರ ಬಗ್ಗೆ ಮಾತನಾಡುತ್ತೇನೆ. ಅವರಿಗೆ ಆಗತಕ್ಕ ಕಷ್ಟಸುಖಗಳನ್ನು ಹೇಳುತ್ತೇನೆ.

ಅಧ್ಯಕ್ಷರು.—ತಾವು ವಕೀಲರು. ಒಂದು ಅಂಶವನ್ನು ಒಂದು ಸಾರಿ ಹೇಳಿದರೂ ಅಷ್ಟೇ, ಹತ್ತು ಸಾರಿ ಹೇಳಿದರೂ ಅಷ್ಟೇ.

ಶ್ರೀಮತಿ ಪ್ರಮೀಳ.—ನಾನು ಹತ್ತು ಸಾರಿ ಹೇಳುವುದಕ್ಕೆ ಹೋಗಿಲ್ಲ.

ಅಧ್ಯಕ್ಷರು.—ನಿಮಗೆ ಎಷ್ಟು ಸಮಯ ಬೇಕು.?

ಶ್ರೀಮತಿ ಪ್ರಮೀಳ.—ಅರ್ಧ ಗಂಟೆ ಸಾಕು.

ಅಧ್ಯಕ್ಷರು.—ನಾನಿನ್ನೂ ಬೇರೆಯವರಿಗೆ ಅವಕಾಶ ಕೊಡಬೇಕು. ೧೦ ನಿಮಿಷದಲ್ಲಿ ಮುಗಿಸಿದರೆ ಒಳ್ಳೆಯದು. ಕಾಂಗ್ರೆಸ್ (ಐ) ಪಕ್ಷದವರೂ ಇನ್ನೂ ೧೩ ಜನರಿದ್ದಾರೆ. ವಿರೋಧ ಪಕ್ಷದಿಂದ ೬ ಜನರು ಮಾತನಾಡುವವರಿದ್ದಾರೆ. ಈ ೧೯ ಜನರು ಮಾತನಾಡುವುದು ಯಾವಾಗ, ಮತಕ್ಕೆ ಹಾಕುವುದು ಯಾವಾಗ?

ಶ್ರೀಮತಿ ಪ್ರಮೀಳ.—ಆದಷ್ಟು ಬೇಗ ಮುಗಿಸುತ್ತೇನೆ.

ನಿನ್ನೆ ದಿವಸ ಕಾರ್ಪೊರೇಷನ್‌ನಲ್ಲಿರತಕ್ಕ ಕಾರ್ಮಿಕರ ಅವಸ್ಥೆ ಬಗ್ಗೆ ನಿಮ್ಮ ಗಮನಕ್ಕೆ ತಂದಿದೆ. ಹೆಣ್ಣು ಮಕ್ಕಳಿಗೆ ಸಮಾಜದಲ್ಲಿ ಆಗುತ್ತಿರುವ ಅವ್ಯವಸ್ಥೆ ಬಗ್ಗೆ ಸಭೆಯ ಗಮನವನ್ನು ಸೆಳೆಯುತ್ತಿದ್ದೇನೆ. ಒಂದು ಪ್ರವೃತ್ತಿ ನಮ್ಮ ಜನರಲ್ಲಿ ಬೆಳೆದುಕೊಂಡು ಬರುತ್ತಿದೆ. ಒಂದು ಧರ್ಮದಲ್ಲಿ ಒಂದು ಜನಾಂಗದಲ್ಲಿ ಎಷ್ಟು ಜನರನ್ನು ಬೇಕಾದರೂ ಮದುವೆ ಮಾಡಿಕೊಳ್ಳಬಹುದು ೧೫ ದಿವಸವಾದ ನಂತರ ತಲಕ್ ಎಂದು ಹೇಳಿ ಬಿಟ್ಟು ಬಿಡಬಹುದು ಎಂಬ ಅವಕಾಶ ಇದೆ. ಅವರಿಗೆ ನಿಜವಾಗಿ ಮದುವೆಯಾಗಬೇಕು ಎಂಬ ಇಚ್ಛೆ ಇರುವುದಿಲ್ಲ. ಮನೆ ಕೆಲಸಕ್ಕೆ ಡೊಮೆಸ್ಟಿಕ್ ಸರ್ವೆಂಟ್ಸನ್ನಾಗಿ ಬಳಸಿಕೊಳ್ಳುವುದಕ್ಕೆ ಮದುವೆ ನೆಪ ಹಾಕಿಕೊಂಡು ಹೆಣ್ಣುಮಕ್ಕಳನ್ನು ಮದುವೆಯಾಗಿ ತಲಕ್ ಮಾಡಿಕೊಂಡು ಬೇರೆ ದೇಶಕ್ಕೆ ಕರೆದುಕೊಂಡು ಹೋಗಿ ಮಾರುವ ಪರಿಸ್ಥಿತಿ ಬಂದಿದೆ. ಕ್ಯಾವೆಲ್ರಿ ರಸ್ತೆಯಲ್ಲಿ ಈ ರೀತಿ ಅವ್ಯವಹಾರ್ಯ ಆಗಿರುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇಂಥ ಪ್ರವೃತ್ತಿ ಬೆಳೆಯುವುದಕ್ಕೆ ಬಿಡಬಾರದೆಂದು ಆಂಧ್ರ ಪ್ರದೇಶದಲ್ಲಿ ಸ್ಕ್ರೀನಿಂಗ್ ಕಮಿಟಿ ಎಂದು ಮಾಡಿಕೊಂಡಿದ್ದಾರೆ. ಅದೇ ರೀತಿ ಇಲ್ಲೂ ಮಾಡಿ ಅಲ್ಪಸಂಖ್ಯಾಂತ ಹೆಣ್ಣುಮಕ್ಕಳಿಗೆ ಆಗತಕ್ಕ ಅನ್ಯಾಯವನ್ನು ದೂರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಹಿಳಾ ಮತ್ತು ಮಕ್ಕಳ ಖಾತೆ ಮಂತ್ರಿಗಳು ಈ ಬಗ್ಗೆ ಗಮನ ಹರಿಸಬೇಕು. ಬೆಂಗಳೂರಿನಲ್ಲಿರತಕ್ಕ ಹೋಟೆಲ್‌ಗಳಲ್ಲಿ ಹೆಣ್ಣು ಮಕ್ಕಳಿಗೆ ಮಾಡುತ್ತಿರುವ ಅನ್ಯಾಯದ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಕಲಾಸಿಪಾಳ್ಯಂ, ತರುಗುಪೇಟೆ, ಮುಂತಾದ ಕಡೆಗಳಲ್ಲಿರುವ ಹೋಟೆಲುಗಳಲ್ಲಿ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಇರತಕ್ಕ ಕೊಳಚೆ ಪ್ರದೇಶದ ಹೆಣ್ಣುಮಕ್ಕಳನ್ನು ಸೂರ್ಯನ ಬೆಳಕು ಕಾಣದ ಹಾಗೆ ಡ್ರಮ್‌ಗಳಲ್ಲಿ ಬೀರುಗಳಲ್ಲಿ ಬಚ್ಚಿಟ್ಟು ಅವ್ಯವಹಾರ ಮಾಡುತ್ತಿದ್ದಾರೆ. ಎಷ್ಟೋ ಸಲ ಪೋಲಿಸರಿಗೆ ಈ ಬಗ್ಗೆ ದೂರು ಕೊಟ್ಟರು ಪರಿಣಾಮಕಾರಿಯಾಗಿ ಅವರು ಕ್ರಮ ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಗಮನ ಹರಿಸಿ ಸೂಕ್ತ ಕ್ರಮ ಕೈಗೊಂಡು ಇಂಥ ಅವ್ಯವಹಾರಗಳು ಮುಂದೆ ನಡೆಯದಂತೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಪಡಬೇಕೆಂದು ಹೇಳುತ್ತೇನೆ. ಹೋದಸಾರಿ ನಾನು ಮಾತನಾಡತಕ್ಕ ಸಂದರ್ಭಗಳಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಹೆಣ್ಣು ಮಕ್ಕಳಿಗೆ ಪ್ರಾತಿನಿಧ್ಯ ಕಡಿಮೆ ಇದೆ ಎಂದಾಗ ಮಾನ್ಯ ಕಾನೂನು ಮಂತ್ರಿಗಳು ಹೆಚ್ಚಾಗಿ ಅವಕಾಶ ಕಲ್ಪಿಸಿಕೊಟ್ಟಿದ್ದೇವೆ ಎಂದು ಹೇಳಿದರು. ಆದರೆ ೧೯೮೧ ನೇ ಇಸವಿಯಲ್ಲಿ ಸೆನ್‌ಸಸ್ ಇಲಾಖೆಯವರು ಹೊರಡಿಸಿರುವ ಪುಸ್ತಕದಲ್ಲಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಇದನ್ನು ನೋಡಿದಾಗ ನಿಜವಾಗಿಯೂ ದುಃಖವಾಗುತ್ತಿದೆ. ಯಾವುದೇ ಒಂದು ಇಲಾಖೆಯಲ್ಲೂ ಹೆಣ್ಣುಮಕ್ಕಳಿಗೆ ಸರಿಯಾಗಿ ಕೆಲಸ ಕೊಟ್ಟಿಲ್ಲ. ಆಡ್ಮಿನಿಸ್ಟ್ರೇಟಿವ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ೧೬೩ ಜನ ಗಂಡಸರಲ್ಲಿ ೧೦ ಜನ ಹೆಣ್ಣುಮಕ್ಕಳಿದ್ದಾರೆ. ಅದೇ ರೀತಿ ಇನ್ನೊಂದು ಇಲಾಖೆಯಲ್ಲಿ ೪೮ ಜನ ಗಂಡಸರಿದ್ದರೆ ಹೆಣ್ಣು ಮಕ್ಕಳು ಇಲ್ಲವೇ ಇಲ್ಲ. ಯಾವುದೇ ಇಲಾಖೆಯನ್ನು ತೆಗೆದುಕೊಂಡರೂ ಹೆಣ್ಣು ಮಕ್ಕಳಿಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕಿಲ್ಲ. ಕರ್ನಾಟಕದಲ್ಲಿ ೨,೭೮,೮೭೫, ಜನ ಗಂಡಸರು ಕೆಲಸ ಮಾಡುತ್ತಿದ್ದರೆ ೩೧.೩೧೯ ಜನ ಹೆಣ್ಣು ಮಕ್ಕಳು ಕೆಲಸ ಮಾಡುತ್ತಿದ್ದಾರೆ ಅಂದರೆ ಒಟ್ಟು ೩,೧೦,೧೮೪ ಆಯಿತು. ಒಟ್ಟು ಪರ್ಸೆಂಟೇಜ್ ಗಂಡಸರದು ೮೭.೩ ಪರ್ಸೆಂಟ್ ಆದರೆ ಹೆಣ್ಣು ಮಕ್ಕಳದು ೧.೩ ಪರ್ಸೆಂಟ್ ಮಾತ್ರ ಆಯಿತು; ಖಂಡಿತವಾಗಿ ಇದು ದುಃಖಕರವಾದ ವಿಷಯ. ಗಂಡಸರಿಗೆ ೮೭.೩ ಪರ್ಸೆಂಟಿನಷ್ಟು ಉದ್ಯೋಗಾವಕಾಶ ದೊರಕಿಸಿಕೊಟ್ಟು ಹೆಣ್ಣುಮಕ್ಕಳಿಗೆ ಕೇವಲ ೧.೩ ಪರ್ಸೆಂಟಿನಷ್ಟು ಉದ್ಯೋಗಾವಕಾಶ ಒದಗಿಸಿಕೊಟ್ಟಿರುವುದು ಶೋಚನೀಯವಾದ ವಿಚಾರ ಇದರ ಬಗ್ಗೆ ಮಾನ್ಯ ಮಂತ್ರಿವರ್ಯರು ಗಮನ ಹರಿಸಬೇಕು. ಈ ೧.೩ ಪರ್ಸೆಂಟ್ ಹೆಣ್ಣುಮಕ್ಕಳಲ್ಲಿ ಪೌರಕಾರ್ಮಿಕರು, ನಾಲ್ಕನೇ ದರ್ಜೆ ನೌಕರರು, ಆಯಾಗಳು, ನರ್ಸ್‌ಗಳು, ಟೀಚರ್‌ಗಳು ಬರುತ್ತಾರೆ. ಬೇರೆ ಕಡೆ ಮಹಿಳೆಯರಿಗೆ ಅವಕಾಶವೇ ಸಿಗುತ್ತಿಲ್ಲ. ೧೮ ಪರ್ಸೆಂಟ್ ಬ್ಯಾಕ್‌ಲಾಗ್ ಹರಿಜನ ಗಿರಿಜನರಿಗೆ ಕೊಟ್ಟಿಲ್ಲ ಎಂದು ಹೇಳುವಾಗ ೫೦ ಪರ್ಸೆಂಟ್ ಹೆಣ್ಣುಮಕ್ಕಳಿಗೆ ಕೊಡುವ ಕಡೆ ಕೇವಲ ೧.೩ ಪರ್ಸೆಂಟ್ ಅವಕಾಶ ಮಾಡಿಕೊಟ್ಟಿರುವುದು ನೋಡಿದರೆ ನಿಜವಾಗಿಯೂ ದುಃಖವಾಗುತ್ತದೆ. ಇದನ್ನು ಹೆಚ್ಚು ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನಪಡಬೇಕೆಂದು ಕೇಳಿಕೊಳ್ಳುತ್ತೇನೆ. ಮೂರು ಸಾವಿರಕಿಂತಲೂ ಹೆಚ್ಚು ಸಂಬಳ ಬರುವ ಉದ್ಯೋಗಗಳಲ್ಲಿ ಹೆಣ್ಣುಮಕ್ಕಳಿಗೆ ಅವಕಾಶ ಹೆಚ್ಚಾಗಿ ಸಿಗುತ್ತಿಲ್ಲ. ಶ್ರೀಮತಿ ತೆರೇಸ ಭಟ್ಟಾಚಾರ್ಯ ಅವರನ್ನು ನಗರ ಕಾರ್ಪೊರೇಷನ್ ಕಮಿಷನರನ್ನಾಗಿ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದರು. ನಮ್ಮ ಮಹನೀಯರಿಗೆ ಅದನ್ನು ನೋಡಿ ಸಹಿಸುವುದಕ್ಕಾಗುವುದಿಲ್ಲ. ಮಹಿಳೆ ಕಮಿಷನರ್ ಬೇಡ ಎಂದು ರೆಪ್ರಸೆಂಟೇಷನ್ ಕೊಟ್ಟರು. ಶ್ರೀಮತಿ ರೇಣುಕಾ ವಿಶ್ವನಾಥನ್ ಅವರು ಟ್ರಾನ್ಸ್

ಪೋರ್ಟ್ ಕಮಿಷನರ್ ಆಗಿದ್ದರು. ಆಗಲೂ ಸಹಿಸಲಾರದೆ ಅವರನ್ನು ತೆಗೆಸಿಹಾಕುವುದಕ್ಕೆ ಪ್ರಯತ್ನ ಪಟ್ಟರು. ಇದು ಇರತಕ್ಕ ವಿಷಯ.

ಶ್ರೀ ಎಂ. ಸಿ. ನಾಣಯ್ಯ.—ಸರ್ಕಾರ ಹೆಣ್ಣು ಮಕ್ಕಳನ್ನು ಯಾವ ಯಾವುದೋ ಇಲಾಖೆಗಳಲ್ಲಿ ನೇಮಕ ಮಾಡುತ್ತದೆ. ವರ್ಗಾವಣೆ ಮಾಡಿರತಕ್ಕದು ಸರ್ಕಾರ. ಅದಕ್ಕೆ ಗಂಡಸರು ಹೇಗೆ ಕಾರಣ? ಪ್ರತಿಯೊಂದಕ್ಕೂ ಗಂಡಸರೇ ಕಾರಣ ಎಂದರೆ ಹೇಗೆ? ಚುನಾವಣೆಯಲ್ಲಿ ಸೋತರೂ ಗಂಡಸರೇ ಕಾರಣ ಎಂದು ಹೇಳಿದರೆ ಏನರ್ಥ ಶ್ರೀಮತಿ ಭಟ್ಟಾಚಾರ್ಯ ಅವರನ್ನು ಕಮೀಷನರ್ ಹುದ್ದೆಯಿಂದ ಏತಕ್ಕೆ ವರ್ಗಾವಣೆ ಮಾಡಿದ್ದಾರೆ ಎಂಬ ಪ್ರಶ್ನೆಯನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೇಳಲಿ. ರೇಣುಕಾ ವಿಶ ನಾಥನ್ ಅವರನ್ನು ಟ್ರಾನ್ಸ್‌ಪೋರ್ಟ್ ಕಮಿಷನರ್ ಹುದ್ದೆಯಿಂದ ಬೇರೆ ಕಡೆ ವರ್ಗ ಏತಕ್ಕೆ ಮಾಡಿದ್ದೀರಿ ಎಂದ ಮುಖ್ಯಮಂತ್ರಿಗಳನ್ನು ಕೇಳಲಿ ಅದರೆ ಇದಕ್ಕೂ ಗಂಡಸರೇ ಕಾರಣ ಎಂದರೆ ಏನರ್ಥ? ಎಲ್ಲದಕ್ಕೂ ಗಂಡಸರು, ಗಂಡಸರು ಎಂದು ಇವರು ಹೇಳುವುದನ್ನು ಕೇಳಿ ನನಗೆ ಏನು ಸಂಶಯ ಬಂದಿದೆ ಯೆಂದರೆ ಶ್ರೀಮತಿ ಪ್ರಮಿಳಾ ಅವರು . ...

ಶ್ರೀಮಂತಿ ಪ್ರಮಿಳಾ,—ನಾನು ಹೇಳುತ್ತೇನೆ. ಕುಳಿತುಕೊಳ್ಳಿ, ನನಗೆ ಗೊತ್ತು.

ಶ್ರೀ ಎಂ. ಸಿ. ನಾಣಯ್ಯ.—ನಿಮ್ಮ ಜೊತೆಯಲ್ಲಿ ನಾವು ಸಹ ಭಾಗಿಗಳಾಗಿರಬೇಕು. ನಿಮ್ಮನ್ನು ಬಿಟ್ಟುಹೋಗುವ ಹಾಗಿಲ್ಲ. ಈ ತರಹ ಮಾಡಿದರೆ ಮಾತ್ರ ನಿಮ್ಮನ್ನು ಬಿಡಬೇಕಾಗುತ್ತದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಶ್ರೀಮತಿ ತೆರೆಸಾ ಭಟ್ಟಾಚಾರ್ಯ ಅವರನ್ನು ನಾವೆಲ್ಲಾ ರೆಪ್ರಸೆಂಟೇಷನ್ ಕೊಟ್ಟು...............

ಅಧ್ಯಕ್ಷರು.—ನೀವು ಎಂದು ಹೇಳಿಲ್ಲ. ಗಂಡಸರು ಎಂದು ಹೇಳಿದ್ದಾರೆ. (ನಗು)

ಶ್ರೀಮತಿ ಪ್ರಮಿಳಾ.—ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ............

ಶ್ರೀ ಹೆಚ್ ಎಲ್ ತಿಮ್ಮೇಗೌಡ.—ವೃಥಾ ಆರೋಪ ಮಾಡುವುದು ಸರಿಯಲ್ಲ. ಇದಕ್ಕೆ ಬೇರೆ ಕಾರಣ ವಿದೆಯೇ ಹೊರತು ಬೆಂಗಳೂರು ನಗರದ ಶಾಸಕರು ಕಾರಣರಲ್ಲ.

ಶ್ರೀಮತಿ ಪ್ರಮಿಳಾ.—ದಕ್ಷತೆಗೋಸ್ಕರ ಬೇರೆ ಕಡೆಗೆ ಅವರನ್ನು ವರ್ಗ ಮಾಡಿದ್ದರೆ ನಾನು ಅದನ್ನು ಸ್ವಾಗತ ಮಾಡುತ್ತಿದ್ದೆ. ಆದರೆ ನನ್ನ ಕಣ್ಣು ಮುಂದೆ ಬೆಂಗಳೂರಿನ ಶಾಸಕರು ಹೋಗಿ ಶ್ರೀಮತಿ ಭಟ್ಟಾಚಾರ್ಯ ಅವರು ಕಮಿಷನರ್ ಆಗಿ ಮುಂದುವರೆಯುವುದು ಬೇಡ ಎಂದು ಹೇಳಿದ್ದನ್ನು ಕೇಳಿದಾಗ ನಾನು ಆರೋಪ ಮಾಡತಕ್ಕದ್ದು ಅಗತ್ಯ ಎಂದು ಹೇಳುತ್ತಿದ್ದೇನೆ. ಹೆಣ್ಣು ಮಕ್ಕಳು ಕೆಲಸ ಮಾಡುವುದಕ್ಕೆ, ಹೆಣ್ಣು ಮಕ್ಕಳು ಬದುಕುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಮಹನೀಯರನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ನೀವು ಬೆಂಗಳೂರಿನ ಶಾಸಕರೇ ಅದಕ್ಕೆ ಕಾರಣ ಎಂದು ಆರೋಪ ಮಾಡಬೇಕಾದರೆ ನೋಟೀಸ್ ಕೊಟ್ಟು ಮಾಡಬೇಕು. .

ಶ್ರೀಮತಿ ಪ್ರಮಿಳಾ.—ನಾನು ಆರೋಪ ಮಾಡುತ್ತಿಲ್ಲ, ಅವರು ಕೇಳಿದ್ದಕ್ಕೆ ಹೇಳುತ್ತಿದ್ದೇನೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ನಾವು ಮಾಡೇ ಇಲ್ಲ,

೧೧-೦೦ ಎ. ಎಂ.

ಶ್ರೀಮತಿ ಎಸ್. ಪ್ರಮೀಳಾ.—ಅವರು ಕೇಳಿದ್ದಕ್ಕೆ ಹೇಳಿದೆ, ಇಲ್ಲದೇ ಇದ್ದರೆ ಪ್ರಸ್ತಾಪ ಮಾಡುತ್ತಿರಲಿಲ್ಲ.

ಅಧ್ಯಕ್ಷರು.—ಎಲ್ಲರೂ ಇಲ್ಲದೇ ಇರಬಹುದು.

ಶ್ರೀ ಹೆಚ್. ಗಂಗಾಧರನ್.—ಅವರೂ ಸೇರುತ್ತಾರೆ.

ಅಧ್ಯಕ್ಷರು.—ಅವರು ಗಂಡಸರಲ್ಲ.

ಶ್ರೀ ವಿ. ವಿ. ಭಾವಿ.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್......

ಅಧ್ಯಕ್ಷರು.—ಇದು ಮುಂದುವರಗಿ ವಿಷಯುವಲ್ಲ.

ಶ್ರೀ ವಿ. ವಿ. ಭಾವಿ.—ಅಧ್ಯಕ್ಷರೇ, ತಾವು ನಿನ್ನೆ ಇರಲಿಲ್ಲ. ಹೆಣ್ಣು ಮಕ್ಕಳ ಬಗ್ಗೆ ಭಾರತೀಯ ಸಂಸ್ಕೃತಿಯಲ್ಲಿ ತಾಯಿ ಮತ್ತು ಸಹೋದರಿಯರ ಸ್ಥಾನ ಇದೆ. ನಿನ್ನೆಯಿಂದಲೂ ಭಾಷಣ ಮಾಡಿದಂತವರು ಗಂಡಸರ ಬಗ್ಗೆ ಆರೋಪ ಮಾಡುತ್ತಿದ್ದಾರೆ. ಕಾಮಾಲೆ ಕಣ್ಣಿದ್ದವರಿಗೆ ಕಂಡಿದ್ದೆಲ್ಲಾ ಅರಿಶಿಣವಾಗಿಯೇ ಕಾಣುತ್ತದೆಂದು ಹೇಳುತ್ತಾರೆ.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಇಲ್ಲ.

ಶ್ರೀ ವಿ. ವಿ. ಭಾವಿ.—ಇವರು ಹಳ್ಳಿಗಳ ವಿಷಯ ಕಂಡಿಲ್ಲ, ಪಟ್ಟಣಗಳ ವಿಷಯ ಮಾತ್ರ ಗೊತ್ತಿದೆ. ಯಾವ ರೀತಿಯಾಗಿ ಗಂಡಸರೊಂದಿಗೆ ಗೌರವದಿಂದ ಇದ್ದಾರೆಂಬುದು ಇವರಿಗೆ ಗೊತ್ತಿಲ್ಲ. ಆಮೇಲೆ ಬಸವಣ್ಣನವರು ಹೇಳಿದ ಹಾಗೆ "ಅನುಭವದಲ್ಲಿ ಅಮೃತ ಇದೆ ಅಂದ ಹಾಗೆ, ಇವರಿಗೆ ಅಮೃತವೂ ಇಲ್ಲ. ಅನುಭವೂ ಇಲ್ಲ.

ಶ್ರೀ ಕೆ. ಭಾಸ್ಕರ ನಾಯ್ಡು.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್. ಇವರು ಅನುಭವ ಇಲ್ಲ, ಅಮೃತ ಇಲ್ಲವೆಂದು ಹೇಳಿದರು. ಇವರಿಗೆ ಹೇಗೆ ಬಂತು ಅನುಭ.

ಶ್ರೀಮತಿ ಎಸ್. ಪ್ರಮೀಳಾ.—ಮಾನ್ಯ ಸಭಾಧ್ಯಕ್ಷರೇ, ಗ್ರಾಮಾಂತರದಲ್ಲಿ ಇರತಕ್ಕ ಹೆಣ್ಣುಮಕ್ಕಳ ದುಃಖವನ್ನು ಅರಿತ್ತಿಲ್ಲ, ಅವರ ಕಷ್ಟಸುಖಗಳು ಗೊತ್ತಿಲ್ಲ ಎಂದು ಹೇಳುವುದು ಮಾನ್ಯ ಸದಸ್ಯರ ಅನುಭವ ಇಲ್ಲದ ಮಾತು. ನಾನು ಸಾಮಾಜಿಕ ಜೀವನದಲ್ಲಿ ವಕೀಲಿ ವೃತ್ತಿಯನ್ನು ಕೈಗೊಂಡ ಮೇಲೆ, ಗ್ರಾಮಾಂತರದಲ್ಲಿರತಕ್ಕ ಅನೇಕ ಜನ ಹೆಣ್ಣು ಮಕ್ಕಳ ಚಿತ್ರವನ್ನು ಕಂಡಿದ್ದೇನೆ, ಕಷ್ಟಸುಖಗಳನ್ನು ನೋಡಿದ್ದೇನೆ. ಹೆಣ್ಣು ಮಕ್ಕಳು ಯಾವ ರೀತಿಯಲ್ಲಿ ಸಮಾಜದಲ್ಲಿ ಕಷ್ಟಕ್ಕೆ ಗುರಿಯಾಗಿದ್ದಾರೆ, ಸಮಾಜ ಯಾವರೀತಿ ಪರಿಸರವನ್ನು ನಿರ್ಮಾಣ ಮಾಡಿದೆ ಅವರು ಮೇಲಕ್ಕೆ ಬರುವುದಕ್ಕೆ ಸಾಧ್ಯವಾಗದಂತೆ ಅಡಚಣೆಗಳನ್ನು ಒಡ್ಡಿದ್ದಾರೆಂಬ ಬಗೆ ಒಂದು ಗಂಟೆ ಕಾಲ ಮಾತನಾಡ ಬಲ್ಲೆ. ತಾವು ಅವಕಾಶ ಕೊಟ್ಟರೆ ಹೆಣ್ಣು ಮಕ್ಕಳ ಸಮಸ್ಯೆಯನ್ನು ಹೇಳುತ್ತೇನೆ.

ಅಧ್ಯಕ್ಷರು.—ವೇಳೆ ಇಲ್ಲ.

ಶ್ರೀಮತಿ ಎಸ್. ಪ್ರಮೀಳಾ.—ಕಾಮಾಲೆ ಇಲ್ಲ. ನಮ್ಮನ್ನು ನೋಡತಕ್ಕ ದೃಷ್ಟಿಯನ್ನು ಬದಲಾವಣೆ ಮಾಡಿಕೊಳ್ಳಿ. ನಿಮ್ಮ ಮನೆಯಲ್ಲಿ ತಾಯಿ, ಅಕ್ಕತಂಗಿಯರನ್ನು ಯಾವ ಭಾವನೆಯಿಂದ ನೋಡುತ್ತೀರೋ ಹಾಗೆ ಸಮಾಜದಲ್ಲಿರುವ ಹೆಣ್ಣು ಮಕ್ಕಳನ್ನು ನೋಡಿ. ನಿಮ್ಮ ದೃಷ್ಟಿಕೋನ ಬದಲಾಗದಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತೆ. ದಯವಿಟ್ಟು ನಿಮ್ಮ ದೃಷ್ಟಿಕೋನವನ್ನು ಬದಲಾಯಿಸಿ ಕೊಳ್ಳಿ ಎನ್ನುವ ಉದ್ದೇಶದಿಂದ ಹೇಳುತ್ತಿದ್ದೇನೆಯೇ ಹೊರತು, ಬೇರೆ ಉದ್ದೇಶದಿಂದಲ್ಲ.

ಗ್ರಾಮಾಂತರ ಪ್ರದೇಶದಲ್ಲಿರುವ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಾಗಿ ನಾನಾ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಗ್ರಾಮಾಂತರ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವ ಯೋಜನೆಯನ್ನು ಹಾಕಿದ್ದೀರಿ. ಗ್ರಾಮೀಣ ಮಹಿಳೆಯರನ್ನು ಮೇಲೆ ತರುವುದಕ್ಕೆ, ಅವರ ಕಷ್ಟಸುಖಗಳನ್ನು ದೂರ ಮಾಡುವುದಕ್ಕೆ ಗ್ರಾಮೀಣ ಮಹಿಳೆಯರೂ ಕೂಡ ಮನುಷ್ಯರಾಗಿ ಬಾಳುವೆ ಮಾಡುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ನನಗೆ ತಿಳಿದಿರುವ ಹಾಗೆ ಕರ್ನಾಟಕದಲ್ಲಿರುವ ವಿಧವೆಯರಿಗಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ. ಅದೂ ಕೂಡ ಪೂರ್ತಿ ಹಣವನ್ನು ನಿಮ್ಮ ಇಲಾಖೆಯವರು ಒದಗಿಸಿಕೊಟ್ಟಿಲ್ಲ. ಗ್ರಾಮೀಣ ಅಭಿವೃದ್ಧಿ ಸಚಿವರಾದ ರಾಮಯ್ಯನವರಿಂದ ಅರ್ಧ ಭಾಗದ ಹಣವನ್ನು ತೆಗೆದುಕೊಂಡು ಮಹಿಳೆಯರನ್ನು ಮೇಲಕ್ಕೆ ತರುವುದಕ್ಕೆ ಉಪಯೋಗ ಮಾಡಬೇಕೆಂದು ಹೇಳುತ್ತೇನೆ. ಕಾರ್ಲ್ಸ್ ಮಾರ್ಕ್ಸ್ ಹೇಳಿದಂತೆ ಜರ್ಮನ್ ಡೆಮಾಕ್ರೆಟಿಕ್ ರಿಪಬ್ಲಿಕ್ ದೇಶದಲ್ಲಿ. ದೇಶದ ಇತಿಹಾಸವನ್ನು ಆಗುಹೋಗುಗಳನ್ನು ಮೇಲಕ್ಕೆ ತರಬೇಕಾದರೆ, ಆ ದೇಶದ ಮಹಿಳೆಯರ ಸ್ಥಾನಮಾನಗಳು ಮೇಲಕ್ಕೆ ಬರಬೇಕೆಂದು, ನಾನಾ ವಿಧವಾದ ಅಭಿವೃದ್ಧಿ ಯೋಜನೆಗಳು ಇದ್ದರೂ ಕೂಡ ಜರ್ಮನ್ ದೇಶದಲ್ಲಿ ಸುಮಾರು ೪೮ ಪರ್ಸೆಂಟ್ ಮಹಿಳೆಯರು ವಿವಿಧ ಉದ್ಯೋಗ ರಂಗಗಳಲ್ಲಿ, ದುಡಿಯುತ್ತಿದ್ದರು. ಇನ್ನು ಎರಡು ಪರ್ಸೆಂಟ್ ಮಹಿಳೆಯರನ್ನು ೧೦ ವರ್ಷದ ಯೋಜನೆಯಲ್ಲಿ ನಾನಾ ರಂಗಗಳಲ್ಲಿ ಸ್ಕೂಲುಗಳಲ್ಲಿ, ಕಾಲೇಜುಗಳಲ್ಲಿ ಇಂಜನಿಯರಿಂಗ್ ಕಾಲೇಜುಗಳಲ್ಲಿ ದುಡಿಯುವಂತ ವ್ಯವಸ್ಥೆ ಮಾಡಿ ಇಡೀ ಪ್ರಪಂಚದಲ್ಲಿಯೇ ಜರ್ಮನ್ ದೇಶ ಇವತ್ತು ಮುಂದುವರಿದಂತ ದೇಶವಾಗಿದೆ. ಕರ್ನಾಟಕ ರಾಜ್ಯದಲ್ಲಿ ೧.೩ ಪರ್ಸೆಂಟ್ ಇರುವಾಗ ಈ

ದೇಶದಲ್ಲಿ ಹೆಣ್ಣು ಮಕ್ಕಳು ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಮಹಿಳಾ ಶಕ್ತಿಯನ್ನು ಉಪಯೋಗ ಮಾಡಿಕೊಳ್ಳುವಂತ ವ್ಯವಸ್ಥೆಯನ್ನು ತಾವು ಮಾಡಿಲ್ಲ. ಅವರನ್ನು ಮನೆಯಲ್ಲಿಯೇ ಇಡುವಂತ ವ್ಯವಸ್ಥೆಯನ್ನು ತೊಡೆದು ಹಾಕಿ, ಈ ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ಮಹಿಳೆಯರು ಭಾಗವಹಿಸು ವಂತೆ ಮಾಡಿ ಎಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ನಮ್ಮ ಹೆಣ್ಣು ಮಕ್ಕಳ ಪರಿಸ್ಥಿತಿ ಹೇಗಿದೆ ಅಂದರೆ, ಗಂಡನಾದವನು ಸತ್ತರೆ, ತಲೆ ಬೋಳಿಸಿಕೊಳ್ಳಬೇಕು, ಕುಂಕುಮ ಇಡುವಂತಿಲ್ಲ, ಸ್ವಾಮಿ, ಹೆಣ್ಣು ಮಕ್ಕಳು ಸಮಾಜದಲ್ಲಿ ಮನುಷ್ಯರಾಗಿ ಬಾಳುವುದಕ್ಕೆ ಅವಕಾಶ ಕೊಡಿ, ಇಂಥ ಪದ್ಧತಿ ಒಳ್ಳೆಯ ದಲ್ಲ, ಇದನ್ನು ತೆಗೆದುಹಾಕುವುದಕ್ಕೆ ಕಾನೂನು ತರಬೇಕೆಂದು ಹೇಳುತ್ತೇನೆ. ಇನ್ನು ಅಲ್ಪಸಂಖ್ಯಾತ ಹೆಣ್ಣು ಮಕ್ಕಳ ಬಗ್ಗೆ ಹೇಳುವುದಾದರೆ, ಅವರಲ್ಲಿ "ತಲಾಕ್" ಎಂದು ತಂದಿದ್ದಾರೆ. ಘೋಷಾ ಪದ್ಧತಿ ಇದೆ. ಸಮಾಜದಲ್ಲಿ ಯಾರ ಕಣ್ಣಿಗೂ ಕಾಣದಂತೆ ಹೆಣ್ಣು ಮಕ್ಕಳನ್ನು ಮನೆಯಲ್ಲಿಡುವಂತ ಹೀನ ಪದ್ಧತಿ, ಅನಿಷ್ಟ ಪದ್ಧತಿಯನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಮಹಿಳಯರೆಲ್ಲರೂ ಹೋರಾಡ ಬೇಕಾದ ಕಾಲ ಬರುತ್ತದೆ.

SRI K. BHASKAR NAIDU.—I rise to a point of order She is going beyond the scope and talking on religious customs of a particular community. It may provoke......

MR. SPEAKER.—No point of order. She is only making an appeal to them.

SRI K. BHASKAR NAIDU.—She can make it outside.

ಶ್ರೀ ಎಂ. ಚಂದ್ರಶೇಖರ್.—ಮಹಿಳೆಯರು ಮೇಲಕ್ಕೆ ಬರುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ.

SRI K. BHASKAR NAIDU.—Basically she is trying to attack religion.

MR. SPEAKER.—Nothing prevents her from attacking. ಅವರು ತಮ್ಮ ಅಭಿಪ್ರಾಯ ಹೇಳಿದರೆ ತಪ್ಪಾಗುವುದಿಲ್ಲ.

SRI. B. V. KAKKILAYA.—She is only saying about the customs which are in vogue in this country in the name of religion. There is no attacking

ಶ್ರೀಮತಿ ಎಸ್. ಪ್ರಮೀಳಾ.—ಅಂಥ ಪದ್ಧತಿಗಳನ್ನು ತೆಗೆದುಹಾಕುವುದಕ್ಕೆ ಈಗಲೂ ಹೋರಾಟ ಮಾಡೋಣ. ಅನೂಚಾನವಾಗಿ ನಡೆದುಕೊಂಡು ಬಂದಂತ ಸತಿ ಸಹಗಮನ ಪದ್ಧತಿಯನ್ನು ತೆಗೆದು ಹಾಕುವುದಕ್ಕಾಗಿ ಮಹನೀಯರು ಮಹಿಳೆಯರು ಪ್ರಯತ್ನ ಮಾಡಲಿಲ್ಲವೆ ?

ಶ್ರೀ ಎಂ. ಸಿ. ನಾಣಯ್ಯ.—ಸತಿ ಸಹಗಮನ ಪದ್ಧತಿಯನ್ನು ತೆಗೆದುಹಾಕಿದಂತ ರಾಜರಾಂ ಮೋಹನರಾಯರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀಮತಿ ಎಸ್. ಪ್ರಮೀಳಾ.—ನೀವು ರಾಜರಾಂ ಮೋಹನರಾಯರಂತೆ ಆಗುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ.—ನೀವು ಕೂಡ ಅಂದಿನ ಕಾಲದ ಸ್ತ್ರೀಯರಾಗಿ.

ಶ್ರೀಮತಿ ಎಸ್. ಪ್ರಮೀಳಾ.—ನಾವು ಇರುವುದಕ್ಕೆ ಪರಿಸರವನ್ನು ನಿರ್ಮಾಣ ಮಾಡಿ. ಸಮಾಜ ದಲ್ಲಿರುವಂತ ಕೆಟ್ಟ ಪದ್ಧತಿಗಳನ್ನು ತೆಗೆದುಹಾಕಿ.

ಶ್ರೀ ಎಂ. ಶೀರ್ನಾಳಿ ಚಂದ್ರಶೇಖರ್.—ಸರ್ಕಾರ ನೀವೇ ನಡೆಸಿಕೊಂಡು ಹೋಗಿ, ನಾವು ಅಡಿಗೆ ಮಾಡುವುದಕ್ಕೆ ಹೋಗುತ್ತೇವೆ.

ಕುಮಾರಿ ಪ್ರಮೀಳ.—ರಾಜರಾಮ ಮೋಹನ ರಾಯ್ ಮಾಡಿದ್ದಕ್ಕೆ ಇವೊತ್ತು ಒಳ್ಳೆಯದಾಗಿದೆ. ನಾನು ಕೇಳುತ್ತಿರುವುದು ಸಮಾಜದಲ್ಲಿರುವವರು ಅವರ ತರಹ ಆಗಿ ಎಂದು ಕೇಳುತ್ತಿದ್ದೇನೆ.

ಈ ಅನಿಷ್ಟ ಪದ್ಧತಿಗಳನ್ನು ದೂರ ತೆಗೆದುಹಾಕಿ ಅಂಥ ಕೇಳುತ್ತಿದ್ದೇನೆ. ಅದು ಆದರೆ ಸಮಾಜ ಮುಂದೆ ಬರಲಿಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ನಾನು ಸಿಟಿ ಬಸ್‌ನಲ್ಲಿ ಹೆಣ್ಣುಮಕ್ಕಳು ಪ್ರಯಾಣ ಮಾಡತಕ್ಕುದ್ದು ನೋಡುತ್ತಿದ್ದೇನೆ.

ಶ್ರೀ ಎಸ್. ಎಮ್. ಶೀರನಾಳಿ ಚಂದ್ರಶೇಖರ್.—ತಲೆ ಬೋಳಿಸುವ ಪದ್ಧತಿ ಇವೊತ್ತು ಇಲ್ಲ.

ಶ್ರೀ ಜಿ. ರಾಮೇಗೌಡ.—ಅವರು ಚಾಮರಾಜಪೇಟೆ ಕಾನ್‌ಸ್ಟಿಟ್ಯುಯೆನ್ಸಿಯಿಂದ ಬಂದಿರುವವರು ಬೆಳಿಗ್ಗೆ ಎದ್ದರೆ, ಬೋಳುತಲೆಯುವರು ಎದುರುಗಡೆ ಬರುತ್ತಿರುತ್ತಾರೆ ಅದಕ್ಕೋಸ್ಕರ ಹೇಳುತ್ತಿದ್ದಾರೆ.

ಕುಮಾರಿ ಪ್ರಮಿಳಾ.—ಬೆಂಗಳೂರು ಸಿಟಿ ಬಸ್‌ನಲ್ಲಿ ಪ್ರತಿದಿವಸ ಹೆಣ್ಣುಮಕ್ಕಳು ಪ್ರಯಾಣ ಮಾಡತಕ್ಕುದ್ದು ನೋಡುತ್ತಿದ್ದೇವೆ. ಇವೊತ್ತು ಸಿವಿಲ್‌ಟಿ ಅಂಥ ಏನಿತ್ತು ಹೆಣ್ಣುಮಕ್ಕಳು ಬಂದರೆ ಅವರಿಗೆ ದಾರಿ ಕೊಟ್ಟು, ಸ್ಥಳ ಕೊಟ್ಟು ಕುಳಿತುಕೊಳ್ಳಿ ಅಂಥ ಏನು ಹೇಳುತ್ತಿದ್ದರು ; ಆ ಒಂದು ಪ್ರವೃತ್ತಿ ಎಲ್ಲಿಯವರೆಗೆ ಗಂಡು ಮಕ್ಕಳಲ್ಲಿ ಬೆಳಸಿಕೊಂಡು ಬಂದಿದ್ದರು ಅಲ್ಲಿಯವರೆಗೆ ಸರಿಯಾಗಿ ನಡೆದುಕೊಂಡು ಬರುತ್ತಿತ್ತು. ಆದರೆ ಆ ಪ್ರವೃತ್ತಿ ಇವೊತ್ತು ದೂರ ಹೋಗಿದೆ. ಹೆಣ್ಣುಮಕ್ಕಳು ಸಿಟಿ ಬಸ್‌ನಲ್ಲಿ ಹೋಗುವಾಗ ಅಕಸ್ಮಾತ್ ಸಡನ್ ಬ್ರೇಕ್ ಹಾಕಿದರೆ......

ಅಧ್ಯಕ್ಷರು.—ಅದಕ್ಕೆ ಮಂತ್ರಿಗಳು ಏನು ಮಾಡುತ್ತಾರೆ. ಮಾನ್ಯ ಸದಸ್ಯರು ಡಿಮ್ಯಾಂಡ್ ಬಗ್ಗೆ ಮಾತನಾಡಬೇಕು.

ಕುಮಾರಿ ಪ್ರಮಿಳಾ.—ಹೆಣ್ಣುಮಕ್ಕಳು ಸಿಟಿ ಬಸ್‌ನಲ್ಲಿ ಪ್ರಯಾಣ ಮಾಡತಕ್ಕ ಸಂದರ್ಭದಲ್ಲಿ ಸಡನ್ ಆಗಿ ಬ್ರೇಕ್ ಹಾಕಿದರೆ, ಅವರು ಬೀಳತಕ್ಕದ್ದನ್ನು ನೋಡಿ ಆನಂದಪಡತಕ್ಕಂಥ ಪ್ರವಾಸಿಗರನ್ನು ನಾವು ನೋಡುತ್ತಿದ್ದೇವೆ. ಇದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಿಟಿ ಬಸ್ಸುಗಳಲ್ಲಿ ಪ್ರಯಾಣ ಮಾಡತಕ್ಕ ಹೆಣ್ಣುಮಕ್ಕಳು, ವಿದ್ಯಾರ್ಥಿನಿಯರು ನಿಂತು ಹೋಗತಕ್ಕದ್ದನ್ನು ತಪ್ಪಿಸಲಿಕ್ಕೆ ಅವರಿಗೆ ಪ್ರತ್ಯೇಕವಾದ ಬಸ್ಸುಗಳನ್ನು ಕೊಡಬೇಕು. ಇಲ್ಲದೇ ಇದ್ದರೆ, ಕೇರಳಾದಲ್ಲಿ ಮತ್ತಿತರ ಕಡೆಗಳಲ್ಲಿ ಇರುವಂತೆ ಮುಂದುಗಡೆ ಸೀಟ್ ರಿಸರ್ವೇಷನ್ ಮಾಡತಕ್ಕದ್ದು ಮಾಡಬೇಕು. ಮಹಿಳೆಯ ಕಲ್ಯಾಣ ಅವರ ಉದ್ಧಾರವಾಗಬೇಕಾದರೆ ಇವೆಲ್ಲಾ ಮಾಡಬೇಕಾಗುತ್ತದೆ. ಇನ್ನು ಫೈನಾಶಿಯಲ್ ಕಾರ್ಪೊರೇಷನ್ ಮಾಡುತ್ತೇವೆಂದು ಹೋದಸಾರಿ ಹೇಳಿದ್ದೀರಿ. ಅದು ಇನ್ನೂ ಬರುತ್ತಿದೆ. ಇವೊತ್ತು ಹೆಣ್ಣುಮಕ್ಕಳು ಲೋನ್ ತೆಗೆದುಕೊಳ್ಳಬೇಕೆಂದರೆ ಸಿಕ್ಕುತ್ತಿಲ್ಲ ಮಹಿಳೆಯ ಕಲ್ಯಾಣದ ಬಗ್ಗೆ ಮಹಿಳೆಯರಿಗೆ ಕಾರ್ಪೊರೇಷನ್ ಮಾಡುತ್ತೇವೆಂದು ಹೇಳಿದ್ದಿರಿ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇದಕ್ಕೆ ಈಗಾಗಲೇ ಅಡಚಣೆಯಾಗಿದೆಯೆಂದು ತಿಳಿದುಬಂದಿದೆ ಈ ಸಾರಿಯಾದರೂ ತಾವು ವುಮೆನ್ ಫೈನಾನಿಯಲ್ ಕಾರ್ಪೊರೇಷನ್ ಎಸ್ಟಾಬ್ಲಿಷ್ ಮಾಡಿ ಹೆಣ್ಣುಮಕ್ಕಳಿಗೆ ಲೋನ್ ಸಿಕ್ಕಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಅಲ್ಲಿ ವುಮೆನ್ ಎಂಟರ್‌ಪ್ರುನ್ಯರ್ಸ್ ಬರಬೇಕು ಅಂಥ ಹೇಳಿ ಶ್ರೀಮತಿ ಇಂದಿರಾಗಾಂಧಿ ಅಲ್ಲಿ ಭಾಷಣ ಮಾಡಿದ್ದಾರೆ. ಹೆಣ್ಣುಮಕ್ಕಳು ಮೇಲೆ ಮೇಲೆ ಬರಬೇಕೆಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಇಂಡಸ್ಟ್ರಿಗಳು ಮುಂದೆ ಬರಲಿಕ್ಕೆ ಹೆಣ್ಣುಮಕ್ಕಳ ಕೈಯಲ್ಲಿ ಎಂಟರ್‌ಪ್ರಿನ್ಯೂರ್ಸ್ ತೆಗೆದುಕೊಳ್ಳಲಿಕ್ಕೆ ಅವಕಾಶ ಮಾಡಿಕೊಡಬೇಕು. ಕರ್ನಾಟಕ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆಯಲ್ಲ ಅದೇ ಪ್ರಕಾರ ವುಮೆನ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿ. ಆ ಒಂದು ಡಿಪಾರ್ಟ್‌ಮೆಂಟ್ ಕೂಡ ತಾವು ಮಾಡಬೇಕು. ಇನ್ನು ಮದ್ರಾಸ್‌ನಲ್ಲಿ ಮಹಿಳೆಯರಿಗಾಗಿಯೇ ಒಂದು ಫೈನ್ ಆರ್ಟ್ಸ್ ಕಾಲೇಜು ತೆಗೆದಿದ್ದಾರೆ. ಮಹಿಳೆಯಲ್ಲಿರತಕ್ಕ ಸೂಕ್ತವಾದ ಕಲೆ, ಸಂಸ್ಕೃತಿ ಇವೆಲ್ಲಾ ಬೆಳಕಿಗೆ ತರಲಿಕ್ಕೆ ತಂದಿದ್ದಾರೆ. ಅಲ್ಲಿರತಕ್ಕ ಮಾಡರನ್ ತೆಗೆದುಕೊಂಡು ಇಲ್ಲಿಯೂ ಕೂಡ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಎಮ್. ಶೀರನಾಳಿ ಚಂದ್ರಶೇಖರ್,—ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಮಿಳಾ ಅವರು ಮೂರು ವರ್ಷದಿಂದ ಮಾತನಾಡುವುದನ್ನು ನೋಡಿದರೆ ಚಾಮರಾಜಪೇಟೆಯಲ್ಲಿ ಗಂಡಸರು ಯಾರು ಇವರಿಗೆ ಓಟೇ ಕೊಟ್ಟಿಲ್ಲವೇನೋ ಅಂಥ ನನಗೆ ಅನುಮಾನವಾಗುತ್ತಿದೆ.

ಕುಮಾರಿ ಪ್ರಮಿಳಾ.—ಇನ್ನು ನಿಮ್ಮ ಸೋಷಯಲ್ ವೆಲ್‌ಫೇರ್ ಬೋರ್ಡ್ ಏನಿದೆ ಅದರಲ್ಲಿರತಕ್ಕವರಿಗೆ ಯಾರಿಗೂ ಕೂಡ ಸಾಧನ ಸಲಕರಣೆಗಳು ದೊರಕುತ್ತಿಲ್ಲ. ಮಹಿಳೆಯರು ಅಲ್ಲಿ ಹೋದವರಿಗೆ

ಬಹಳ ಕಷ್ಟವಾಗುತ್ತಿದೆ. ಅಲ್ಲಿ ಬರತಕ್ಕ ಹಣ ಅವರಿಗೆ ಬರುತ್ತಿಲ್ಲ. ಇನ್ನು ನಿಮ್ಮ ೯ನೇ ಪುಟದಲ್ಲಿ ೮೭ ಸಂಸ್ಥೆಗಳು ಇದೆ, ಅದರಲ್ಲಿ ೧೪೬ ಡಿಸ್ಟ್ರಿಕ್ಟ್ ಹೋಮ್ಸ್ ಇದೆ, ೩೫ ಲಕ್ಷ ಅಮೌಂಟ್ ಅವರಿಗೆ ಕೊಟ್ಟಿದ್ದೀರಿ. ಇದರಲ್ಲಿ ೭ ಸೊಸೈಟಿಗಳು ಮಾತ್ರ ಎಸ್.ಸಿ. ಎಸ್.ಟಿ.ಗೆ ಕೊಟ್ಟಿದ್ದೀರಿ ಅವರಿಗೆ ಕೊಟ್ಟಿರತಕ್ಕ ಹಣ ಕೇವಲ ೮.೦೪ ಪರ್‌ಸೆಂಟ್ ಬರುತ್ತದೆ. ೧೫೬ ಹೋಮ್ಸ್ ಇದೆ ಅದರಲ್ಲಿ ೧೪ ಹೋಮ್ಸ್ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಕೊಟ್ಟಿದ್ದೀರಿ. ಇವರಿಗೆ ಕೊಟ್ಟಿರತಕ್ಕ ಹಣ ಕೇವಲ ೯.೫೭ ಪರ್ ಸೆಂಟ್ ಬರುತ್ತದೆ ವುಮೆನ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಆದರೂ ಕೂಡ ಹರಿಜನರಿಗೆ ಕೊಟ್ಟಿರತಕ್ಕ ಹಣ ಅವರ ಡಿಮ್ಯಾಂಡ್ ೧೮ ಪರ್‌ಸೆಂಟ್ ಆದರೂ ಬರಲಿಕ್ಕೆ ತಾವು ಪ್ರಯತ್ನಪಡಿ. ಈ ಸೊಸೈಟಿಗಳಿಗೆ ಹೆಚ್ಚಾಗಿ ಹಣ ವಿಲೇವಾರಿ ಆಗತಕ್ಕ ಸಂದರ್ಭದಲ್ಲಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ೩೫ ಲಕ್ಷ ರೂಪಾಯಿ ಹಣದಲ್ಲಿ ಕೇವಲ ೧೦.೦೨ ಪರ್‌ಸೆಂಟ್ ಬರುತ್ತದೆ. ಆದ್ದರಿಂದ, ನಾನು ಕೇಳಿಕೊಳ್ಳುವುದು ಇಷ್ಟೆ. ಈಗ ಒಂದು ಲಕ್ಷ ರೂಪಾಯಿ ಬಿಲ್ಡಿಂಗ್ ಕಟ್ಟಲಿಕ್ಕೆ ಹರಿಜನರಿಗೆ ಕೊಡುತ್ತೀರೆಂದು ಕೇಳಪಟ್ಟಿದ್ದೇನೆ. ಆದ್ದರಿಂದ, ಈ ೧೪ ಎಸ್.ಸಿ. ಮತ್ತು ಎಸ್.ಟಿ. ಹೋಮ್ ಏನಿವೆ, ಅವೆಲ್ಲಕ್ಕೂ ಒಂದೊಂದು ಲಕ್ಷ ರೂಪಾಯಿನಂತೆ ಕೊಟ್ಟು ಬಿಲ್ಡಿಂಗ್ ಕಟ್ಟಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ಡೆಸ್ಟಿಟ್ಯೂಟ್ ಹೋಮ್ಸ್ ಬೇಕಾದಷ್ಟು ತೆರೆದಿದ್ದೀರಿ. ಮೊದಲೇ ಅನಾಥೋ ದೈವ ರಕ್ಷತಾ ಅಂಥ ಹೇಳಿ, ನೀವು ತೆರೆದಿದ್ದೀರಿ ಅಂಥ ಹೇಳಿ ಅನಾಥ ಹೆಣ್ಣುಮಕ್ಕಳು ಅಲ್ಲಿ ಸೇರಿಕೊಂಡಿದ್ದಾರೆ. ಅಲ್ಲಿಗೆ ಹಣ ಕೊಡತಕ್ಕುದ್ದು, ನೀವು ಇನ್ಸ್‌ಪೆಕ್ಷನ್ ಮಾಡಿದನಂತರ ಕೊಡುತ್ತಾರೆ, ಇನ್ಸ್‌ಪೆಕ್ಷನ್ ಮಾಡಿ ೬ ತಿಂಗಳ ನಂತರ ಕೊಡುತ್ತಾರೆ. ಈ ೬ ತಿಂಗಳು ಹಣ ದೊರಕದೇ ಇದ್ದ ಸಂದರ್ಭದಲ್ಲಿ ಆ ಹೆಣ್ಣುಮಕ್ಕಳ ಕಷ್ಟಸ್ಥಿತಿ ನೋಡಲಿಕ್ಕೆ ಆಗುವುದಿಲ್ಲ. ಆ ಹೋಮ್ಸ್ ನಡೆಸತಕ್ಕವರ ಕಷ್ಟಸ್ಥಿತಿ ನೋಡಲಿಕ್ಕೆ ಆಗುವುದಿಲ್ಲ. ಆದ್ದರಿಂದ, ಈ ಹಣವನ್ನು ಮೊದಲು ಅವರಿಗೆ ಕೊಟ್ಟು ಅವರು ಬದುಕಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಸರ್ವೋದಯ ವಿದ್ಯಾಸಂಸ್ಥೆ ಇದೆ, ಎರಡು ವರ್ಷದಿಂದ ಅದಕ್ಕೆ ಹಣ ರಿಲೀಸ್ ಮಾಡಿಲ್ಲ. ಅದು ಷೆಡ್ಯೂಲ್ ಟ್ರೈಬ್ಸ್ ಅವರು ನಡೆಸತಕ್ಕ ಸಂಸ್ಥೆ ಕಾರಣ ಏನೂ ಅಂಥ ಗೊತ್ತಾಗಲಿಲ್ಲ. ಆ ಸಂಸ್ಥೆ ಉಳಿಯಬೇಕೋ, ಬೆಳೆಯಬೇಕೋ, ಹೇಗೆ ಮುಂದೆ ಬರಬೇಕು ಅರ್ಥವಾಗುತ್ತಿಲ್ಲ. ಅಂಥ ಸಂಸ್ಥೆಗಳಿಗೆ ಹಣ ಕೊಡುವಂತೆ ಮಾಡಬೇಕೆಂದು ಹೇಳಿ. ಇಷ್ಟು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೂ ಮತ್ತು ನನ್ನ ಮಾತನ್ನು ಸ್ವಲ್ಪ ಹೊತ್ತಾದರೂ ಸೌಜನ್ಯದಿಂದ ಕೇಳಿದಂಥ ಎಲ್ಲ ಸದಸ್ಯರಿಗೂ ವಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ, ಪ್ರಭಾಕರ್ (ನೆಲಮಂಗಲ).—ಸನ್ಮಾನ್ಯ ಅಧ್ಯಕ್ಷರೇ ಈ ಸಭೆಯ ಮುಂದಿರುವ ಸಮಾಜ ಕಲ್ಯಾಣ ಇಲಾಖೆ ಹಾಗೂ ಮಕ್ಕಳ ಮತ್ತು ಮಹಿಳೆಯರ ಪುರೋಭಿವೃದ್ಧಿಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಕೆಲವೊಂದು ಸಲಹೆಗಳನ್ನು ಸರ್ಕಾರದ ಮುಂದೆ ಇಡಲು ಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ಮಕ್ಕಳ ಮತ್ತು ಮಹಿಳೆಯರ ಅಭಿವೃದ್ಧಿಗೆ ಸಂಬಂಧಪಟ್ಟ ಖಾತೆಗೆ ಇಟ್ಟಿರತಕ್ಕ ಹಣ ಮತ್ತು ದೇಶದಲ್ಲಿರತಕ್ಕ ಮಕ್ಕಳ ಕಲ್ಯಾಣ ಕಾರ್ಯಕ್ರಮ ಯೋಜನೆಗಳಿಗೆ ಇಟ್ಟಿರತಕ್ಕ ಹಣ ಏನೇನು ಸಾಲದು ಅಂಥ ಭಾವನೆ ನನ್ನ ಮನಸ್ಸಿನಲ್ಲಿದೆ. ಮಕ್ಕಳ ಪುರೋಭಿವೃದ್ಧಿ ಮತ್ತು ಮಹಿಳೆಯರ ಶ್ರೇಯೋಭಿವೃದ್ಧಿ ಕೇಂದ್ರಗಳು ಸಮಾಜ ಕಲ್ಯಾಣ ಇಲಾಖೆಯಲ್ಲಿ ಒಂದು ಕಡೆ ಒಂದು ರೂಪದಲ್ಲಿದೆ. ಮತ್ತೆ ಈ ಮಕ್ಕಳ ಕಲ್ಯಾಣ ಕೇಂದ್ರಗಳಲ್ಲಿ ಇದೇ ಕಾರ್ಯಕ್ರಮಗಳು ಇದೆ. ಈ ಎರಡನ್ನು ಹೋಲಿಸಿದರೆ ಒಂದು ಕಡೆ ಆ ಇಲಾಖೆಯಲ್ಲಿ ಇದ್ದಂತ ಈ ಕಾರ್ಯಕ್ರಮಗಳು ಬಹಳ ದಿವಸದಿಂದ ನಡೆದುಕೊಂಡು ಬರುತ್ತಿವೆ. ಇತ್ತೀಚೆಗೆ ಈ ಮಕ್ಕಳ ಮತ್ತು ಮಹಿಳೆಯರ ಕಲ್ಯಾಣ ಕೇಂದ್ರದ ಹುಟ್ಟುವಳಿ ಆದಮೇಲೆ ಮಹತ್ತರ ಕಾರ್ಯಗಳು ನಡೆದುಕೊಂಡು ಬರುತ್ತಿವೆ. ಮಕ್ಕಳ ವಿದ್ಯಾಭ್ಯಾಸ ಮಟ್ಟದಲ್ಲಿ ಇವು ಹೊಂದಾಣಿಕೆಯಿಂದ ಬೆಳೆಯಬೇಕಾದರೆ ಹರಿಜನ ಮತ್ತು ಗಿರಿಜನ ಮಕ್ಕಳನ್ನು ಹಿಂದುಳಿದ ವರ್ಗದ ಮಕ್ಕಳನ್ನು ಬೇರೆ ರೂಪದಲ್ಲಿ ಇಡುವಂತಾದ್ದು ಸರಿಯಲ್ಲ ಅಂಥ ಅನಿಸುತ್ತದೆ. ಮಕ್ಕಳ ಕಲ್ಯಾಣ ಕೇಂದ್ರಗಳ ಏನು ಒಂದು ಬೇರೆ ಇಲಾಖೆ ಇತ್ತು. ಅವುಗಳಲ್ಲಿ ಏನು ಮಕ್ಕಳನ್ನು ಬೆಳೆಸುತ್ತಿದ್ದಾರೆ ಅಲ್ಲಿ ಹರಿಜನರ ಮಕ್ಕಳ ಹೆಚ್ಚು ಇಲ್ಲ ಅಂಥ ತಿಳಿದುಕೊಂಡಿದ್ದೇನೆ. ಅಲ್ಲೊಂದು ಇಲ್ಲೊಂದು ಇದೆ ಅಂದರೆ ಅಲ್ಲಿ ಹೆಚ್ಚು ಹೆಚ್ಚು ಸೇರಿಸಲಿಕ್ಕೆ ಏನು ತೊಂದರೆ ಇದೆ ನನಗೆ ಗೊತ್ತಾಗಲಿಲ್ಲ. ಈ ಮಕ್ಕಳನ್ನು

† Indicates that remarks or speeches have not been revised by the member concerned.

ಒಟ್ಟಿಗೆ ಬೆಳೆಸುವುದರಿಂದ ಅವರಿಗೆ ಸಾಮೂಹಿಕವಾಗಿ, ಸಾಂಸ್ಕೃತಿಕವಾಗಿ ಮಕ್ಕಳು ಜೊತೆಯಲ್ಲಿ ಬೆಳೆಯುವುದಕ್ಕೆ ಆಸ್ಪದವಾಗುತ್ತದೆ. ಅದು ಕೂಡ ಇಲ್ಲದ ಹಾಗೆ ಮಾಡಿದ್ದಾರೆ ಅಂಥ ಒಂದು ಭಾವನೆ ಇದೆ. ಇದು ಹೋಗಬೇಕಾಗಿದೆ. ಒಂದುವೇಳೆ ಈ ಇಲಾಖೆಯಲ್ಲಿರತಕ್ಕ ಈ ಕೇಂದ್ರದಲ್ಲಿರತಕ್ಕ ಮಕ್ಕಳಿಗೆ ಏನು ಕಲ್ಪಿಸಿಕೊಡುತ್ತಾರೆ. ಹೇಗೆ ಮಕ್ಕಳನ್ನು ಶುಚಿಯಾಗಿ ಆರೋಗ್ಯವಾಗಿ ಬೆಳೆಸಬೇಕು ಅಂಥ ಧ್ಯೇಯ ಇದೆ. ಅದಕ್ಕನುಸಾರವಾಗಿ ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೆ ಇರತಕ್ಕ ಮಕ್ಕಳ ಮತ್ತು ಮಹಿಳಾ ಶ್ರೇಯೋಭಿವೃದ್ಧಿಗೆ ಸಂಬಂಧಪಟ್ಟ ಇಲಾಖೆ ಬೇರೆ ಇದೆ. ಇದಕ್ಕೆ ಮಹಿಳೆಯರೇ ಒಬ್ಬರು ಸಚಿವೆಯರಾಗಿದ್ದಾರೆ. ಇವರಿಂದ ಈ ಖಾತೆಗೆ ಒಳ್ಳೆಯದಾಗಬೇಕೆಂದು ಹೇಳ ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆಯವರು ನಮ್ಮ ಹರಿಜನ ಮಕ್ಕಳನ್ನು ಪ್ರತ್ಯೇಕವಾಗಿ ಇಟ್ಟು ಅವರಿಗೆ ಎಲ್ಲ ಸೌಲಭ್ಯಗಳನ್ನೂ ಕೊಟ್ಟು ಪುಷ್ಕಳವಾದ ಆಹಾರವನ್ನು ಕೊಟ್ಟು ಬೆಳೆಸುತ್ತೇವೆಂದರೆ ಸಾಧ್ಯವಿಲ್ಲ. ಸಾರ್ವಜನಿಕರ ಮಕ್ಕಳ ಜೊತೆ ನಮ್ಮ ಮಕ್ಕಳೂ ಬೆಳೆಯುವುದಕ್ಕೆ ಅವಕಾಶವನ್ನು ಉಂಟುಮಾಡಿಕೊಡಬೇಕು. ಈಗ ಏನಾಗಿದೆ ಎಂದರೆ ನಮ್ಮ ಮಕ್ಕಳು ಬೇರೆ ಮಕ್ಕಳ ಜೊತೆ ಸೇರಿಕೊಳ್ಳಲು ಹೋದರೆ ಅವರು ಇವರನ್ನು ಸೇರಿಸಿ ಕೊಳ್ಳುತ್ತಿಲ್ಲ. ಇದಕ್ಕೆ ಎರಡು ಕಾರಣಗಳು ಇವೆ. ಮೊದಲನೆಯದಾಗಿ ನಮ್ಮ ಮಕ್ಕಳಿಗೆ ಪ್ರತ್ಯೇಕ ವಾದ ಇಲಾಖೆ ಇದೆ, ನಮ್ಮ ಮಕ್ಕಳು ಬಡವರಾಗಿದ್ದು ಕೊಳಚೆ ಪ್ರದೇಶದಲ್ಲಿ ಹುಟ್ಟಿ ಬೆಳೆಯುತ್ತಿರು ತ್ತವೆ. ಕೂಲಿ ಮಾಡುವವರ ಮಕ್ಕಳಾಗಿರುತ್ತವೆ. ಕೊಳಕು ಹರುಕಲು ಬಟ್ಟೆಯನ್ನು ಹಾಕಿ ಕೊಂಡಿರುತ್ತಾರೆ. ಈ ಕಾರಣದಿಂದ ನಮ್ಮ ಮಕ್ಕಳು ಬೇರೆಯವರ ಮಕ್ಕಳ ಜೊತೆ ಸೇರುವುದಕ್ಕೆ ಮನಸ್ಸಿನಲ್ಲಿ ಜಿಗುಪ್ಸೆ ಮೂಡುತ್ತದೆ. ಇದಕ್ಕೂ ಮಿಗಿಲಾಗಿ ಈ ಮಕ್ಕಳ ತಾಯಿತಂದೆಗಳ ಮನಸ್ಸಿನಲ್ಲಿ ಏನು ಬರುತ್ತದೆ ಎಂದರೆ ನಮ್ಮ ಮಕ್ಕಳನ್ನು ಬೇರೆ ಮಕ್ಕಳ ಜೊತೆಯಲ್ಲಿ ಹೇಗೆ ಸೇರಿಸು ವುದು ಎಂದು ಭಾವನೆ ಬರುತ್ತದೆ. ಆದ್ದರಿಂದ ನಾನು ತಮಗೆ ಹೇಳುವುದೇನೆಂದರೆ, ೫೦ ಮನೆಗಳು ಇರುವ ಕಡೆಗಳಲ್ಲಿ ಮಕ್ಕಳಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತೀರೋ ಅದೇ ಸೌಲಭ್ಯಗಳನ್ನು ನಮ್ಮ ಹರಿಜನ ಮಕ್ಕಳು ಇರುವ ಕಡೆಗಳಲ್ಲೂ ಕೊಟ್ಟು ಇತರ ಮಕ್ಕಳ ಜೊತೆ ಇವರೂ ಸೇರಿ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಕೆಲವರು ಏನು ಕೇಳುತ್ತಿದ್ದಾರೆ ಎಂದರೆ ನಿಮ್ಮ ಮಕ್ಕಳಿಗಾಗಿಯೇ ಪ್ರತ್ಯೇಕವಾದ ಇಲಾಖೆಯನ್ನು ಏತಕ್ಕೆ ಮಾಡಿದ್ದೀರಿ ? ಈಗ ಕಾಲಸ್ಥಿತಿ ಮತ್ತು ಕಾಲದ ಗತಿ ಬದಲಾವಣೆ ಆಗಿರುವುದರಿಂದ ನೀವು ಏತಕ್ಕೆ ಪ್ರತ್ಯೇಕವಾಗಿ ಇರುತ್ತೀರಿ ? ಎಲ್ಲರೂ ಒಟ್ಟಿಗೆ ಬೆಳೆದು ಬಾಳೋಣ ಎಂದು ಹೇಳುತ್ತಿದ್ದಾರೆ. ಇದು ನಿಜವಾಗಿಯೂ ಎಲ್ಲರೂ ಒಪ್ಪತಕ್ಕ ಮಾತು. ಸಮಾಜದಲ್ಲಿ ಯಾವುದೇ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಂಡರೂ ಅದರಲ್ಲಿ ಎಲ್ಲ ವರ್ಗದವರಿಗೂ ಸಮಾನ ಅವಕಾಶ ಇರಬೇಕು. ಹಾಗೆ ಮಾಡಿದರೆ ಮಾತ್ರ ಎಲ್ಲರೂ ಒಂದೇ ಎಂಬ ಮನೋಭಾವನೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ನನಗೆ ತಿಳಿದಮಟ್ಟಿಗೆ ಈ ಇಲಾಖೆಯನ್ನು ಪ್ರತ್ಯೇಕವಾಗಿ ತೆರೆಯಲು ಒಂದು ಕಾರಣ ಇರಬಹುದು. ಅದು ಏನೆಂದರೆ, ಅನೇಕ ಶತಮಾನಗಳಿಂದ ಈ ಹರಿಜನ ವರ್ಗವನ್ನು ಸಮಾಜದಲ್ಲಿ ಪ್ರತ್ಯೇಕವಾಗಿ ಇಡುತ್ತಾ ಬಂದಿದ್ದ ರಿಂದ, ಇವರು ಹಿಂದುಳಿಯುವುದಕ್ಕೆ ಕಾರಣವಾಯಿತು. ಇದನ್ನು ಗಮನಿಸಿದ ಸರ್ಕಾರ ಏನಾದರೂ ಮಾಡಿ ಈ ವರ್ಗದ ಜನರನ್ನು ಮೇಲಕ್ಕೆ ಎತ್ತಬೇಕೆಂದು ಯೋಚನೆ ಮಾಡಿ ಇವರಿಗೆ ಪ್ರತ್ಯೇಕವಾದ ಇಲಾಖೆಯನ್ನು ತೆರೆಯಬೇಕಾಯಿತು. ಆದರೆ ಇವತ್ತು ಹರಿಜನ ಮಕ್ಕಳಿಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸಿಕೊಡುತ್ತೇವೆ ಅವರು ನಮ್ಮ ಜೊತೆ ಬರಬಾರದೆಂದು ಹೇಳುವುದಾದರೆ ದೊಡ್ಡ ಅಪರಾಧ ವಾಗುತ್ತದೆ, ಇದರಿಂದ ಎಲ್ಲರೂ ಸಮ್ಮಿಳಿತವಾಗಿ ಬೆಳೆಯುವುದಕ್ಕೆ ಅವಕಾಶ ಇರುವುದಿಲ್ಲ. ಆದ್ದರಿಂದ ಈ ಹರಿಜನ ಮಕ್ಕಳೂ ಕೂಡ ಎಲ್ಲ ಜನರ ಮಕ್ಕಳ ಜೊತೆಯಲ್ಲೂ ಬೆಳೆಯುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಸೂಚಿಸಬಯಸುತ್ತೇನೆ.

ಇನ್ನು ಈ ಖಾತೆಯ ಹೆಸರನ್ನು ಸೋಷಿಯಲ್ ಸೆಕ್ಯುರಿಟಿ ಅಂಡ್ ವೆಲ್‌ಫೇರ್ ಎಂದು ಹೇಳಿ ದ್ದೀರಿ. ನಾನಾದರೂ ತಮ್ಮನ್ನು ಕೇಳುತ್ತೇನೆ ಸೆಕ್ಯೂರಿಟಿ ಯಾರಿಗೆ ಬೇಕು ? ಸಮಾಜದಲ್ಲಿ ಇನ್ ಸೆಕ್ಯೂರ್ ಪರಿಸ್ಥಿತಿಯಲ್ಲಿ ಯಾರು ಇರುತ್ತಾರೆ ಅಂಥವರಿಗೆ ಸೆಕ್ಯುರಿಟಿ ಬೇಕಾಗುತ್ತದೆ ಎಂದು ಇಲ್ಲಿ ಅರ್ಥ ಬರುತ್ತದೆ. ಇವತ್ತು ಏನಾಗಿದೆ ಎಂದರೆ ಎಲ್ಲಾದರೂ ಬೆಂಕಿ ಬಿದ್ದರೆ, ಗಲಾಟೆಗಳಾದರೆ, ಬಡವರ ಮನೆಯಲ್ಲಿ ಕುಡಿಯುವ ಚೆಂಬು ಗಂಗಳವನ್ನು ಯಾರಾದರೂ ಕದ್ದುಕೊಂಡು ಹೋದರೆ

ಆದರ ಬಗ್ಗೆ ಪೋಲೀಸ್‌ಗೆ ಕಂಪ್ಲೈಟ್ ಕೊಟ್ಟರೆ ಆ ಕೇಸು ರಿಜಿಸ್ಟರ್ ಆಗದೆ ಕೊಟ್ಟ ಕಂಪ್ಲೈಂಟ್ ನಾಪತ್ತೆಯಾಗುತ್ತಿದ್ದು ಪೋಲೀಸ್‌ಗೆ ಬೆಲೆಯೇ ಇಲ್ಲದಂತಾಗಿ ಒಂದು ಸ್ಪೆಷಲ್ ಪೋಲೀಸ್‌ನ್ನು ಇಡಿ ಎಂದು ಹೇಳುವ ಪರಿಸ್ಥಿತಿ ಬಂದಿದೆ. ಇದು ನಿಜವಾಗಿಯೂ ಶುದ್ಧ ನಾಚಿಕೆಗೇಡು. ಸಮಾಜದಲ್ಲಿ ಅವರಿಗೆ ಕೂಳು, ಬಾಳು ಎಂದರೆ ವಾಸಕ್ಕೆ ಮನೆ, ವಿದ್ಯೆ ಇವುಗಳ ಜೊತೆಗೆ ಸಮಾಜದಲ್ಲಿ ಪುರಸ್ಕಾರ, ಸಮ್ಮಿಳನ ಜೀವನಕ್ಕೆ ಅವಕಾಶ ಇಲ್ಲವಾಗಿದೆ. ಸುಲಭವಾಗಿ ಇವರನ್ನು ಸಮಾಜದಲ್ಲಿ ತಿರಸ್ಕಾರ ಮಾಡೋಣ, ಅವರ ಸ್ವತ್ತನ್ನು ಅಪಹರಿಸೋಣ ಅವರನ್ನು ಊರಿನಿಂದ ಆಚೆ ಇಡೋಣ ಅವರಿಗೆ ಕೊಡತಕ್ಕ ಕೆಲಸವನ್ನು ಖೋತಾ ಮಾಡೋಣವೆಂದು ಮಾಡುವುದು ಸರಿಯಲ್ಲ. ರಾಜ್ಯಾಂಗ ದಲ್ಲಿ ನಮಗೆ ೧೮ ಪರ್ಸೆಂಟ್ ಏನು ಅವಕಾಶವನ್ನು ಕೊಟ್ಟಿದ್ದಾರೆ ಅದನ್ನು ಸರಿಯಾಗಿ ಕೊಡದೆ ಒಬ್ಬರ ಮೇಲೊಬ್ಬರು ತೋರಿಸಿಕೊಂಡು ಕೊಡಬೇಕಾದ ಪರ್ಸೆಂಟೇಜ್‌ನ್ನು ತಪ್ಪಿಸುವುದು ಸರಿಯಲ್ಲ. ಇದು ನಮಗೆ ಸೆಕ್ಯೂರಿಟಿ ಇಲ್ಲವೆಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇದು ಸೆಕ್ಯೂರಿಟಿ ಅಂದರೆ ಮೆಸರ್ಸ್ ಅಂತ ಫಾಲೋ ಆಗುತ್ತದೆ. Apart from protective measures we have to think what are the security measures available.

ಸೆಕ್ಯೂರಿಟಿ ಮೆಷರ್ಸ್ ಬೇರೆ ಬೇರೆ ಖಾತೆಗಳಿಗೆ ಹೋಗುತ್ತದೆ. ಈ ಹೆಸರನ್ನು ನಾವು ಈ ಖಾತೆಗೆ ಇಟ್ಟುಕೊಂಡಿರುವುದರಿಂದ invariably we have to see whether they are there whether they are sufficient. reasonable and desirable. ಈ ಅರ್ಥದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಸೆಕ್ಯೂರಿಟಿ ಮೆಷರ್ಸ್ ಎಂದರೆ ರಿಸರ್ವೇಷನ್ ಆಫ್ ಅಪಾಯಿಂಟ್‌ಮೆಂಟ್ ಒಂದು ರೀತಿಯ ಸೆಕ್ಯೂರಿಟಿ. ಎಲ್ಲವನ್ನೂ ಅವರೇ ಹಂಚಿ ಕೊಂಡು ಇವರಿಗೆ ತಿರುಪತಿಚೌರ ಮಾಡುತ್ತಾರೆಂದು ತಿಳಿದುಕೊಂಡು ಹೆಡ್‌ಲೈನ್‌ನಲ್ಲಿ ಪುಸ್ತಕದಲ್ಲಿ ಕೊಟ್ಟಿದ್ದೀರಿ. ಇದು ಒಂದು ರೀತಿಯ ಸೆಕ್ಯೂರಿಟಿ ಮೆಷರ್. ಸರ್ಕಾರದವರು ಒಂದು ಕಾರ್ಪೊರೇಷನ್ ಎಂದು ಮಾಡಿ ಅದರಲ್ಲಿ ಸ್ವಲ್ಪ ದುಡ್ಡು ಇಟ್ಟು ಇವರಿಗೋಸ್ಕರ ನೀವು ಇಂಥ ಕೆಲಸ ಮಾಡಿ, ನಾವು ಇಷ್ಟು ದುಡ್ಡನ್ನು ಕೊಡುತ್ತೇವೆ, ಕೇಂದ್ರ ಸರ್ಕಾರದವರು ಇಷ್ಟು ದುಡ್ಡನ್ನು ಕೊಡುತ್ತಾರೆಂದು ಮಾಡಿದ್ದೀರಿ, It is also a kind of security measure because they need security. ನನ್ನ ಪ್ರಕಾರ ಸೆಕ್ಯೂರಿಟಿ ಎಂದರೆ ಯಾರಾದರೂ ಹೊಡೆದಾಡಿದ್ದರೆ ಅವರು ಓಡಾಡು ವಾಗ ಅವರಿಗೆ ಯಾವಾಗಲೂ ಪೋಲೀಸ್ ಪ್ರೊಟೆಕ್ಷನ್ ಕೊಡಬೇಕಾಗುತ್ತದೆಂದು ಒಂದೇ ಅಲ್ಲ. Whatever measures that are necessary, the same have to be brought withinreasonable time. ಇದೆಲ್ಲಾ ಸೆಕ್ಯೂರಿಟಿ ಮೆಷರ್ಸ್ ಆಗುತ್ತದೆ. ಇದರಲ್ಲಿ ಕೆಲವು ನೆಗೆಟಿವ್ಸ್, ಕೆಲವು ಪಾಸಿಟಿವ್ ಇದೆ. ಪಾಸಿಟಿವ್ ಎಂದರೆ ಇವರನ್ನು ಗೌರವದಿಂದ ಮಾತನಾಡಿಸಿ, ಇವರಿಗೆ ದುಡ್ಡು ಕೊಡಿ ಇವರನ್ನು ದೂರ ಇಡಬೇಡಿ, ಇವರನ್ನು ಮನುಷ್ಯರಂತೆ ನೋಡಿಕೊಳ್ಳಿ ಎಂಬುದು. ನೆಗೆಟಿವ್ ಎಂದರೆ ಅಸ್ಪೃಶ್ಯತೆ ಹೋಗಬೇಕು, ಹೆಣ್ಣುಗಳನ್ನು ತೆಗೆದುಕೊಂಡು ಮಾರಾಟ ಮಾಡುವುದು ಹೋಗ ಬೇಕು, ಇನ್ನೂ ಮುಂತಾದುವು. ಮಾನ್ಯ ಸದಸ್ಯರು ಮಾತನಾಡುವಾಗ ಹರಿಜನರು ಎನ್ನುವ ಪದವನ್ನೇ ಹೆಚ್ಚಾಗಿ ಉಪಯೋಗಿಸಿ ಮಾತನಾಡುತ್ತಿದ್ದರು. ಅವರು ಬಡವರು ಕೂಲಿ ಮಾಡುವವರು ಎನ್ನುವ ಭಾವನೆ ಒಂದುಕಡೆಯಾದರೆ ಇನ್ನೊಂದು ಕಡೆ ಈ ಜನರನ್ನು ನಾವು ಮುಟ್ಟಿದರೂ ಸುಮ್ಮನಿರುತ್ತಾರೆ ಎಂಬ ಭಾವನೆ ಅವರ ಮನಸ್ಸಿನಲ್ಲಿ ಬೆಳೆದು ಬಂದಿರುವುದು. ಆದ್ದರಿಂದ ಇವರ ಹೆಸರನ್ನು ಹೆಚ್ಚಿಗೆ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಅನಿಸುತ್ತದೆ.

ಮಾನ್ಯ ಅಧ್ಯಕ್ಷರೆ, ಇವತ್ತು ಕುಡಿತ ಎಂಬುದು ಒಂದು ಷೋಕಿ ಆಗಿದೆ. ಸಮಾಜದಲ್ಲಿ ಕುಡಿಯದೇ ಇರುವವರೇ ಬಹಳ ಕಡಿಮೆ. ಇತ್ತೀಚೆಗೆ ಕುಡಿತ ಹೆಚ್ಚಾಗಿ ದೇವರ ಮನೆಯಲ್ಲೂ ಬಾಟಲ್‌ಗಳು ಇರುತ್ತವೆ, ಅಡಿಗೆ ಮನೆಯಲ್ಲೂ ಬಾಟಲ್‌ಗಳು ಇರುತ್ತವೆ, ಮಹಡಿಯ ಮೇಲೂ ಬಾಟಲ್‌ಗಳು ಇರುತ್ತವೆ, ಬೇರೆ ವರ್ಗದ ಜನರು ಕುಡಿದು ಹರಿಜನರ ಮೇಲೆ ಹೇಳುತ್ತಾರೆ. ಇದು ಸರಿಯಲ್ಲ. ನಮ್ಮ ಹರಿಜನರಿಗಿಂತ ಇವತ್ತು ಬೇರೆಯವರೇ ಕುಡಿತದಲ್ಲಿ ಮುಂದಿದ್ದಾರೆ ಎಂಬುದನ್ನು ತಾವು ಅಂಕಿಅಂಶಗಳನ್ನು ತರಿಸಿಕೊಂಡು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಾನೇನಾದರೂ ಹೇಳುತ್ತೇನೆ, ಇನ್ನು ಮುಂದೆ ನಮ್ಮ ಹರಿಜನರ ಹೆಸರನ್ನು ಯಾರೂ ಕೂಡ ದಯವಿಟ್ಟು ಹೇಳಬೇಡಿ.

ಈ ಅಸ್ಪೃಶ್ಯತಾ ಭಾವನೆ ಬೇಡವೆಂದು ಒಂದು ಕಾನೂನನ್ನು ಮಾಡಿದ್ದಾರೆ. ನೀವು ಈ ರೀತಿ ಬಹಿರಂಗವಾಗಿ ಮಾಡಬೇಡಿ ಎಂದು ಹೇಳುವುದು ನೆಗೆಟೀವ್. ನೀವು ಈ ರೀತಿ ಮಾಡಬೇಡಿ ಎಂದು

ವಾಕ್ಯಾನ ಮಾಡುತ್ತಾ ಇರುತ್ತೀರಿ. ಜನರಿಂದ ವ್ಯಾಕ್ಯಾನ ಬಂದರೆ ನೀವು ಏನು ಅನ್ನಬೇಡಿ. ಇದು ಸಿವಿಲ್ ರೈಟ್ಸ್. ಈಗ ಕೆರೆಯ ನೀರನ್ನು ಉಪಯೋಗಿಸಲಿಕ್ಕೆ, ಊರ ನೀರನ್ನು ಉಪಯೋಗಿಸಲಿಕ್ಕೆ ದೊಣ್ಣೆ ನಾಯಕನ ಅಪ್ಪಣೆಯಾಗಬೇಕಾ ಎನ್ನುವುದು ಒಂದು ಗಾದೆ. ಆದರೆ ಗಾದೆ ಇದ್ದರೂ ಕೂಡ ಇದು ಗೊತ್ತಿದ್ದರೂ ಕೂಡ ಈ ಜನರಿಗೆ ಹಿಂಸೆ ಕೊಟ್ಟುಕೊಂಡೆ ಬಂದರು. ನೀರನ್ನು ಕುಡಿಯಬೇಕಾದರೆ ಕಾನೂನು. ಒಂದು ವೇಳೆ ಅವರು ತಿರುಗಾಡುವ ಜಾಗದಲ್ಲಿ ಗಾಳಿಗೆ ಏನಾದರೂ ರಸ ಹಿಂಡಿಬಿಟ್ಟು ಬೇರೆ ಒಂದು ತರಹ ಗಾಳಿ ಬರುವಂತೆ ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡಿ ಬಿಡುತ್ತಿದ್ದರು, ಅದರ ಅರ್ಥ ಇದು. ಅದಕ್ಕೋಸ್ಕರ ಸೆಕ್ಯೂರಿಟಿ ಮೆಷರ್ಸ್ ಎಂದರೆ ಜನಮನದಲ್ಲಿ ಇರತಕ್ಕಂಥ ಕ್ರೋಧ ವೆಂದು ಹೇಳುವುದಿಲ್ಲ, ಒಂದು ಚಾಳಿ, ಒಂದು ರೋಗ, ಒಂದು ದುಷ್ಟ ಪ್ರವೃತ್ತಿ. ಹೇಳುವುದು ಉದ್ದ ಮಾಡುವುದು ಕಡಿಮೆ, ವರ್ಧನೆಯಲ್ಲಿ ಸೊನ್ನೆ. ಹೀಗಿರುವಾಗ ಅದನ್ನು ಒಳ್ಳೆಯದೆಂದು ಕರೆಯ ಬೇಕೋ ಎನ್ನುವುದನ್ನು ಯೋಚನೆ ಮಾಡಿ. ಒಂದು ಇಲಾಖೆಯನ್ನು ಅವರು ತೆಗೆದುಬಿಟ್ಟರು. ಇದು ಹರಿಜನ ಕಲ್ಯಾಣ ಹರಿಜನ ವೆಲ್‌ಫೇರ್ ಎಂದರೆ ಸಮಾಜ ಕಲ್ಯಾಣ ಅಂಥ. ಇದು ಏನು ಈ ಜನ ಚೆನ್ನಾಗಿ ಆದರೆ ಕಲ್ಯಾಣ. ಇಲ್ಲದಿದ್ದರೆ ಇಲ್ಲವೆಂದು ಹೇಳಿಕೊಂಡ ಒಂದು ಅರ್ಥ. ಹೀಗೆ ಎಲ್ಲಾ ಜನರು ಚೆನ್ನಾಗಿ ಇರಲಿ ಎನ್ನುವ ಅರ್ಥದಲ್ಲಿ ಅವುಗಳನ್ನು ಮಾಡಿದ್ದಾರೆ. ಕೆಲವು ಪಾಲಿ ಚೇಂಜಸ್ ಮಾಡಲಿಲ್ಲ. ಮೊದಲು ಇದ್ದ ಹಾಗೆ ಇಟ್ಟು ಸಮಾಜ ಕಲ್ಯಾಣಕ್ಕೆ ದುಡ್ಡನ್ನು ಮಾತ್ರ ಖರ್ಚು ಮಾಡುತ್ತಿದ್ದಾರೆ. ಈ ಇಲಾಖೆಗೆ ಇಷ್ಟು ಖರ್ಚು ಮಾಡುವ ಬಗ್ಗೆ ನೀವು ಕೇಳಬೇಕು. ಅವರು ಒಪ್ಪಿಕೊಳ್ಳಬೇಕು. ಸರ್ಕಾರ ಅಸ್ತು ಎನ್ನಬೇಕು. ಎರಡನೆಯದಾಗಿ ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರೈಮರಿ ಎಜ್ಯುಕೇಶನ್ ಎಂದು ಹೇಳು ತ್ತಿರಲ್ಲ ಅಲ್ಲೂ ಕೂಡ ಬೆಳೆಯಬೇಕೆಂದು ಹೇಳುತ್ತೇನೆ.

ಇನ್ನು ಸೆಕ್ಯೂರಿಟಿ ಮೆಷರ್ ಎಂದು ಹೇಳುತ್ತೀರಿ. ನಮಗೆ ಇದು ಗೊತ್ತಿದೆ. ಏತಕ್ಕೆಂದರೆ ತಾವು ಹಳ್ಳಿಯಿಂದ ಬಂದು ಕಷ್ಟ ಅನುಭವಿಸಿದ ಮಂತ್ರಿಗಳು. ಏನು ಮಾಡಬೇಕು ಎನ್ನುವ ಬಗ್ಗೆ ಸಹಾಯವಾಗುತ್ತದೆ ಎಂದು ನಾನು ಹೇಳುತ್ತಾ ಇದ್ದೇನೆ. ಇದಕ್ಕೆ ಸ್ಪೆಷಲ್ ಪೋಲೀಸ್ ಬೇರೆ ಮಾಡಿ ದರು. ಅವರೇ ಬಂದು ಕೇಳಿಕೊಳ್ಳಲಿ ಎಂದು. ಬ್ಯಾಲೆನ್ಸ್ ಸ್ವಲ್ಪ ಇಂಪರ್ ಬ್ಯಾಲೆನ್ಸ್ ಇದೆ. ಇದನ್ನು ಸ್ವಲ್ಪ ನೋಡಿ. ಅವರ ಗೋಳು ವಿಪರೀತವಾಗಿ ಇದೆ. ಆದ್ದರಿಂದ ಬಡವರಿಗೆ ಉಪಯೋಗ ವಾಗುವಂತ ರೀತಿಯಲ್ಲಿ ತಾವು ಅನುಕೂಲತೆಗಳನ್ನು ಕೊಡಬೇಕೆಂದು ಹೇಳುತ್ತೇನೆ. ಸ್ವಾಮಿ ಈ ಹರಿಜನರ ಅಭಿವೃದ್ಧಿ ಸಮಾಜ ಕಲ್ಯಾಣ ಹೇಗೆ ಆಗಬೇಕು ಎನ್ನುವುದಕ್ಕೆ ನಾನು ಹೇಳುತ್ತಿದ್ದೇನೆ. ತಾವು ಪಾಲಿಸಿ ಆಫ್ ಪ್ರಿಪರೆನ್ಸ್ ಬಗ್ಗೆ ಹೇಗೆ ಅನುಸರಿಸುತ್ತಿದ್ದೇವೆ ಎಂಬುದರ ಬಗ್ಗೆ ಸರ್ಕಾರದವರು ಪದೇ ಪದೇ ಹೇಳುತ್ತಿದ್ದಾರೆ. ನಾವು ಕೂಡ ಕೇಳುವುದಕ್ಕೆ ಇಷ್ಟಪಡುತ್ತಿರುತ್ತೇವೆ. ಎಲ್ಲಿ ಹೇಗೆ ಏಕೆ ಪಾಲಿಸಿ ಆಫ್ ಪ್ರಿಫರೆನ್ಸ್ ಎಂದು ಹೇಳಿದರೆ ೫ ಸ್ಕಾಲರ್‌ಶಿಪ್ ಇಡೋಣ, ೫ಕ್ಕೆ ನೂರು ಏಕೆ ಸಾವಿರಾರು ಅಪ್ಲಿಕೇಷನ್ ಬರೋಣ. ೧೦೦ಕ್ಕೆ ೨೦ ಕೊಡುವುದಕ್ಕೆ ೫ ಕೊಟ್ಟುಬಿಡೋಣ ಎನ್ನುವುದು ಪಾಲಿಸಿ ಆಫ್ ಪ್ರಿಫರೆನ್ಸ್ ಸ್ವಾಮಿ ಮಂಗಳೂರಿನಲ್ಲಿ ಒಬ್ಬ ಸ್ಪೆಷಲಿಸ್ಟ್. ಅವರನ್ನು ಸೆಲೆಕ್ಟ್ ಮಾಡುವು ದಕ್ಕೆ ಹೋಗಿ ಇಂಟರ್‌ವ್ಯೂ ನೋಟೀಸ್ ಬಂದಿತ್ತು. ಅವನು ಬೆಸ್ಟ್ ಪರ್ಸನ್ ! ನನ್ನ ದೃಷ್ಟಿಯಲ್ಲಿ. ನಿಮ್ಮ ದೃಷ್ಟಿಯಲ್ಲಿ ಏನು ಅಂದುಕೊಳ್ಳುತ್ತಿರೋ ಅಂದುಕೊಳ್ಳಿ. ಅವನಿಗೆ ಇದ್ದ ಕ್ವಾಲಿಫಿಕೇಶನ್ ಇನ್ನೊಬ್ಬನಿಗೆ ಇರಲಿಲ್ಲ. ಅವರು ಏನು ಉಪಾಯ ಮಾಡಿದ್ದಾರೆ ಎಂದರೆ ಮೊದಲನೆಯವ ಒಬ್ಬ, ಎರಡನೆಯವ ಒಬ್ಬ, ಮೂರನೆಯವನನ್ನು ತೆಗೆದುಕೊಂಡು ಹೋಗಿ ಇವನನ್ನು ಇಟ್ಟುಬಿಟ್ಟರು. ಇದು ಪೇಪರ್‌ನಲ್ಲಿ ಕೂಡ ಬಂದಿದೆ. ನೂರಕ್ಕೆ ನೂರರಷ್ಟು ಅನ್ಯಾಯವಾಗಿದೆ. ಎಜ್ಯುಕೇಷನ್ ಮಿನಿಸ್ಟರ್ ಇಲ್ಲಿ ಇಲ್ಲ. ನಮ್ಮ ಮಿನಿಸ್ಟರ್‌ಗೆ ಅದನ್ನು ಕೊಡುವವನಿದ್ದೇನೆ. ಇಂಥ ಅನ್ಯಾಯಗಳನ್ನು ಮಾಡು ವಾಗ ಪಾಲಿ ಆಫ್ ಪ್ರಿಫರೆನ್ಸ್‌ಗೆ ನೆಗೆಟೀವ್ ಪ್ರಿನ್ಸಿಪಲ್ ಎಂದು ಇದಕ್ಕೆ ಹೆಸರು. ಇದು ಒಂದೇ ಕಡೆಯಲ್ಲ. ಎಲ್ಲಾ ಕಡೆಯೂ ಮಾಡುತ್ತಾರೆ. ಸ್ಕಾಲರ್‌ಷಿಪ್ ಕೊಡುವುದರಲ್ಲಿ ಭೂಮಿಯನ್ನು ಕೊಡು ವುದರಲ್ಲಿ ೫೦ ಪರ್ಸೆಂಟ್ ಕೊಡಿ ಎಂದು ಹೇಳುತ್ತಾರೆ. ೫೦ ಪರ್ಸೆಂಟ್ ಕೊಡುವಾಗ ಹೊಟ್ಟೆ ಹುರಿ ಗೊದು ಕೊಡುತ್ತಾರೆಂದು ಅನ್ನಿಸುತ್ತದೆ. ಸೇಕ್‌ದಾರರು ಕೂಡ ಕಣ್ಣು ಹುಬ್ಬು ಹತ್ತಿರಕ್ಕೆ ತೆಗೆದು ಕೊಂಡು ಹೋಗಿ ಕೊಡುತ್ತಾರೆ. ಹೀಗೆ ಸರ್ಕಾರ ಹೇಳುತ್ತದೆ, ವಿಧಿಯಿಲ್ಲ, ನಾವು ಮಾಡಬೇಕಲ್ಲ ಎಂದು ಒಂದು ಉದಾಸೀನ ಮನೋಭಾವನೆಯಿಂದ ಕೊಡುತ್ತಾರೆ. ತುಂಬು ಹೃದಯದಿಂದ ನೊಂದ ಜನ, ಬೆಂದ ಜನ ನಮ್ಮ ಜೊತೆ ಬಂದ ಜನ. ಅವರೂ ಸಂತೋಷದಿಂದ ಇರಲಿ ಎಂದು ತುಂಬು ಹೃದಯದಿಂದ ಅವರು ಮಾಡುವುದಿಲ್ಲ. ಅದಕ್ಕೆ ನಾವು ಏನು ಮಾಡೋಣ ಎಂದು ಹೇಳಿಬಿಟ್ಟರೆ ಹೇಗೆ,

ಭೂಮಿ ಕೊಡುವಾಗ ಅರ್ಧ ಕೊಡಿ ಎಂದು ನೀವು ಹೇಳಿದರೂ ಒಳ್ಳೆ ಭೂಮಿ ಇರುವುದನ್ನು ಒಂದು ಕಡೆ ಬಿಟ್ಟುಕೊಂಡು ೬೦ ಪರ್ಸೆಂಟ್ ಕಲ್ಲುಗುಂಡೇ ಇರತಕ್ಕಂಥ ಭೂಮಿ, ನರಿಗುಂಡ್ರಿ ಇರುವ ಭೂಮಿ, ದನಕರು ಮೇಯಿಸಲಿಕ್ಕೂ ಸಾಧ್ಯವಾಗದ ಭೂಮಿ ಕೊಡುತ್ತಾರೆ. ಇದು ಯಾವ ಪಾದ ಪಾಲಿಸಿ. ನೀವು ಪಾಲಿಸಿ ಮಾಡುವಾಗ ಈ ರೀತಿ ಪಾಲಿಸಿ ಮಾಡುತ್ತೀರ ಎಂದು ನಮ್ಮ ಗಮನಕ್ಕೆ ಬಂದಿದೆ. ಸ್ವಾಮಿ ಇಂಥದ್ದು ಕೊಡಬಾರದು, ತಾವು ಪಾಲಿಸಿ ಪ್ರಕಾರ ಕೊಡುವುದಾದರೆ ಸಾಧ್ಯವಾದಷ್ಟು ಒಳ್ಳೆಯ ಭೂಮಿಯನ್ನು ಕೊಡಿ ಎನ್ನುವುದನ್ನು ನನ್ನ ಸಲಹೆ. ಯಾವುದೇ ಸೆಲೆಕ್ಷನ್ ಮಾಡುವಾಗಲಾದರೂ, ಯಾವ ಜಮೀನನ್ನು ಕೊಡುವಾಗಲಾದರು ಪಾಲಿಸಿ ಆಫ್ ಪ್ರಿಫರೆನ್ಸ್ ಪಾಲಿಸಬೇಕು ತಾವು ಡಿಸ್ಟ್ರಿಭ್ಯೂಷನ್ ಮಾಡುವ ಬಗ್ಗೆ ಕಲ್ಯಾಣ ಇಲಾಖೆಗೆ ಒಂದು ಸ್ಪೆಷಲ್ ಆಫೀಸ್ ಎಂದು ಕರೆದಿದ್ದೀರಿ. ತಾಲ್ಲೂಕು ಮಟ್ಟದಲ್ಲಿ ಇರುವವರನ್ನು ಸ್ಪೆಷಲ್ ರೆವಿನ್ಯೂ ಇನ್‌ಸ್ಪೆಕ್ಟರ್ ಎಂದು ಕರೆದಿರುವಿರಿ. ಇದರಲ್ಲಿ ಏನು ಸ್ಪೆಷಲ್ ಇದೆ ಎನ್ನುವುದು ನನಗಂತೂ ಅರ್ಥವಾಗುವುದಿಲ್ಲ. ಹೂವುಗಳಲ್ಲಿ ವಾಸನೆ ಇಲ್ಲದ ಮುತ್ತುಗದ ಹೂವು ಇದ್ದ ಹಾಗೆ. ಪೇಪರ್‌ನಲ್ಲಿ ಹೂವು ಮಾಡಿ ಫೋಟೋಗೆ ಹಾಕುತ್ತಾರಲ್ಲ ಹಾಗೆ. ಅದಕ್ಕೆ ನೀರು ಇಲ್ಲ ರಸವೂ ಇಲ್ಲ, ವಾಸನೆಯೂ ಇಲ್ಲ. ಹಾಗೆ ಸ್ಪೆಷಲ್ ಆಫೀಸರ್ ಇರುತ್ತಾರೆ. ಸ್ವಾಮಿ ಒಂದು ಉದಾಹರಣೆಯನ್ನು ಹೇಳಬೇಕಾದರೆ ಡೆಪ್ಯುಟಿ ಕಮೀಷನರ್ ಕಡೆ ನಮ್ಮ ಸ್ಪೆಷಲ್ ಆಫೀಸರ್ ಕೂಡ ಇರುತ್ತಾರೆ. ಒಬ್ಬ ಅಸಿಸ್ಟೆಂಟ್ ಫುಡ್ ಅಸಿಸ್ಟೆಂಟ್, ಹೆಡ್‌ಕ್ವಾರ್ಟರ್ ಅಸಿಸ್ಟೆಂಟ್, ಡೆವಲಪ್‌ಮೆಂಟ್ ಅಸಿಸ್ಟೆಂಟ್ ಇದ್ದಾ ಹಾಗೆ. ಇದ್ದರೂ ನಮ್ಮ ಸಮಾಜ ಕಲ್ಯಾಣಕ್ಕೆ ಏನು ಆಗಬೇಕೋ ಆ ಕೆಲಸ ಆ ಆಟ್ಯಿಟ್ಯೂಡ್ ಇಲ್ಲ. ಇರಬೇಕಾಗಿತ್ತು. ಇಲ್ಲಿ ಏನಾಗುತ್ತದೆ ಎಂದರೆ ಡೆವಲಪ್‌ಮೆಂಟ್ ಅಸಿಸ್ಟೆಂಟ್ ಎಂದು ಹೇಳಿ ಅವನ ಮುಖಾಂತರವಾಗಿ ಪೇಪರ್ ಹೋಗಬೇಕು. Essence in power, essence in attitude and treatment ಇಲ್ಲದಿದ್ದರೆ ಸರ್ಕಾರದ ತತ್ವ ಏನು ಇದೆ ಆ ತತ್ವದಂತೆ ಕೆಲಸ ನಡೆಯುವುದಿಲ್ಲ. That means essence of essence on the negative side ಏತಕ್ಕೆಂದರೆ ಅವರು ನೇರವಾಗಿ ಕಷ್ಟಸುಖಗಳನ್ನು ಡಿ.ಸಿ. ಹತ್ತಿರ ಕೊಟ್ಟು ಹೇಳುವಂತಿಲ್ಲ. ಡಿ.ಸಿ.ಗೆ ನಾವು ಹೋಗಿ ಹೇಳಿಕೊಂಡರೆ ಸ್ಪೆಷಲ್ ಆಫೀಸರ್ ಇರುತ್ತಾರೆ, ಅವರು ನಿಮ್ಮ ಕಷ್ಟಸುಖಗಳನ್ನು ನೋಡಿಕೊಳ್ಳುತ್ತಾರೆಂದು ಹೇಳುತ್ತಾರೆ. ಇಂಥ ಒಂದು ಪರಿಸ್ಥಿತಿ ಇರುತ್ತದೆ. ಇದನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ ಬ್ಯಾಕ್‌ವರ್ಡ್ ಕ್ಲಾಸ್ ಎಂದು ಮೊನ್ನೆ ಮೊನ್ನೆ ತಾನೆ ಹುಟ್ಟಿದೆ. ಏಕ್‌ದಮ್ ಮುನ್ನೂರು ಹಾಸ್ಟೆಲ್‌ಗಳನ್ನು ಕೊಡುತ್ತೇವೆಂದು ಹೇಳಿದರು. ಇದಕ್ಕೆ ಐ.ಎ.ಎಸ್. ಆಫೀಸರ್ ಹೆಡ್ ಎಂದು ಮಾಡಿದರು. ಪಿರಿಯಾಡಿಕಲ್ ರೆವ್ಯೂನಲ್ಲಿ ರಿಪೋರ್ಟ್ ಇರಬೇಕು ಜೊತೆಗೆ there should be a method of follow up ಇರಬೇಕು. ಇವರಿಗೆ ಬೀಜ ಕೊಡುತ್ತೀರಿ, ಹೋರಿ ಕೊಡುತ್ತೀರಿ, ಸಕಲವನ್ನು ಕೊಟ್ಟರೂ ಇವರು ಮುಂದೆ ಬರದಿರುವುದಕ್ಕೆ ಕಾರಣವೇನೆಂದರೆ ನೀವು ಕೊಡುವ ಸಹಾಯದಲ್ಲಿ ಕತ್ತರಿ ಇಟ್ಟು ಮಧ್ಯದಲ್ಲಿಯೇ ಯಾರ್ಯಾರೋ ತಿಂದು ಹಾಕುತ್ತಿದ್ದಾರೆ. ೧೯೦೦ ರೂ. ಗಳು ಸಾಲಕೊಟ್ಟು ೧೯೦೦ ರೂಪಾಯಿಗಳಿಗೆ ವೋಚರ್ ಬರೆಸಿಕೊಂಡು ಅವನಿಗೆ ಕೊಡುವಾಗ ೧೩೫೦ ಕೊಟ್ಟಿದ್ದರೆ ನೀವು ಫಾಲೋ ಆಫ್ ಮಾಡುವುದರಿಂದ ಇದು ಬೆಳಕಿಗೆ ಬರುತ್ತದೆ. ನೀವು ಕೊಟ್ಟಂತಹ ಸಹಾಯ ಅವನಿಗೆ ತಲುಪಿದೆಯೋ ಇಲ್ಲವೋ ಎಂಬುದನ್ನು ಮೊದಲು ನೋಡಬೇಕು. ಮೊದಲು ನೀವು ಮೂರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು (೧) ಪಿರಿಯಾಡಿಕಲ್ ರೆವ್ಯೂ, (೨) ಅನ್ಯುಯಲ್ ರಿಪೋರ್ಟ್ (೩) ಫಾಲೋ ಅಪ್. ಸರ್ಕಾರ ನೇಗಿಲು ಕೊಟ್ಟರೆ ಅದು ಬೇರೆಯವರಿಗೆ ಹೋಗುತ್ತದೆ, ಭೂಮಿ ಕೊಟ್ಟರೆ ಬೇರೆಯವರಿಗೆ ಹೋಗುತ್ತದೆ, ನೀವು ಕೊಟ್ಟಿದ್ದೆಲ್ಲಾ ಬೇರೆಯವರಿಗೆ ಹೋಯಿತು. ಕಡೆಗೆ ಅಪಾಯಿಂಟ್‌ಮೆಂಟ್‌ನಲ್ಲೂ ಕೂಡ ಪ್ರಾಕ್ಸಿ ಸರ್ಟಿಫಿಕೇಟ್ ಪಡೆದುಕೊಂಡು ಫ್ಯಾಕ್ಟರಿಗಳಲ್ಲಿ ಬೇರೆಯವರು ಹರಿಜನರ ಹೆಸರಿನಲ್ಲಿ ಕೆಲಸಕ್ಕೆ ಸೇರಿಕೊಂಡು ಆಗಿದೆ. ಹೆಸರು ಇವರನ್ನು ಗುಂಜುಕೊಳ್ಳುವವರು ಅವರು. ಇದನ್ನೆಲ್ಲಾ ಪರೀಕ್ಷೆ ಮಾಡಿಸಿದರೆ ನಮ್ಮ ಜನರಿಗೂ ಒಳ್ಳೆಯದಾಗುತ್ತದೆ ಮತ್ತು ತಮಗೂ ಒಳ್ಳೆಯ ಹೆಸರು ಬರುತ್ತದೆ, ಆ ಕೆಲಸ ಮಾಡುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. Social Welfare Department either at the State level or the Ministerial level it should be department of department something like essence of essence. ಆ ಅರ್ಥದಲ್ಲಿ ಎಲ್ಲಾ ಡಿಪಾರ್ಟ್‌ಮೆಂಟ್‌ಗಳೂ ನಿಮ್ಮ ಕೈಯಲ್ಲಿ ಇಲ್ಲ. ಆದರೆ ಸಂಬಂಧಪಟ್ಟ ಮಂತ್ರಿಗಳನ್ನು ಕಂಡು ನಮ್ಮವರಿಗೆ ಏನೇನು ಕೆಲಸಗಳನ್ನು ಮಾಡಿದ್ದೀರಿ ? ಆ ಕೆಲಸ ಮಾಡಿಕೊಡಿ, ಈ ಕೆಲಸ ಮಾಡಿಕೊಡಿ ಎಂದು ಕಂದಾಯ ಇಲಾಖೆಯಲ್ಲಿ,

ಫಾರೆಸ್ಟ್ ಇಲಾಖೆಯಲ್ಲಿ, ಪ್ರತಿಯೊಂದು ಇಲಾಖಾ ಮಂತ್ರಿಗಳನ್ನು ಕೇಳಿರಿ. ಅವರು ಏನಾದರೂ ಬೇರೆ ರೀತಿಯಲ್ಲಿ ಮಾತನಾಡಿದರೆ ಪತ್ರಿಕೆಗಳಿಗೆ ಹೇಳಿಕೆ ಕೊಡಿ, ಕರೆದು ನಮಗೆ ಹೇಳಿ ಮುಂದಿನ ಕೆಲಸ ಪರದೆಯ ಮೇಲೆ ನೋಡಿ ಎನ್ನುವ ಹಾಗೆ ಆಗುತ್ತದೆ ಆ ತರಹವಾದ ಕೆಲಸವನ್ನು ಮಾಡುತ್ತೀರಿ. ತಾವು ಕೂಡ ಕೊಡುವುದನ್ನು ಜಾಸ್ತಿಮಾಡಿ, ಬಡಜನರಿಗೆ ಹಣವನ್ನು ಜಾಸ್ತಿ ಕೊಟ್ಟು ಸೈ ಅನಿಸಿಕೊಳ್ಳಿ ಎಂದು ಸಲಹೆ ಕೊಟ್ಟಿದ್ದೇನೆ. ಕೊಟ್ಟಿರುವ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡಿ. ಅಪಾಯಿಂಟ್‌ಮೆಂಟ್ ವಿಷಯದಲ್ಲಿ ಪ್ರಮೋಷನ್ ಕೊಡುವ ವಿಷಯದಲ್ಲಿ ರೋಸ್ಟರ್ ಪ್ರಕಾರ ನೀವು ಮಾಡಲಿಕ್ಕೆ ಹೊರಟರೂ ಅಲ್ಲಿರತಕ್ಕ ಕೆಲವರು ಅದಕ್ಕೆ ನೆಗೆಟೀವ್ ಆಗಿ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡುತ್ತಾರೆ. ನಾವು ಏನೇ ಒಳ್ಳೆಯದು ಮಾಡಲಿಕ್ಕೆ ಹೊರಟರು ಅವರ ತಲೆಯಲ್ಲಿ ಕೆಟ್ಟದ್ದು ಬಂದೇ ಬರುತ್ತದೆ. ನೀವು ಸರಿಯಾದ ರೀತಿಯಲ್ಲಿ ರಿಸರ್ವೇಷನ್ ಕಾಯ್ದುಕೊಳ್ಳಬೇಕು ಇಲ್ಲದಿದ್ದರೆ ಅದಕ್ಕೆ ನೆಲೆ ಬರುವುದಿಲ್ಲ. ಮಾನ್ಯ ಅರಸ್‌ರವರು ಮಾಡಿದ್ದರು ಎಂದು ಹೇಳಿದರೆ, ನಿಮಗೆ ಅವರನ್ನು ಕಂಡರೆ ಆಸೆ ಅದಕ್ಕೆ ಹೇಳುತ್ತೀರಿ ಎಂದು ಹೇಳುತ್ತೀರಿ. ರೋಸ್ಟರ್ ವಿಚಾರದಲ್ಲಿ ಮಾತ್ರ ನೀವು ಜವಾಬ್ದಾರಿಯಿಂದ ಇಂಪ್ಲಿಮೆಂಟ್ ಮಾಡಬೇಕು. ಸಮಾಜ ಕಲ್ಯಾಣ ಇಲಾಖೆಯನ್ನು ಬೆಳೆಸಿ ಎಂದು ನಾನು ಸಲಹೆ ಕೊಡುತ್ತಿದ್ದೇನೆ.

† ಶ್ರೀ ಎಚ್. ವಿಶ್ವನಾಥ್ (ಕೃಷ್ಣರಾಜನಗರ).—ಸನ್ಮಾನ್ಯ ಅಧ್ಯಕ್ಷರೇ ಈ ಸದನದ ಮುಂದೆ ಸಚಿವರುಗಳು ಇಟ್ಟಿರತಕ್ಕ ಬೇಡಿಕೆಗಳನ್ನು ಆತ್ಮೀಯವಾಗಿ ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಈ ಸಮಾಜದಲ್ಲಿ ಹಲವಾರು ಜನಾಂಗಗಳು ಏನಿವೆ ಕಷ್ಟಗಳ ಗರ್ಭದಿಂದ ಉದಯಿಸಿದಂತಹ ಸಮಾಜಗಳ ಕಷ್ಟಕಾರ್ಪಣ್ಯಗಳನ್ನು ಅರಿತು ಅವರಿಗೆ ಬೇಕಾದಂತಹ ಕಾರ್ಯಕ್ರಮಗಳನ್ನು ಸರಿಯಾಗಿ ಹಾಕಿಕೊಡತಕ್ಕ ಇಲಾಖೆ ಇದು. ಆ ಒಂದು ನಿರ್ವಹಣೆಯನ್ನು ಸನ್ಮಾನ್ಯ ಶ್ರೀ ವೆಂಕಟರಮಣರವರು ವಹಿಸಿಕೊಂಡಿರುತ್ತಾರೆ. ಶ್ರೀ ವೆಂಕಟರಮಣರವರು ಈ ಇಲಾಖೆಯ ಸಚಿವರಾಗಿ ಅಧಿಕಾರ ವಹಿಸಿಕೊಂಡ ಮೇಲೆ ಹಲವಾರು ಸ್ವಾಗತಾರ್ಹವಾದ ಕೆಲಸಗಳನ್ನು ಮಾಡಿದ್ದಾರೆ. ಬೇಕಾದಷ್ಟು ಹಾಸ್ಟಲ್‌ಗಳನ್ನು ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗಗಳ ಮಕ್ಕಳಿಗೆ ತೆಗೆದಿದ್ದಾರೆ. ಮೇಲಾಗಿ ಗಿರಿಜನರ ಸವಲತ್ತುಗಳನ್ನು ಬೇರೆಯವರು ತೆಗೆದುಕೊಂಡಿರುವುದನ್ನು ಹುಡುಕತಕ್ಕ ವ್ಯವಸ್ಥೆಯನ್ನು ಈ ಸಂದರ್ಭದಲ್ಲಿ ಮಾಡುತ್ತಿದ್ದಾರೆ. ಸರ್ಕಾರಿ ಯಂತ್ರದ ಚಾಲನೆಯನ್ನು ಹಿಡಿದಿರತಕ್ಕ ಕಾರ್ಯದರ್ಶಿಗಳಾದ ಅಲೆಗ್ಸಾಂಡರ್‌ರವರು ಅಲ್ಪಸಂಖ್ಯಾತ ವರ್ಗದಿಂದ ಬಂದವರು ಅವರೂ ಕೂಡ ಇಲಾಖೆಯಲ್ಲಿ ಹೆಚ್ಚಿನ ಮುತುವರ್ಜಿಯನ್ನು ವಹಿಸಿರುತ್ತಾರೆ. ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಿಂದುಳಿದ ವರ್ಗದವರಿಗೆ ದೀನದಲಿತರಿಗೆ, ಶೋಷಿತರಿಗೆ ಹಾಕಿಕೊಂಡರೂ ಕೂಡ ಮಂತ್ರಿಗಳು ಮತ್ತು ಅಧಿಕಾರಿಗಳು ಎಷ್ಟೇ ಕಳಕಳಿಯಿಂದ ಇದ್ದರೂ ಕೂಡ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಹಲವಾರು ರೀತಿಯ ವಿಳಂಬ ನೀತಿ ಅನಾಧರಣೆ ಹೆಚ್ಚಿದೆ. ಇದರಲ್ಲಿ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳಿಂದ ಬಂದಂತಹ ಜನರಿಗೆ ಅವರ ಉದ್ಯೋಗ ಸರಿಯಾದ ರೀತಿಯಲ್ಲಿ ನಡೆದು ಅವರ ಆರ್ಥಿಕ ವ್ಯವಸ್ಥೆಗೆ ಕಲ್ಯಾಣವನ್ನು ಕಂಡುಹಿಡಿಯಲು ಹಲವಾರು ಕಾರ್ಯಕ್ರಮಗಳನ್ನು ಹಿಂದುಳಿದ ವರ್ಗದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ಹಾಕಿಕೊಟ್ಟಿರುವ ಉದ್ದೇಶವಾದರೂ ಏನು ? ಅದು ಸರಿಯಾಗಿ ನಡೆಯುತ್ತಿಲ್ಲ. ಹಿಂದುಳಿದವರು ಅಂದರೆ ಸಮಾಜದ ಜನರ

(ಉಪಾಧ್ಯಕ್ಷರು ಪೀಠಕ್ಕೆ ಬಂದರು)

ಮಡಿ ಮೈಲಿಗೆ ತೆಗೆಯತಕ್ಕವರು ನಾವು ಬಟ್ಟೆ ಒಗೆಯತಕ್ಕ ಅಗಸರು. ಮಂಗಳ ಕಾರ್ಯಗಳನ್ನು ಮಾಡುವಾಗ ಓಲಗ ಊದತಕ್ಕವರು ನಾವು, ನೀವು ನಾಜೂಕಾಗಿ ತಿರುಗಾಡಲು ಒಡವೆಗಳನ್ನು ಮಾಡಿ ಕೊಡತಕ್ಕವರು ನಾವು, ನೀವು ಅಡಿಗೆ ಮಾಡಿಕೊಂಡು ಉಣ್ಣಲು ಮಡಿಕೆ ಮಾಡಿಕೊಡತಕ್ಕವರು ನಾವು. ಹಾಗೆಯೇ ಬೆಚ್ಚಗೆ ಮಲಗಲು ಉಣ್ಣೆಯಲ್ಲಿ ಕಂಬಳಿ ಮಾಡಿಕೊಡತಕ್ಕ ಕುರುಬರು ನಾವು. ಹೀಗೆ ಹಲವಾರು ಕ್ಷೇತ್ರಗಳಲ್ಲಿ ಸರ್ವಾಂಗೀಣ ಅಭಿವೃದ್ಧಿಗೆ ದುಡಿಯತಕ್ಕ ಹಿಂದುಳಿದ ವರ್ಗದ ಜನರಿಗೆ ಸರ್ಕಾರ ಸೌಲಭ್ಯ ಕಲ್ಪಿಸಿಕೊಡಬೇಕೆಂದು 'ಬ್ಯಾಕ್‌ವರ್ಡ್ ಕ್ಲಾಸ್ ಕಾರ್ಪೊರೇಷನ್' ಎಂದು ಮಾಡಿದೆ. ಈ ಜನರಿಗೆ ಕೊಟ್ಟಿರತಕ್ಕ ಹಣ ಕೇವಲ ೧೦ ಲಕ್ಷ ರೂಪಾಯಿ ಷೇರ್ ಕ್ಯಾಪಿಟಲ್. ೧೯೭೭ನೇ ಇಸವಿಯಲ್ಲೇ ಪ್ರಾರಂಭವಾದಂತಹ ಈ ಕಾರ್ಪೊರೇಷನ್ನಿನ ಕಾರ್ಯ ವೈಖರಿಯನ್ನು ನೋಡುವುದಾದರೆ ಯಾವ ಉದ್ದೇಶದಿಂದ ಸರ್ಕಾರ ಆ ಕಾರ್ಪೊರೇಷನ್‌ನನ್ನು ಮಾಡಿತ್ತೋ ಅಲ್ಲಿ ಆಗಿರುವ ಕೆಲಸ ಜುಜುಬಿಯನ್ನು ನಾವು ನೋಡುತ್ತಿದ್ದೇವೆ. ಆ ಕಾರ್ಪೊರೇಷನಲ್ಲಿ ಇರತಕ್ಕ ಕಾನೂನು ಮತ್ತು ಸ್ಕೀಮುಗಳ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ೮೨ ಸ್ಕೀಮ್‌ಗಳಿವೆ. ತರಕಾರಿ ಮಾರುವುದು, ಸೈಕಲ್ ಷಾಪ್

ತೆರೆಯುವುದು ಈ ರೀತಿಯ ನಾನಾ ಸ್ಕೀಮ್‌ಗಳಿವೆ. ಅವುಗಳಲ್ಲಿ ಅವರು ಮಾಡಿರುವುದು ಎಷ್ಟೆಂದು ನೋಡಿದರೆ ೧೯೭೪ರಿಂದ ಇಲ್ಲಿಯ ತನಕ ಜಿಲ್ಲಾವಾರು ಅಂಕಿಅಂಶಗಳನ್ನು ನೋಡಿದರೆ ಹಿಂದುಳಿದ ಜನರಿಗೆ ಯಾರಿಗೂ ಸಿಕ್ಕಿಲ್ಲ. ಹಿಂದುಳಿದ ಜಿಲ್ಲೆಯಾದ ಬಿಜಾಪುರ ಜಿಲ್ಲೆಗೆ ಅಲ್ಲಿರುವ ಹಿಂದುಳಿದ ವರ್ಗಗಳವರಿಗೆ ಏನೇನು ಸಹಾಯ ಮಾಡಿಲ್ಲ. ಬಿಜಾಪುರದಲ್ಲಿ ಒಬ್ಬರಿಗೂ ಕೂಡ ಸಾಲ ಕೊಟ್ಟಿಲ್ಲ. ಬಿಜಾಪುರ ಇಲ್ಲ, ಧಾರವಾಡ ಇಲ್ಲ, ಬೀದರ್ ಜಿಲ್ಲೆಯಲ್ಲಿ ಒಬ್ಬರಿಗೆ ಮಾತ್ರ ಕೊಟ್ಟಿದ್ದಾರೆ. ಹಾಸನ ಜಿಲ್ಲೆಗೆ ೫ ಜನಗಳಿಗೆ ಕೊಟ್ಟಿದ್ದಾರೆ. ಬೆಳಗಾಂ ಜಿಲ್ಲೆಗೆ ೬ ಜನ, ಮಂಡ್ಯ ಜಿಲ್ಲೆಗೆ ೯ ಜನ, ಶಿವಮೊಗ್ಗ ಜಿಲ್ಲೆಗೆ ೮ ಜನ, ರಾಯಚೂರು ಜಿಲ್ಲೆಗೆ ೧೬ ಜನ ಮತ್ತು ಬೆಂಗಳೂರು ಗ್ರಾಮಾಂತರ ಮತ್ತು ನಗರ ಎಲ್ಲಾ ಸೇರಿ ೨೦ ಜನಗಳಿಗೆ ಕೊಟ್ಟಿದ್ದಾರೆ. ನೀವು ಅಧಿಕಾರಿಗಳನ್ನು ಏತಕ್ಕೋಸ್ಕರ ಇಡಬೇಕು ? ಸರ್ಕಾರ ಹಿಂದುಳಿದ ವರ್ಗಗಳಿಗೆ ಕಾರ್ಯಕ್ರಮಗಳನ್ನು ಹಾಕಬೇಕು. ಅದು ನೆಪಮಾತ್ರಕ್ಕೆ ಇದೆಯೋ ಹೊರತು ಅಂಕಿಅಂಶ ಗಳನ್ನು ನೋಡಿದಾಗ ಆ ಕಾರ್ಪೊರೇಷನ್ ಯಾತಕ್ಕೋಸ್ಕರ ಇರಬೇಕು. ಅದು ಇರುವುದಕ್ಕೆ ಬದಲಾಗಿ ಬಾಗಿಲು ಹಾಕುವುದು ವಾಸಿ.

ಶ್ರೀ ಎಂ. ಸಿ. ನಾಣಯ್ಯ.—ಮಾನ್ಯ ಸದಸ್ಯಣೀಯವರಾದ ಪ್ರಮಿಳಾರವರು ಸಭೆಯಿಂದ ಹೋಗು ತ್ತಿದ್ದಾರೆ. ಅವರು ಮಾತನಾಡಿದಾಗ ನಾವು ಕೇಳಿದ್ದೇವೆ, ನಾವು ಮಾತನಾಡುವಾಗ ಅವರು ಕೇಳ ಬೇಕು. ಸಚಿವರು ಉತ್ತರ ಹೇಳುವಾಗ ಅವರು ಇರಬೇಕು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಬಡ ಬಡ ಎಂದು ಮಾತನಾಡುವುದು ಸೀದಾ ಹೈಕೋರ್ಟಿಗೆ ಹೋಗಿ ಬಿಡುವುದು.

ಶ್ರೀ ಎಚ್. ವಿಶ್ವನಾಥ್.—೧೯೭೪ನೇ ಇಸವಿಯಲ್ಲಿ ಈ ಕಾರ್ಪೊರೇಷನ್ ಶುರು ಮಾಡಿದರೂ ಕೇವಲ ೧೨೭೫ ಜನಗಳಿಗೆ ಕರ್ನಾಟಕದಾದ್ಯಂತ ಸಹಾಯ ಮಾಡಿದ್ದಾರೆ ಅಂದರೆ ಹೇಗೆ ? ಅಲ್ಲಿ ಏತಕ್ಕೋಸ್ಕರ ಮ್ಯಾನೇಜಿಂಗ್ ಡೈರೆಕ್ಟರನ್ನು ಇಟ್ಟುಕೊಂಡಿದ್ದೀರಿ ? ಯಾವ ಕಾರ್ಯಕ್ರಮಗಳನ್ನು ಹಾಕಿದರೂ ಅದನ್ನು ಜಾರಿಗೆ ತರುವಂತಹ ಕಳಕಳಿ ಇರತಕ್ಕಂತಹ ಅಧಿಕಾರಿಯನ್ನು ಹಾಕಿ. ಐಸಾರಾಮ ವಾಗಿ ಭೋಗ ವಿಲಾಸದಿಂದ ಇರತಕ್ಕವರು ಅಲ್ಲಿ ಕೆಲಸ ಮಾಡುತ್ತಾರೆಯೆ ? ಅಂತಹ ಅಧಿಕಾರಿಗಳನ್ನು ಮೊದಲು ಮನೆಗೆ ಕಳುಹಿಸಿ. ಈ ಜನರ ಬಗ್ಗೆ ಕಳಕಳಿ ಇರತಕ್ಕ ಅಧಿಕಾರಿಗಳನ್ನು ಹಾಕಿ ಅವರು ಕೆಲಸ ಮಾಡುತ್ತಾರೆ. ಕಾರ್ಪೊರೇಷನ್‌ಗೆ ಕೊಟ್ಟಿರತಕ್ಕ ಷೇರ್ ಕ್ಯಾಪಿಟಲ್ ೧೦ ಲಕ್ಷ ಏನೇನು ಸಾಲದು. ಶೇಕಡ ೬೦ ಪರ್ಸೆಂಟ್ ಇರತಕ್ಕ ೨½ ಕೋಟಿ ಜನಸಂಖ್ಯೆ ಇರತಕ್ಕವರಿಗೆ ೧೦ ಲಕ್ಷ ಯಾವ ಮೂಲೆಗೂ ಸಾಕಾಗುವುದಿಲ್ಲ. ಈ ಹಣ ಅಧಿಕಾರಿಗಳು ಕಾರಿನಲ್ಲಿ ಓಡಾಡಲು ಮತ್ತು ಅವರು ಮೋಜುವಾನಿ ಮಾಡಲು ಸಾಲುತ್ತದೆ ಹೊರತು ಬೇರೆ ಯಾವುದಕ್ಕೂ ಹಣ ಉಳಿಯುವುದಿಲ್ಲ. ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ೧೯೮೨–೮೩ರಲ್ಲಿ ೨೦ ಸಾವಿರ ಹಿಂದುಳಿದ ವರ್ಗದವರಿಗೆ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಇಂತಹ ಬೋಗಸ್ ಸ್ಟೇಟ್‌ಮೆಂಟ್‌ನ್ನು ಏತಕ್ಕೆ ಕೊಡ ಬೇಕು ? ಷೇರ್ ಕ್ಯಾಪಿಟಲ್ ಇರುವುದೇ ೧೦ ಲಕ್ಷ ರೂ. ಗಳು ಮಾತ್ರ. ಇದರ ಜೊತೆಗೆ ೧೯೭೪ ರಿಂದ ಇಲ್ಲಿಯವರೆಗೆ ೧೨೭೫ ಜನರಿಗೆ ಮಾತ್ರ ಸಹಾಯ ಮಾಡಿರುವುದರಿಂದ ಬರುವ ವರ್ಷದಲ್ಲಿ ೨೦ ಸಾವಿರ ಜನರಿಗೆ ಸಹಾಯ ಮಾಡುತ್ತೇವೆಂದು ಇವರು ಹೇಳುವುದಾದರೆ ಇದು ನಿಜವೋ ಅಥವಾ ಸುಳ್ಳೋ ಎಂದು ಯಾರು ನಂಬುತ್ತಾರೆ ? ನಿಮಗೆ ನಿಜವಾಗಿಯೂ ಹಿಂದುಳಿದ ಜನರಿಗೆ ಸಹಾಯ ಮಾಡಬೇಕೆಂಬ ಮನೋಭಾವವಿದ್ದರೆ ಮತ್ತು ಇವರ ಒಂದು ಆರ್ಥಿಕ ಕಲ್ಯಾಣ ಸರಿಯಾಗಿ ಆಗಬೇಕಾಗಿದ್ದರೆ ಈ ಕಾರ್ಪೊರೇಷನ್‌ಗೆ ಹೆಚ್ಚಿನ ಹಣ ಒದಗಿಸಿ ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡಿ, ಇಲ್ಲದಿದ್ದರೆ ಇದನ್ನು ಮುಚ್ಚಿಬಿಡಿ. ಏಕೆಂದರೆ, ಇಷ್ಟು ಕಡಿಮೆ ಹಣದಿಂದ ಈ ಜನರು ಉದ್ಧಾರವಾಗುವುದಿಲ್ಲ. ಈ ಹಿಂದುಳಿದ ವರ್ಗದವರ ಯೋಗಕ್ಷೇಮಕ್ಕೋಸ್ಕರ ಮತ್ತು ಇವರಿಗಾಗಿ ಕೈಕೊಂಡಿರುವ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೋಸ್ಕರ ಒಂದು ಹೈ-ಪವರ್ ಕಮಿಟಿ ಇದೆ. ಇದಕ್ಕೆ ಮುಖ್ಯಮಂತ್ರಿಗಳೇ ಚೇರ್‌ಮನ್ ಆಗಿದ್ದಾರೆ. ಆದರೆ ಇಲ್ಲಿಯವರೆಗೆ ಒಂದು ಸಲವೂ ಸಭೆ ಸೇರಿಲ್ಲ. ಇದಕ್ಕೆ ಕಾರಣವೇನು ? ಈ ಹಿಂದುಳಿದ ವರ್ಗದವರ ಕಲ್ಯಾಣ ಯಾವ ರೀತಿ ಆಗಬೇಕೆಂಬ ಬಗ್ಗೆ ಇಲ್ಲಿಯವರೆಗೆ ಚರ್ಚೆ ಮಾಡಿಲ್ಲ. ಈ ಕಾರಣದಿಂದ ಹರಿಜನ ಮತ್ತು ಗಿರಿಜನರ ಕಲ್ಯಾಣಕ್ಕೆ ಸಂಬಂಧಪಟ್ಟಂತೆ ಈ ಮನೆಯ ಸದಸ್ಯರು ಇರುವಂತಹ ಒಂದು ಕಮಿಟಿ ಇರುವಂತೆ ಹಿಂದುಳಿದ ವರ್ಗದವರ ಕಲ್ಯಾಣಕ್ಕೆ ಸಂಬಂಧಪಟ್ಟಂತೆ ಒಂದು ಕಮಿಟಿಯನ್ನು ರಚನೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದಕ್ಕೆ ಇಷ್ಟ ಪಡುತ್ತೇನೆ. ಈ ಹಿಂದುಳಿದ ವರ್ಗದವರಿಗೆ ಸಂಬಂಧಪಟ್ಟಂತೆ ಇರುವ ಕಾರ್ಪೊರೇಷನ್‌ಗೆ ಸಲಹೆಗಳನ್ನು

ಕೊಡಲು ಜಿಲ್ಲಾವಾರು ಸಮಿತಿಗಳನ್ನು ನೇಮಕ ಮಾಡಿದ್ದಾರೆ. ಈ ಸಮಿತಿಗಳಿಗೆ ಆಯಾ ಜಿಲ್ಲೆಯ ಡಿ.ಸಿ. ಅವರೇ ಚೇರ್‌ಮನ್ ಆಗಿದ್ದಾರೆ. ಈ ಸಮಿತಿಗಳಲ್ಲಿ ೧೩ ಜನ ಸದಸ್ಯರಿದ್ದಾರೆ. ಈ ೧೩ ಜನ ಸದಸ್ಯರ ಪೈಕಿ ಒಬ್ಬರು ಮಾತ್ರ ಸೋಷಿಯಲ್ ವರ್ಕರ್ ಇದ್ದಾರೆ, ಇನ್ನುಳಿದವರೆಲ್ಲಾ ಅಧಿಕಾರಿಗಳು. ಈ ಕಾರಣದಿಂದ ಒಬ್ಬ ಸೋಷಿಯಲ್ ವರ್ಕರ್ ಕೊಡುವ ಸಲಹೆಗಳನ್ನು ಈ ೧೨ ಜನ ಅಧಿಕಾರಿಗಳು ಯಾವ ರೀತಿ ಪುರಸ್ಕಾರ ಮಾಡುತ್ತಾರೆ ? ಯಾವ ಜಿಲ್ಲೆಯಲ್ಲಿಯೂ ಸಹ ಇಲ್ಲಿಯತನಕ ಸಭೆ ಸೇರಿ ಚರ್ಚೆ ಮಾಡಿಲ್ಲ, ಇಂತಹ ಒಂದು ಸಮಿತಿ ಇರುವುದು ಎಂ.ಎಲ್.ಎ. ಗಳಿಗೇ ಗೊತ್ತಿಲ್ಲ. ಇಂತಹ ಸಮಿತಿಗಳನ್ನು ರಚನೆ ಮಾಡಿ ಎಂದು ಸರ್ಕಾರದವರು ಒಂದು ಸುತ್ತೋಲೆ ಹೊರಡಿಸುತ್ತಾರೆ. ಆದರೆ ಆ ಸುತ್ತೋಲೆಗೆ ಬೆಲೆಯೇ ಇರುವುದಿಲ್ಲ. ಅದನ್ನು ಎಲ್ಲಿಯೋ ಒಂದು ಕಡೆ ಬಿಸಾಕಿರುತ್ತಾರೆ. ಈ ರೀತಿ ಮಾಡುವುದಕ್ಕೆ ಬದಲು ಈ ಸಮಿತಿಗಳನ್ನೇ ರದ್ದು ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ತಾವು ಹೆಚ್ಚಿನ ಹಣವನ್ನು ಕೊಟ್ಟು ಒಂದು ಸರಿಯಾದ ವ್ಯವಸ್ಥೆ ಮಾಡಿ. ಈ ಜನರ ಬಗ್ಗೆ ಕಳಕಳಿ ಇಟ್ಟುಕೊಂಡು ಕೆಲಸ ಮಾಡುವ ಅಧಿಕಾರಿಗಳನ್ನು ಅಲ್ಲಿಗೆ ನೇಮಕ ಮಾಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರಾಜ್ಯಸರ್ಕಾರದ ನಾನಾ ಇಲಾಖೆಗಳಲ್ಲಿ ಸುಮಾರು ೪೮ ಸಾವಿರ ಹುದ್ದೆಗಳು ಖಾಲಿ ಇವೆ. ಇಷ್ಟು ಹುದ್ದೆಗಳು ಬಹಳ ಕಾಲದಿಂದ ಖಾಲಿ ಇರುವುದರಿಂದ ಇವುಗಳಲ್ಲಿ ಶೇಕಡಾ ೧೮ರಷ್ಟು ಹುದ್ದೆಗಳು ಹರಿಜನ ಮತ್ತು ಗಿರಿಜನರಿಗೆ ಸಿಗದೆ ಅನ್ಯಾಯವಾಗಿದೆ. ಈ ೪೮ ಸಾವಿರ ಹುದ್ದೆಗಳಲ್ಲಿ ಶೇಕಡಾ ೩೨ರಷ್ಟು ಹುದ್ದೆಗಳನ್ನು ಹರಿಜನ ಮತ್ತು ಗಿರಿಜನರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ಮೀಸಲಿಡಬೇಕಾಗುತ್ತದೆ. ಈ ಕಾರಣದಿಂದ ಈ ಹುದ್ದೆಗಳನ್ನು ಜಾಗ್ರತೆ ಭರ್ತಿ ಮಾಡುವುದರ ಮೂಲಕ ನಮ್ಮ ಮಕ್ಕಳೂ ಸಹ ಸರ್ಕಾರದ ಕೆಲಸಕ್ಕೆ ಹೋಗುವ ಒಂದು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ನಾಗರೀಕ ಹಕ್ಕುಗಳ ಸಂರಕ್ಷಣ ವಿಭಾಗ ಎಂದು ಇದೆ. ಇದನ್ನು ಒಳ್ಳೆಯ ಉದ್ದೇಶದಿಂದ ಮಾಡಿದ್ದೀರಿ. ಇದರ ಬಗ್ಗೆ ಮಾನ್ಯ ಸಚಿವರು ಒಳ್ಳೆಯ ಕಳಕಳಿಯನ್ನು ಇಟ್ಟುಕೊಂಡಿದ್ದಾರೆ. ಆದರೆ ಈ ಕಛೇರಿ ಎಲ್ಲಿದೆ, ಯಾವ ಊರಿನಲ್ಲಿದೆ, ಇಲ್ಲಿರುವ ಅಧಿಕಾರಿಗಳು ಯಾರು ಎಂಬುದು ನಮಗೆ ಗೊತ್ತಿಲ್ಲ. ನಮ್ಮ ಸರ್ಕಾರದವರು ಹರಿಜನ ಮತ್ತು ಗಿರಿಜನರಿಗೆ ಸಂಬಂಧ ಪಟ್ಟಂತೆ ಹಾಗೂ ಹಿಂದುಳಿದ ವರ್ಗದವರಿಗೆ ಸಂಬಂಧಪಟ್ಟಂತೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಈ ಕಾರ್ಯಕ್ರಮದ ಪ್ರಕಾರ ಸೈಟ್‌ಗಳನ್ನು ಹಂಚುತ್ತಾರೆ, ಇದಕ್ಕೆ ಸಂಬಂಧಪಟ್ಟಂತೆ ೧೫ ವರ್ಷಗಳಾದರೂ ಭೌತಿಕವಾಗಿ ಪೊಜಿಷನ್ ಕೊಟ್ಟಿರುವುದಿಲ್ಲ. ಡಿಕ್ರಿ ಪೇಪರ್‌ನಲ್ಲಿ ಇರುತ್ತದೆ ಅಷ್ಟೆ, ಇದಕ್ಕೆಲ್ಲಾ ಬಿಳಿ ಬಟ್ಟೆಯವರೇ ಕಾರಣ. ಇದೇ ರೀತಿಯಲ್ಲಿ ಭೂಸುಧಾರಣೆ ಮೂಲಕ ಹೆಚ್ಚುವರಿಯಾಗಿ ಬಂದ ಜಮೀನನ್ನು ಹಂಚುವುದರಲ್ಲಿಯೂ ಆಗುತ್ತಿದೆ. ಡಿಕ್ರಿ ಪೇಪರ್‌ನಲ್ಲಿರುತ್ತದ. ಆದರೆ ವಾಸ್ತವಿಕವಾಗಿ ಸಂಬಂಧಪಟ್ಟವರಿಗೆ ಪೊಜಿಷನ್ ಕೊಡುವುದಕಾಗುತ್ತಿಲ್ಲ. ಇದಕ್ಕೆ ಭೂಮಾಲೀಕರ ಒಂದು ಇನ್‌ಫ್ಲೂಯೆನ್ಸ್ ಇರುತ್ತದೆ. ಈ ರೀತಿಯಾದರೆ ಈ ಜನರು ಮುಂದೆ ಬರುವುದಾದರೂ ಹೇಗೆ ? ಸರ್ಕಾರದವರು ಸಿವಿಲ್ ರೈಟ್ಸ್ ಎನ್‌ಪೋರ್ಸ್‌ಮೆಂಟ್ ಸೆಲ್‌ಗೆ ಹೆಚ್ಚಿನ ಬಲ ಕೊಡಬೇಕು ಮತ್ತು ಹೆಚ್ಚು ಹಣ ಕೊಡಬೇಕು. ಇದರ ಜೊತೆಗೆ ಕೊನೆಯಪಕ್ಷ ಸಬ್ ಡಿವಿಜನ್ ಮಟ್ಟದಲ್ಲಿಯಾದರೂ ಒಳ್ಳೆಯ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ. ಅದೇ ರೀತಿಯಲ್ಲಿ ಸಾಮಾಜಿಕ ಭದ್ರತೆಗಾಗಿ ಇರುವಂತಹ ಸಂಸ್ಥೆಯನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಮತ್ತು ಈ ಸಂಸ್ಥೆಯವರು ಹರಿಜನರ ಮತ್ತು ಹಿಂದುಳಿದ ವರ್ಗದವರ ಹಕ್ಕುಗಳನ್ನು ಸಂರಕ್ಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಸರ್ಕಾರದವರು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಈ ಕಾರ್ಯಕ್ರಮಗಳ ಪೈಕಿ ಕೆಲವು ಯಾರು ಯಾರಿಗೂ ಗೊತ್ತಿಲ್ಲ. ೧೯೮೧ನೇ ವರ್ಷವನ್ನು ಅಂಗವಿಕಲರ ವರ್ಷವೆಂದು ಸರ್ಕಾರ ಸಾರಿತು. ಮತ್ತು ಆ ವರ್ಷದಲ್ಲಿ ಎಲ್ಲ ಸಂಘ ಸಂಸ್ಥೆಗಳಲ್ಲಿ ಹಾಗೂ ಸರ್ಕಾರದ ಸಹಾಯಧನ ಪಡೆದಿರುವ ಕಾರ್ಖಾನೆಗಳಲ್ಲಿ ಇವರಿಗೆ ಕೆಲಸ ಕೊಡಬೇಕೆಂದು ಸರ್ಕಾರ ಆಜ್ಞೆ ಮಾಡಿತು. ಆದರೆ ಅವರುಗಳಿಗೆ ಈ ಅಂಗವಿಕಲರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಅಧಿಕಾರವನ್ನು ಮಾತ್ರ ಕೊಡಲಿಲ್ಲ. ಅಧಿಕಾರವನ್ನೇ ಕೊಡದಿದ್ದರೆ ಅವರು ಯಾವ ರೀತಿ ಕೆಲಸಕ್ಕೆ ತೆಗೆದುಕೊಳ್ಳುತ್ತಾರೆ ? ಈ ಕಾರಣದಿಂದ ಇವರುಗಳು ಕೆಲಸವಿಲ್ಲದೆ ಬೀದಿಗಳಲ್ಲಿ ತಿರುಗುತ್ತಿದ್ದಾರೆ. ಈ ವರ್ಷದಲ್ಲಿ ಕೂಡ ಇವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಈ ಅಂಶವನ್ನು ಸಂಬಂಧಪಟ್ಟ ಅಧಿಕಾರಿಗಳು ಮಂತ್ರಿಗಳ ಗಮನಕ್ಕೆ ಏತಕ್ಕೆ ತರಲಿಲ್ಲವೋ ಗೊತ್ತಿಲ್ಲ. ಇದು

ಶೋಚನೀಯವಾದಂಥ ವಿಷಯ. ಮಾನವೀಯ ದೃಷ್ಟಿಯಿಂದ ಇವರಿಗೆ ಉದ್ಯೋಗ ಕಲ್ಪಿಸುವುದಕ್ಕೆ ಸರ್ಕಾರ ಒಂದು ಕಾನೂನು ಮಾಡಿತು. ಆದರೆ ಇದು ಸರಿಯಾದ ರೂಪದಲ್ಲಿ ಕಾರ್ಯಗತವಾಗಲಿಲ್ಲ. ಈ ವರ್ಷವಾದರೂ ಇದರ ಕಡೆಗೆ ಸರ್ಕಾರ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರದವರು ಬುದ್ಧಿ ಮಾಂದ್ಯವಾದ ಮತ್ತು ಮೆಂಟಲಿ ರಿಟಾರ್‌ಡೆಡ್ ಆದ ಮಕ್ಕಳಿಗೆ ಸಹಾಯ ಮಾಡಲು ಏನು ಒಂದು ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ, ಇದಕ್ಕೆ ಬದಲು ಇಂತಹ ಮಕ್ಕಳು ಹುಟ್ಟುವುದಕ್ಕೆ ಮೊದಲೇ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಒಳ್ಳೆಯದು. ಅದು ಹೇಗೆಂದರೆ, ನಮ್ಮ ಹಿಂದುಳಿದ ವರ್ಗದವರ ಮಕ್ಕಳಲ್ಲಿ ಹಾಗೂ ಹರಿಜನರ ಮಕ್ಕಳಲ್ಲಿ ಒಂದು ರೀತಿಯ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ ಇರುತ್ತದೆ, ಶೈನೆಸ್ ಇರುತ್ತದೆ, ಮೆಂಟಲ್ ರಿಟಾರ್‌ಡೇಷನ್ ಇರುತ್ತದೆ, ಈ ಮಕ್ಕಳಲ್ಲಿ ಏನೋ ಒಂದು ರೀತಿಯ ಮುಜುಗರ ಇರುತ್ತದೆ. ಇದಕ್ಕೆ ನಮ್ಮ ಈಗಿನ ಸಮಾಜದ ವ್ಯವಸ್ಥೆಯೇ ಕಾರಣವೆಂದು ಹೇಳಬಹುದು. ಹಿಂದುಳಿದ ವರ್ಗದ ಹಾಗೂ ದಲಿತರ ವರ್ಗಕ್ಕೆ ಸೇರಿದ ಹೆಂಗಸರು ಹೆಚ್ಚಾಗಿ ಕೂಲಿ ಮಾಡಿಯೇ ಜೀವನ ನಡೆಸುತ್ತಾರೆ. ಇಂತಹವರು ಏನಾದರು ಗರ್ಭಿಣಿಯರಾದರೆ ಹೆರಿಗೆ ಆಗುವ ದಿನದವರೆಗೂ ಕೂಲಿ ಮಾಡಿಯೇ ಜೀವನ ಮಾಡಬೇಕಾಗಿದೆ. ಇಂತಹ ಗರ್ಭಿಣಿ ಹೆಂಗಸರು ತಮಗೆ ೭ ತಿಂಗಳಾದ ಮೇಲೆ ಯೋಚನೆ ಮಾಡಲು ಪ್ರಾರಂಭ ಮಾಡುತ್ತಾರೆ. ಇನ್ನು ಎರಡು ತಿಂಗಳಲ್ಲಿ ಹೊರ ಬರುವ ಮಗುವಿಗೆ ಏನು ವ ವಸ್ಥೆ ಮಾಡಬೇಕು, ಅದರ ಬಟ್ಟೆ ಮತ್ತು ಗಂಜಿಗೆ ಯಾವ ರೀತಿ ವ್ಯವಸ್ಥೆ ಮಾಡಬೇಕು ಎಂದು ಯೋಜನೆ ಮಾಡುತ್ತಾರೆ. ಸರಿಯಾದ ದಾರಿ ಕಾಣದಿದ್ದಾಗ ಮಧ್ಯಮವರ್ಗದ ಹಾಗೂ ಸಂಭಾವಿತ ಮಹಿಳೆಯರೂ ಸಹ ಈ ಸಂದರ್ಭದಲ್ಲಿ ಬೇರೆಯವರ ಮನೆಗೆ ಹೋಗಿ ತಮ್ಮ ಮಗುವಿನ ಬಟ್ಟೆ ಹಾಗೂ ಗಂಜಿಗಾಗಿ ಕೈಯೊಡ್ಡುತ್ತಾರೆ. ಈ ಸಮಯದಲ್ಲಿ ಆಕೆಯ ಮನಸ್ಸಿನ ಮೇಲೆ ಏನೇನು ಪರಿಣಾಮ ಬೀರುತ್ತದೋ ಅದೇ ಪರಿಣಾಮ ಆಕೆಯ ಹೊಟ್ಟೆಯಲ್ಲಿರುವ ಭ್ರೂಣದ ಮೇಲೂ ಬಿರುತ್ತದೆ ಇದೇ ಸಂದರ್ಭದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ, ಶ್ರೀಕೃಷ್ಣ ಪರಮಾತ್ಮ ಸುಭದ್ರಾದೇವಿ ಗರ್ಭಿಣಿಯಾಗಿದ್ದಾಗ ಒಳ್ಳೆಯ ವೀರಾಧಿವೀರರ ಕಥೆಗಳನ್ನು ಹೇಳುತ್ತಿರುತ್ತಾನೆ ಈ ರೀತಿ ಕಥೆ ಹೇಳುವಾಗ ಆಕೆ ಮಲಗಿಕೊಂಡರೂ ಸಹ ಆಕೆಯ ಹೊಟ್ಟೆಯಲ್ಲಿರುವ ಮಗು ಹೂಂ, ಹೂಂ ಎಂದು ಹೇಳುತ್ತದೆ. ಆದರೆ ನಮ್ಮ ದಲಿತರಿಗೆ ಯಾವ ಒಂದು ಅನುಕೂಲವೂ ಇಲ್ಲದ ಕಾರಣ ಅವರು ಹೆರಿಗೆ ಸಮಯದಲ್ಲಿ ಏನೇನು ಯಾತನೆಗಳನ್ನು ಅನುಭವಿಸುತ್ತಾರೋ ಅದರ ಒಂದು ಪರಿಣಾಮ ಅವರ ಹೊಟ್ಟೆಯಲ್ಲಿರು ಮಗುವಿನ ಮೇಲೂ ಬೀರುತ್ತದೆ. ಅದೇ ಮುಂದುವರೆದ ಜನಾಂಗದವರಲ್ಲಿಯಾದರೆ ೭ ತಿಂಗಳ ಗರ್ಭಿಣಿಯಾದ ಕೂಡಲೇ ಆಕೆಯನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ, ಹರಿಕಥೆ ಮಾಡಿಸುತ್ತಾರೆ, ಆಕೆಯ ಮುಂದೆ ಒಳ್ಳೆಒಳ್ಳೆಯ ಕಥೆಗಳನ್ನು ಹೇಳುತ್ತಾರೆ, ಒಳ್ಳೆಯ ಊಟಗಳನ್ನು ಹಾಕುತ್ತಾರೆ. ಶ್ರೀಮಂತ ಎಂದು ಮಾಡುತ್ತಾರೆ. ಆದರೆ ಅಂತಹ ಒಂದು ವ್ಯವಸ್ಥೆ ನಮಗೆಲ್ಲಿದೆ ? ನಮ್ಮ ಜನರಿಗೆ ಗಂಜಿಗೇ ಗತಿ ಇಲ್ಲ, ಇಂತಹ ಸಂದರ್ಭದಲ್ಲಿ ಒಳ್ಳೆಯ ಸೀರೆಯನ್ನುಡಬೇಕು, ಒಳ್ಳೆಯ ತಿಂಡಿ ತಿನ್ನಬೇಕು ಮತ್ತು ಹೂವು ಮುಡಿಯಬೇಕೆಂಬ ಆಸೆ ಗರ್ಭಿಣಿಯರಿಗೆ ಇರುತ್ತದೆ.

೧೨-೦೦ ಮಧ್ಯಾಹ್ನ

ಆಸೆ ಆಸೆಯಾಗಿ ಉಳಿಯುತ್ತದೇ ವಿನಾ ಕೊನೆಯಾಗುವುದಿಲ್ಲ. ಎಲ್ಲಾ ಮುಜುಗರಗಳೂ ಆ ತಾಯಿಯ ಗರ್ಭದಲ್ಲಿದ್ದಾಗ ಭ್ರೂಣದಲ್ಲೇ ಬರುತ್ತದೆ. ನಮಗೆ ಗೊತ್ತಾಗುವುದು ಯಾವಾಗ ಎಂದರೆ ಆ ಮಗು ಹುಟ್ಟಿದ ಮೇಲೆ, ನೋಡಿದಾಗ ಇನ್‌ಫೀರಿಯರ್ ಕಾಂಪ್ಲೆಕ್ಸ್ ಏನು ಇದೆ ಅನ್ನುವುದು ಗೊತ್ತಾಗುತ್ತದೆ. ಬುದ್ಧಿ ಬೆಳವಣಿಗೆ ಇರುವುದಿಲ್ಲ, ಒಂದು ಕಣ್ಣು ಇಲ್ಲದೇ ಇರುವುದೋ, ಕಾಲು ಇಲ್ಲದೇ ಇರುವುದೋ ಏನು ತಿಳಿಯಬೇಕಾದರೂ ಆ ಮಗು ಹುಟ್ಟಿದ ಮೇಲೆ ಗೊತ್ತಾಗುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ ಆ ಮಗು ಹುಟ್ಟುವುದಕ್ಕೆ ಮುಂಚೆ ಆ ಮಗು ತಾಯಿಯ ಗರ್ಭದಲ್ಲಿರುವಾಗಲೇ ಆ ಮಗುವಿನ ಬೆಳವಣಿಗೆ ಏನು ಒಂದು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಒಂದು ಸಲಹೆ ಮಾಡುತ್ತೇನೆ. ಅದೇನೆಂದರೆ ದಲಿತರಿಗೆ, ಶೋಷಿತ ವರ್ಗದ ಹೆಂಗಸರಿಗೆ, ಹಿಂದುಳಿದ ವರ್ಗದ ಹೆಂಗಸರಿಗೆ ಅವರು ಗರ್ಭಿಣಿಯಾದಗಲೇ ಈ ಮಗುವಿನ ಒಂದು ಬೆಳವಣಿಗೆಗಾಗಿ ಅವರಿಗೆ ಕೊನೇ ಪಕ್ಷ ೩೦೦ ರೂಪಾಯಿಯನ್ನಾದರೂ ಭತ್ಯ ಕೊಡಬೇಕೆಂದು ಸಲಹೆ ಮಾಡುತ್ತೇನೆ. ನಾನು ಈ ಮಾತನ್ನು ಕಳೆದ ಸಾಲಿನಲ್ಲೂ ಕೂಡ ಹೇಳಿದ್ದೆ. ಅದಕ್ಕೆ ಶ್ರೀ ರಾಮಕೃಷ್ಣರವರು ಉತ್ತರ ಕೊಡುತ್ತಾ ಏನು ಹೇಳಿದರು ಎಂದರೆ ಅದನ್ನು ಪರಿಶೀಲನೆ ಮಾಡು

ತ್ತೇನೆಂದು ಹೇಳಿದರು. ಅವರು ಹೇಳಿ ಎರಡು ವರ್ಷವಾಯಿತು. ಇನ್ನೂ ಹಾಗೆಯೇ ಹೇಳುತ್ತಿದ್ದಾರೆ. ಆದುದರಿಂದ ಈ ಬಗ್ಗೆ ಈಗಲಾದರೂ ಒಂದು ಕರಾರುವಾಕ್ಕಾದ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ಈ ಸಮಾಜದಲ್ಲಿರತಕ್ಕಂಥಾ ಹೆಂಗಸರು ಇತರರಂತೆ ಚೆನ್ನಾಗಿ ಬದುಕಬೇಕಾದರೆ, ಇವರು ಒಳ್ಳೆಯ ರೀತಿಯಲ್ಲಿ ಸರ್ವಾಂಗೀಣವಾಗಿ ಅಭಿವೃದ್ಧಿ ಮಾಡಬೇಕಾದರೆ ನಾನು ಮೊದಲೇ ಹೇಳಿದ ಹಾಗೆ, ನಾನು ಮೊದಲು ಹೇಳಿದ ಸಲಹೆಗೆ ತಾವು ಪುರಸ್ಕಾರ ಕೊಡಬೇಕೆಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೇ, ನಾನು ಮುಖ್ಯವಾಗಿ ಮಹಿಳೆಯರು ಮತ್ತು ಶಿಶುಕಲ್ಯಾಣದ ಬಗ್ಗೆ ಕೆಲವು ಮಾತುಗಳನ್ನು ಆಡಬೇಕೆಂದು ಇಚ್ಛೆಪಡುತ್ತೇನೆ. ಕಾರಣ ಅದರಲ್ಲೂ ಮಕ್ಕಳ ಶಿಶುಪಾಲನೆ ಬಗ್ಗೆ ಕೆಲವಾರು ಸಲ ಗ್ರಾಮದಲ್ಲಿ ನಾನೂ ಕೂಡ ಭಾಗವಹಿಸಿರುವುದರಿಂದ ಅದರಲ್ಲಿ ನನ್ನ ಕರ್ತವ್ಯವನ್ನೂ ಸಹ ಮಾಡುತ್ತಾ ಇರುವುದರಿಂದ ಅದರ ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಮಾನ್ಯ ಮಂತ್ರಿಗಳು ನಾನು ಹೇಳಿದುದರ ಕಡೆ ಗಮನಿಸಿ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳುತ್ತೇನೆ.

ಮೊದಲನೆಯದಾಗಿ ಹೇಳುವುದೇನೆಂದರೆ ಈವೊತ್ತಿನ ದಿವಸ ಅಂಗನವಾಡಿ ಕೇಂದ್ರಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಹಾಗೂ ನಗರದ ಕೊಳಚೆ ಪ್ರದೇಶಗಳಲ್ಲಿ ಪ್ರಾರಂಭ ಮಾಡಬೇಕು ಅಂತ ಏನು ಮಾಡಿದ್ದೀರೋ ಅದು ಒಳ್ಳೆಯ ಯೋಜನೆ ಎಂದು ಹೇಳುತ್ತೇನೆ. ಈಗ ತಾನೇ ಮಾನ್ಯ ಸದಸ್ಯರು ಹೇಳಿದ ಹಾಗೆ ಅಂಗನವಾಡಿಯಲ್ಲಿ ಕೆಲಸಮಾಡತಕ್ಕಂಥಾ ಕಾರ್ಯಕರ್ತರು ಏನು ಇದ್ದಾರೋ ಅವರು ಪ್ರತಿಯೊಂದು ಮನೆಗೂ ಹೋಗಿ ಅವರ ಸಂಪರ್ಕವನ್ನು ಬೆಳೆಸಿಕೊಂಡು ಆ ಮಕ್ಕಳಿಗೆ ಪ್ರಯೋಜನಕಾರಿಯಾಗುವಂತೆ ಆಗುಬೇಕು ಅನ್ನುವ ಉದ್ದೇಶ ತಾವೇನು ಇಟ್ಟುಕೊಂಡಿದ್ದೀರಿ ಅದು ಒಳ್ಳೆಯದೇ ಮಾನ್ಯ ವಿಶ್ವನಾಥರವರು ಹೇಳಿದ ಹಾಗೆ ಇದು ಹಿಂದುಳಿದ ವರ್ಗದ ಸಮಾಜದಲ್ಲಿ ಯಾರು ಹಿಂದುಳಿದಿದ್ದಾರೋ ಆ ಮಕ್ಕಳ ಪರಿಸ್ಥಿತಿ ಆರ್ಥಿಕವಾಗಿ ಹಿಂದುಳಿದಿರುವುದರಿಂದ ಅವರ ಬಗ್ಗೆ ನಾವು ವಿಶೇಷವಾಗಿ ಗಮನ ಕೊಡಬೇಕಾಗುತ್ತದೆ. ಈ ಹ್ಯಾಂಡಿಕ್ಯಾಪ್‌ನಲ್ಲಿ ಈ ಮೂರು ಗುಂಪುಗಳು ಏನು ಇದೆ ಅದರಲ್ಲೂ ಈ ಅಂಗವಿಕಲತೆ ಏನು ಇದೆ ಅವರು ಸಮಾಜದಲ್ಲಿ ಬಹಳ ಹಿಂದುಳಿದಿರುವುದಕ್ಕೆ ಮುಖ್ಯವಾದ ಕಾರಣ ಅಕ್ಷರತೆ ಇಲ್ಲದೇ ಇರುವುದು. ಇದನ್ನು ಗುರುತಿಸುವ ವ್ಯಕ್ತಿಗಳು ಯಾರು ಎಂದರೆ ಈ ಅಂಗನವಾಡಿಗಳ ಕಾರ್ಯಕರ್ತರು. ಇದರ ಜೊತೆಗೆ ಅವರಿಗೆ ವೈದ್ಯಕೀಯ ಸಿಬ್ಬಂದಿಯನ್ನೂ ಕೂಡ ಕೊಟ್ಟಿದ್ದಾರೆ. ಅವರು ಮನೆ ಮನೆಗೆ ಹೋಗಿ ಇಂಥಾವರನ್ನು ಗುರುತಿಸಬೇಕಾದುದು ಬಹು ಮುಖ್ಯ. ಆದರೆ ಈ ಯೋಜನೆ ಯಾವ ಪ್ರಮಾಣದಲ್ಲಿ ಆಗಬೇಕೋ ಅಷ್ಟು ಆಗಿಲ್ಲ. ಈ ಅಂಗನವಾಡಿಗಳು ಮನೆ ಮನೆಗೂ ಹೋಗಿ ಅವರನ್ನು ಗುರುತಿಸಿ ಅವರಿಗೆ ಕೊಡಬೇಕಾದಂಥಾ ಪೌಷ್ಟಿಕ ಆಹಾರ ಮತ್ತು ಶಿಕ್ಷಣವನ್ನು ಕೊಡುವ ಹಾಗೆ ಮಾಡಬೇಕು. ಅವರು ಇದರ ಬಗ್ಗೆ ಹೆಚ್ಚು ಹೆಚ್ಚು ಸಂಪರ್ಕ ಇಟ್ಟುಕೊಂಡು ಪ್ರತಿಯೊಂದು ಪ್ರದೇಶಕ್ಕೂ ಹೋಗಿ ಅಲ್ಲಿರುವ ಪ್ರತಿಯೊಂದು ಮನೆ ಮನೆಗೂ ಹೋಗಿ ಅಂಗವಿಕಲರು ಯಾರ್ಯಾರು ಇದ್ದಾರೋ ಅವರನ್ನು ಗುರುತಿಸಬೇಕು. ಇದರಲ್ಲಿ ಫಿಜಿಕಲಿ ಹ್ಯಾಂಡಿ ಕ್ಯಾಪ್ ಯಾರು ಆಗಿರಬಹುದು, ಮಾನಸಿಕವಾಗಿ ಯಾರು ಆಗಿರಬಹುದು, ಬುದ್ಧಿಮಾಂದ್ಯತೆ ಯಾರು ಆಗಿರಬಹುದು. ಇದನ್ನು ಗುರುತಿಸಬೇಕಾದರೆ ಚಿಕ್ಕಮಕ್ಕಳ ವಯಸ್ಸಿನಲ್ಲೇ ಗುರುತಿಸುವುದಾದರೆ ಮುಂದೆ ಅವರಿಗೆ ತಕ್ಕಂತೆ ಶಿಕ್ಷಣವಾಗಲಿ ಅಥವಾ ಮತ್ತಾವುದಾಗಲಿ ತರಬೇತಿಯನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಆ ಮಕ್ಕಳ ಮುಂದಿನ ಭವಿಷ್ಯಕ್ಕೆ ತಕ್ಕಂತ ತರಬೇತಿಯನ್ನು ಕೊಟ್ಟರೆ ಆ ಮಕ್ಕಳ ಒಂದು ಭವಿಷ್ಯವೂ ಚೆನ್ನಾಗಿರುತ್ತದೆ. ಈ ಬಗ್ಗೆ ಮಾಹಿತಿಯನ್ನು ಕಲೆಕ್ಟ್ ಮಾಡುವ ಹಾಗೆ ಮನಸ್ಸು ಈ ಮಕ್ಕಳ ಇಲಾಖೆಯ ಗಮನಕ್ಕೆ ಬರಬೇಕು. ಅವರು ಮನಸ್ಸು ಮಾಡಿ ಇದರ ಬಗ್ಗೆ ಮಾಹಿತಿಯನ್ನು ಕಲೆಕ್ಟ್ ಮಾಡಿದರೆ ಆವಾಗ ಅವರಿಗೇ ಗೊತ್ತಾಗುತ್ತದೆ. ಈ ಸಮಸ್ಯೆ ಎಷ್ಟು ದೊಡ್ಡ ಪ್ರಮಾಣದಲ್ಲಿದೆ ಎಂದು. ತಮಗೇ ಗೊತ್ತಿದೆ. ಈ ಒಂದು ಅಂಗವಿಕಲತೆ ಅನ್ನುವುದು ಬರೇ ನಮ್ಮ ರಾಷ್ಟ್ರದಲ್ಲೇ ಅಲ್ಲ ಪ್ರಪಂಚದಲ್ಲೇ ಎಲ್ಲಾ ಕಡೆಯೂ ಇದೆ, ಬಹುಶಃ ಸುಮಾರು ಇರತಕ್ಕಂಥಾ ಜನಸಂಖ್ಯೆಯಲ್ಲಿ ಶೇಕಡ ೪ ಜನ ಈಗ ಇದ್ದಾರೆ. ಬುದ್ಧಿ ಮಾಂದ್ಯತೆಯಲ್ಲಿ ಶೇಕಡಾ ೨ ರಿಂದ ೨½ ಅಷ್ಟು ಆದ್ದಾರೆ. ಇದನ್ನೆಲ್ಲಾ ಸಂಪೂರ್ಣವಾಗಿ ಲೆಕ್ಕಾಚಾರ ಹಾಕಿದಾಗ ನಮ್ಮ ಕರ್ನಾಟಕದಲ್ಲಿ ೨½ ರಿಂದ ೪ ಕೋಟಿ ಪ್ರಜಾಸಂಖ್ಯೆಗೆ ಸುಮಾರು ೧೬ ಲಕ್ಷ ಮಂದಿ ಒಂದಲ್ಲ ಒಂದು ವಿಧದಲ್ಲಿ ಅಂಗವಿಕಲರಾಗಿ ನಮ್ಮ ಸಮಾಜದ ಮಧ್ಯದಲ್ಲಿ

ಇದ್ದಾರೆ. ಈ ಬಗ್ಗೆ ಇದುವರೆಗೆ ನೀವು ಎಷ್ಟು ಜನರನ್ನು ಗುರುತಿಸಿದ್ದೀರಿ, ಎಷ್ಟು ಜನಕ್ಕೆ ನಿಮ್ಮ ಸೇವೆ ಅವರಿಗೆ ಹೋಗುತ್ತಾ ಇದೆ ಎನ್ನುವುದನ್ನು ನಿಮ್ಮ ಇಲಾಖೆ ಅರ್ಥ ಮಾಡಿಕೊಳ್ಳಬೇಕು ಮತ್ತು ಇದರ ಬಗ್ಗೆ ಮುಂದಿನ ಕಾರ್ಯಕ್ರಮಗಳನ್ನು ನಿರೂಪಣೆ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ನಿಮ್ಮ ಇಲಾಖೆಯವರು ಹೆಚ್ಚಿನ ಗಮನ ಹರಿಸಿ ಇದನ್ನು ವಿಸ್ತರಿಸುವ ಹಾಗೆ, ಇದರಿಂದ ಅವರು ಪ್ರಯೋಜನ ಪಡೆಯುವ ಹಾಗೆ ಕೆಲಸ ಮಾಡಬೇಕು ಈಗ ಹಾಗೆ ಮಾಡಿಲ್ಲ, ನೀವೇನೋ ಈಗ ೧೦೦ ಬ್ಲಾಕ್ ಮಾಡಿದ್ದೀರಾ ? ೧೦ ಸಾವಿರ ಅಂಗವಿಕಲರು ಇದ್ದಾರೆ ಅಂತ ಹೇಳಿದ್ದೀರಾ. ನಾನು ಮೊದಲು ಹೇಳಿರುವ ಒಂದು ಅಂಕಿಅಂಶ ಪ್ರಕಾರ ತೆಗೆದುಕೊಂಡರೆ ರಾಜ್ಯಾದ್ಯಂತ ೨೨೦೦ ಅಂಗನವಾಡಿ ಕೇಂದ್ರಗಳು ಇರಬೇಕು, ಅದಕ್ಕೆ ತಕ್ಕಂತೆ ಕಾರ್ಯಕರ್ತರು ಇರಬೇಕು. ಈವಾಗ ನೋಡಿದರೆ ಒಂದೊಂದು ಕೇಂದ್ರದಲ್ಲಿ ಒಂದು ಸಲ ಒಬ್ಬರು ಇರುತ್ತಾರೆ, ಒಂದೊಂದು ಸಲಹೆ ಇಬ್ಬಿಬ್ಬರು ಇರುತ್ತಾರೆ. ಒಂದೊಂದು ಸಲ್ಲ ಅಲ್ಲಿ ಎಷ್ಟು ಜನ ಇರಬೇಕೋ ಅಷ್ಟು ಇರುವುದಿಲ್ಲ ಕಡಿಮೆ ಇರುತ್ತಾರೆ. ಇದನ್ನೆಲ್ಲಾ ಲೆಕ್ಕ ಹಾಕಿದರೆ ಕೇವಲ ಕೆಲವಾರು ಸಾವಿರ ಮಕ್ಕಳಿಗೆ ಅನುಕೂಲವಾಗುತ್ತದೇ ವಿನಾ ಅಷ್ಟು ದೊಡ್ಡ ಪ್ರಮಾಣದಲ್ಲಿ ಅನುಕೂಲವಾಗುತ್ತಾ ಇಲ್ಲ. ಅದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಾನು ಮೊದಲೇ ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ ಸುಮಾರು ೪ ಕೋಟಿ ಪ್ರಜಾಸಂಖ್ಯೆಯಲ್ಲಿ ಸುಮಾರು ೧೬ ಲಕ್ಷ ಮಂದಿ ಒಂದಲ್ಲ ಒಂದು ವಿಧದಲ್ಲಿ ಅಂಗವಿಕಲವಾಗಿ ಏನು ಇದ್ದಾರೆ ಇದರ ಬಗ್ಗೆ ಒಂದು ವರದಿಯನ್ನು ತರಿಸಿಕೊಂಡು ಅವರಿಗೆಲ್ಲಾ ಅನುಕೂಲಮಾಡಿಕೊಡಬೇಕು. ತಾವು ಈ ಒಂದು ಗಂಭೀರತೆಯನ್ನು ಅರ್ಥಮಾಡಿಕೊಂಡರೆ ಮಾತ್ರ ಇದರ ವಿಚಾರ ಸಂಪೂರ್ಣವಾಗಿ ತಿಳಿಯುತ್ತದೆ. ಇದರ ಜೊತೆಗೆ ವೈದ್ಯಕೀಯ ಸಿಬ್ಬಂದಿಯೂ ಇದೆ ಅಂತ ಏನು ಹೇಳಿದ್ದಿರಿ ಆದುದರಿಂದ ಅವರು ಮುಖ್ಯವಾಗಿ ಮಾಡಬೇಕಾದ ಕೆಲಸ ಏನೆಂದರೆ ಗರ್ಭಿಣಿ ಸ್ತ್ರೀಯರು ಇರುವಾಗಲೇ ಅಲ್ಲಿಂದ ಹಿಡಿದು ಮಗು ಹುಟ್ಟುವಮೊದಲೇ ಮತ್ತು ಹುಟ್ಟಿದ ಮೇಲೆ ಎರಡೂ ಕಡೆಯೂ ಅವರ ಗಮನಹರಿಸಬೇಕು. ಅವರ ಗರ್ಭಿಣಿಯಾಗಿರುವಾಗಲೀ ಆ ಗರ್ಭಿಣಿ ಸ್ತ್ರೀಯರಿಗೆ ಪೌಷ್ಟಿಕ ಆಹಾರದ ಕಡೆಗೆ ಗಮನ ಕೊಡಬೇಕು. ಈಗ ಅವರಿಗೆ ಕೊಡಬೇಕಾದರೆ ಪೌಷ್ಟಿಕ ಆಹಾರದ ಕೊರತೆ ಏನು ಇದೆ ಅದನ್ನು ಯಾವರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಅದರ ಬಗ್ಗೆ ಅವರಿಗೆ ಪೂರ್ಣವಾಗಿ ಒದಗಿಸುವುದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು ಈಗ ಆರೀತಿ ಇಲ್ಲ. ನಿಮ್ಮ ಕಾರ್ಯಕ್ರಮ ಈಗ ಸದ್ಯಕ್ಕೆ ಎಷ್ಟು ಬೇಕೋ ಅಷ್ಟಿರುತ್ತದೆ. ಆದುದರಿಂದ ಸಮಯದಲ್ಲಿ ಅದು ಸರಿಯಾದ ರೀತಿಯಲ್ಲಿ ನಿಮ್ಮ ಕಾರ್ಯಕ್ರಮ ಸಫಲವಾಗುವುದಿಲ್ಲ. ನಿಮ್ಮ ಕಾರ್ಯಕ್ರಮ ಸರಿಯಾದ ರೀತಿಯಲ್ಲಿ ಸಫಲವಾಗಬೇಕಾದರೆ, ಮುಂದೆ ಹುಟ್ಟುವ ಮಗುವಿನ ಆರೋಗ್ಯದ ಕಡೆಯೂ ಹೆಚ್ಚು ಗಮನ ಕೊಡಬೇಕು. ಪೌಷ್ಟಿಕ ಆಹಾರದ ಕಡೆಯೂ ಹೆಚ್ಚು ಗಮನ ಕೊಡಬೇಕು, ಮುಖ್ಯವಾಗಿ ಹೇಳುವುದಾದರೆ ತಾಯಿಯು ಗರ್ಭಿಣಿಯಾಗಿರುವಾಗಲೇ ಅವರ ಒಂದು ಆರೋಗ್ಯ ಮತ್ತು ಕುಡಿಯುವ ನೀರಿನ ಒಂದು ವ್ಯವಸ್ಥೆ ಮಾಡಬೇಕು. ತಮಗೆ ಹೇಳಬೇಕಾದರೆ ಈ ಅಂಗನವಾಡಿ ಕೇಂದ್ರದಲ್ಲಿ ಕುಡಿಯುವ ನೀರಿನ ಒಂದು ವ್ಯವಸ್ಥೆ ಯಾವ ಪ್ರಮಾಣಲ್ಲಿ ಮಾಡಬೇಕೋ ಆ ಪ್ರಮಾಣದಲ್ಲಿ ಮಾಡಿಲ್ಲಾ. ಅದಕ್ಕೆ ತಾವೇನು ಯೋಚನೆ ಮಾಡಿದ್ದೀರಾ ? ಈವೊತ್ತಿಗೂ ಕೂಡ ಬೆಂಗಳೂರು ನಗರಕ್ಕೆ ಸರಿಯಾಗಿ ನೀರು ಸರಬರಾಜು ಆಗುತ್ತಿಲ್ಲ. ನೀವು ಈ ಕಾವೇರಿ ಸ್ಕೀಂ ತಂದು ಆ ಮೂಲಕ ಬೆಂಗಳೂರಿನ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಚೆನ್ನಾಗಿ ಮಾಡುತ್ತೇವೆ ಅಂತ ಹೇಳಿದಿರಿ. ಅನೇಕ ಸಲ ನಾವು ನೋಡಿದ್ದೇವೆ ನೀರೇ ಸರಿಯಾಗಿ ಸರಬರಾಜು ಆಗುತ್ತಿಲ್ಲ. ಅಲ್ಲದೆ ಕೆಲವು ಸಾರಿ ಆ ನೀರು ಕಲುಷಿತವಾಗಿರುವುದರಿಂದ ಅನೇಕ ಖಾಯಿಲೆಗಳೂ, ರೋಗರುಜಿನಗಳೂ ಜನರಿಗೆ ಬರತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಆದುದುರಿಂದ ಗ್ರಾಮಾಂತರ ಪ್ರದೇಶದಲ್ಲೂ ಕೂಡ ಈ ನೀರಿನ ವ್ಯವಸ್ಥೆ ಎಷ್ಟರಮಟ್ಟಿಗೆ ವ್ಯವಸ್ಥೆಯಾದೆ ಅನ್ನುವುದನ್ನು ಅವರು ನೋಡಿಕೊಳ್ಳಬೇಕು. ಜೊತೆಗೆ ಪೌಷ್ಟಿಕ ಆಹಾರದ ಕಡೆಯೂ ಸರಿಯಾಗಿ ಗಮನ ಹರಿಸಬೇಕು. ಇವೆರಡೂ ಮುಖ್ಯವಾದ ವಿಚಾರಗಳು. ಈ ಅಂಗನವಾಡಿ ಕೇಂದ್ರದಲ್ಲಿ ವರ್ಷಕ್ಕೆ ೩೦೦ ದಿನಗಳೂ ಈ ಮಕ್ಕಳನ್ನು ಇಟ್ಟುಕೊಳ್ಳುವ ಏರ್ಪಾಡು ಮಾಡುತ್ತಿದ್ದೇವೆ ಎಂದು ಹೇಳುತ್ತೀರಿ. ನಿಮ್ಮ ಉದ್ದೇಶವೇನೋ ಒಳ್ಳೆಯದು. ಆದರೆ ಈ ಅಂಗನವಾಡಿ ಕೇಂದ್ರದಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತರು ಏನು ಇದ್ದಾರೋ ಆ ಪ್ರದೇಶಗಳಲ್ಲಿರತಕ್ಕಂಥಾ ಜನರಲ್ಲಿ ಹೆಚ್ಚು ಸಂಪರ್ಕ ಇರುವುದರಿಂದ ಅವರು ಕುಟುಂಬ ಯೋಜನೆಯ ವಿಚಾರದಲ್ಲಿ, ಮಾಹಿತಿಕೊಡಬಹುದು ಅಲ್ಲದೆ ಅವರ ಶೌಚದ ಬಗ್ಗೆ ಆ ಮನೆಯವರಿಗೆ ತಿಳುವಳಿಕೆ ಕೊಡಬೇಕು. ಈ ಅಂಗನವಾಡಿಯಲ್ಲಿರತಕ್ಕಂಥಾ ಮಕ್ಕಳನ್ನು ತಾವು ನೋಡಿರಬಹುದು. ನಾನು ಕೊಳಚೆ ಪ್ರದೇಶಗಳಲ್ಲಿರತಕ್ಕಂಥಾ ಹುಡುಗರನ್ನು ನೋಡಿದ್ದೇನೆ, ಅವರು ಶೌಚವಾಗಿ ಇರುವುದನ್ನೇ ನಾನು

ನೋಡಿಲ್ಲಾ. ಇದಕ್ಕೆ ಕಾರಣ ತಾಯಂದಿರೇ ಎಂದು ಹೇಳುತ್ತೇನೆ. ಅದುದರಿಂದ ಅವರು ಮೊದಲು ಆ ತಾಯಂದಿರಿಗೆ ಹೇಳಬೇಕು, ಮಕ್ಕಳನ್ನು ಶಾಲೆಗೆ ಕಳುಹಿಸುವಾಗ ಸ್ನಾನ ಮಾಡಿಸಿ ಶುದ್ಧವಾಗಿ ಕಳುಹಿಸಬೇಕು ಎಂದು. ಸರ್ಕಾರದವರು ಅವರಿಗೆ ಏನು ಶಿಕ್ಷಣ ಕೊಡುತ್ತಿದ್ದಾರೋ ಅದು ಒಳ್ಳೆಯದಾಗಿ ಸಫಲವಾಗಬೇಕಾದರೆ ಆ ಮಕ್ಕಳ ತಾಯಂದಿರನ್ನು ಮನವೊಲಿಸಿ ಆ ಮಕ್ಕಳನ್ನು ಶುಚಿಯಾಗಿ ಇಡುವಂತೆ ಮಾಡಬೇಕು. ಏತಕ್ಕೆಂದರೆ ಅವರೇ ಮುಂದಿನ ಪ್ರಜೆಗಳಾಗುವುದರಿಂದ ಅವರು ಈಗಿನಿಂದಲೇ ತಮ್ಮ ಶುಚಿತ್ವವನ್ನು ಕಾಪಾಡಿಕೊಂಡು ಬರುವ ಹಾಗೆ ಒಂದು ಏರ್ಪಾಡು ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮುಖ್ಯವಾಗಿ ಆ ಪ್ರದೇಶದಲ್ಲಿರತಕ್ಕ ಮಕ್ಕಳಲ್ಲಿ ಮತ್ತು ತಾಯಂದಿರಿಗೆ ಈ ಕಾರ್ಯಕರ್ತೆಯರು ಶೌಚ್ಯತೆಯ ಬಗ್ಗೆ ತಿಳುವಳಿಕೆಯನ್ನು ಕೊಡತಕ್ಕದ್ದು ಅವಶ್ಯಕ ಎಂದು ನನ್ನ ಅನಿಸಿಕೆ. ಈ ಅಂಗನಾಡಿ ಕಾರ್ಯಕರ್ತೆಯರು ಸ್ಥಳಕ್ಕೆ ಹೋದಾಗ ಮಕ್ಕಳಲ್ಲಿರುವ ಅಂಗವಿಕಲತೆಯ ಬಗ್ಗೆ ಕಂಡುಹಿಡಿಯುವುದು ಅವರಿಗೆ ಸುಲಭವಾಗಬಹುದು ಆದರೆ ಅವರ ಬುದ್ಧಿಮಾಂಧತೆಯನ್ನು ಕಂಡುಹಿಡಿಯುವುದು ಸ್ವಲ್ಪ ಕಷ್ಟವಾಗುತ್ತದೆ. ಅದಕ್ಕೋಸ್ಕರ ಸರಿಯಾದ ತರಬೇತಿಯನ್ನು ಇವರಿಗೆ ಕೊಡತಕ್ಕದು ಅವಶ್ಯಕ. ಇವರಿಗೆ ಸರಿಯಾದ ಒಂದು ಓರಿಯೆಂಟೇಷನ್ ಕೋರ್ಸನ್ನು ಬೆಂಗಳೂರು ನಗರದಲ್ಲಿ ತೆರೆಯಬೇಕು ಎಂದು ನಾನು ಹೇಳುತ್ತೇನೆ. ಬೆಂಗಳೂರಿನಲ್ಲಿ ನಿಮ್‌ಹಾನ್ಸ್ ಸಂಸ್ಥೆ ಏನು ಇದೆ ಅಲ್ಲಿಂದ ಕೆಲವಾರು ಪ್ರದೇಶಗಳಿಗೆ ಡಾಕ್ಟರುಗಳು ಹೋಗಿ ಈ ಕಾರ್ಯಕರ್ತೆಯರಿಗೆ ತರಬೇತಿ ಕೊಡುವಂಥ ಕೆಲಸವನ್ನು ಮಾಡಬೇಕು. ಅಲ್ಲದೆ ಇವರು ಗ್ರಾಮಾಂತರ ಪ್ರದೇಶಗಳಿಗೂ ಹೋಗಿ ಮಕ್ಕಳಲ್ಲಿರುವ ಬುದ್ಧಿಮಾಂಧತೆಯ ಬಗ್ಗೆ ತಂದೆತಾಯಂದಿರಿಗೆ ತಿಳುವಳಿಕೆಯನ್ನು ಕೊಟ್ಟು, ಬೇಕಾದಂಥ ಸಲಹೆಗಳನ್ನು ಕೊಟ್ಟು ಸಹಾಯ ಮಾಡಬೇಕು ಎಂದು ನಾನು ಹೇಳುತ್ತೇನೆ. ನನಗೆ ಗೊತ್ತಿರುವ ಹಾಗೆ ನಾನೂ ಸಹ ಇಂಥ ಒಂದೆರಡು ಸ್ಥಳಗಳಿಗೆ ಹೋಗುವಂಥ ಅವಕಾಶ ಸಿಕ್ಕಿತ್ತು. ಚಿಕ್ಕಬಳ್ಳಾಪುರ, ಕನಕಪುರ ಮತ್ತು ದೊಡ್ಡಬಳ್ಳಾಪುರ ಈ ಸ್ಥಳಗಳಿಗೆ ಹೋಗುವ ಅವಕಾಶ ನನಗೆ ದೊರೆತಿತ್ತು. ಅವರು ಅಲ್ಲಿ ಏನು ಮಾಡುತ್ತಾರೆಂದರೆ, ಸರ್ಕಾರದವರು ಏನು ಕೆಲವು ವ್ಯವಸ್ಥೆಗಳನ್ನು ಮಾಡಿದ್ದಾರೆಯೋ ಅದರ ಪ್ರಕಾರ ಅಲ್ಲಿ ಕೆಲಸ ನಡೆಯುತ್ತಿದೆ. ಆದರೆ ಪ್ರೈಮರಿ ಸ್ಕೂಲುಗಳಲ್ಲಿ ಶಿಕ್ಷಕರು ಸರಿಯಾದ ತರಬೇತಿ ಇಲ್ಲದೆ ಇರುವುದರಿಂದ ಅಂಗವಿಕಲತೆಯನ್ನು ಚಿಕ್ಕವಯಸ್ಸಿನಲ್ಲಿ ಕಂಡುಹಿಡಿಯುವುದು ಕಷ್ಟವಾಗಿದೆ. ರಿಟಾರ್ಡೇಷನ್ ಎಂದು ನಾವು ಏನು ಹೇಳುತ್ತೇವೆಯೋ—ಸ್ಲೋ ಲರ್ನಿಂಗ್ ಎಂದು ಏನು ಹೇಳುತ್ತೇವೆಯೋ ಅದನ್ನು ಚಿಕ್ಕವಯಸ್ಸಿನಲ್ಲಿ ಕಂಡುಹಿಡಿದು ಅವರಿಗೆ ಸೆನ್ಸರಿ ಸ್ಟಿಮುಲೇಷನ್ ಪ್ರತಿಯೊಂದು ಹಂತದಲ್ಲಿ ಸರಿಯಾದ ರೀತಿಯಲ್ಲಿ ಬರುವಂತೆ ಮಾಡಿ ಸತ್ಪ್ರಜೆಗಳನ್ನಾಗಿ ಮಾಡಬೇಕಾಗಿದೆ. ಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿಯೇ ಇಂಥ ವ್ಯವಸ್ಥೆಯನ್ನು ನಾವು ಮಾಡಿದರೆ ಅವರು ಉತ್ತಮರಾಗುತ್ತಾರೆಂದು ಡಾಕ್ಟರುಗಳು ತಿಳಿಸಿದ್ದಾರೆ. ನನಗೂ ಸ್ವಲ್ಪ ಈ ವಿಷಯದಲ್ಲಿ ಅನುಭವ ಇದೆ. ಮಗುವು ೧೦–೧೫ ವರ್ಷದ್ದಾದರೂ ತಂದೆತಾಯಿಗಳಿಗೆ ತಮ್ಮ ಮಕ್ಕಳ ಸ್ಥಿತಿಯನ್ನು ಅರ್ಥಮಾಡಿಕೊಂಡಿರುವುದಿಲ್ಲ. ಶಾಲೆಗೆ ಕಳುಹಿಸುತ್ತಾರೆ, ಅಲ್ಲಿ ಸುಮ್ಮನೆ ಪಾಸ್ ಆಗಿಕೊಂಡು ಹೋಗುವುದರಿಂದ ಏನೂ ಗೊತ್ತಾಗುವುದಿಲ್ಲ, ಕೊನೆಯಲ್ಲಿ ಅವನು ಬುದ್ಧಿಮಾಂದತೆಯಿಂದ ನರಳಿದಾಗ ಇವರು ಪಶ್ಚಾತ್ತಾಪ ಪಡುತ್ತಾರೆ. ಆದ್ದರಿಂದ ಮಕ್ಕಳಿಗೆ ಚಿಕ್ಕವಯಸ್ಸಿನಲ್ಲಿಯೇ ತಂದೆತಾಯಿಗಳು ಸರಿಯಾದ ನಿಗ ವಹಿಸಿ ಮಕ್ಕಳಿಗೆ ತರಬೇತಿ ಕೊಟ್ಟಿದ್ದರೆ ಮಕ್ಕಳು ಉತ್ತಮ ಸ್ಥಿತಿಗೆ ಬಂದೇ ಬರುತ್ತಾರೆ.

ಇನ್ನೊಂದು ಶೋಚನೀಯ ಪರಿಸ್ಥಿತಿ ಎಂದರೆ, ರಿಟಾರ್ಡೇಷನ್‌ನಲ್ಲಿ ನಾಲ್ಕು ಗ್ರೇಡುಗಳು ಇವೆ. ಒಂದು, ಮಾಡರೇಟ್ ರಿಟಾರ್ಡೇಷನ್, ಮಾಡಲ್ ರಿಟಾರ್ಡೇಷನ್, ಸಿವಿಯರ್ ರಿಟಾರ್ಡೇಷನ್ ಮತ್ತು ಪ್ರಫೌಂಡ್ ರಿಟಾರ್ಡೇಷನ್. ಕೊನೆಯ ಎರಡು ಸಿವಿಯರ್ ಮತ್ತು ಪ್ರಫೌಂಡ್ ರಿಟಾರ್ಡೇಷನ್ ಗ್ರೇಡ್‌ನಲ್ಲಿ : ಮಕ್ಕಳ ಬುದ್ಧಿಯನ್ನು ಬೇರೆ ಯಾರೂ ನೋಡಬೇಕಾದ್ದು ಇಲ್ಲ. ಅಷ್ಟು ಕಷ್ಟ ಪರಿಸ್ಥಿತಿ ಅವರಿಗೆ ಇರುತ್ತದೆ. ಇವರು ೧೦–೧೫ ವರ್ಷದವರೆಗೂ ಸಹ ಶೌಚ್ಯ ಮಾಡಿಕೊಳ್ಳುವುದಾಗಲೀ ಟಾಯಿಲಟ್ ಆಗಲಿ ಹಾಸಿಗೆಯಲ್ಲಿ ಮಾಡಿಕೊಂಡಿರುವ ಅರಿವೇ ಇರುವುದಿಲ್ಲ. ಮಕ್ಕಳ ತಂದೆತಾಯಿಗಳೇ ಇವರುಗಳನ್ನು ಸುಧಾರಿಸಬೇಕಾದ ಪರಿಸ್ಥಿತಿ ಇರುತ್ತದೆ. ಆದ್ದರಿಂದ ಚಿಕ್ಕವಯಸ್ಸಿನಲ್ಲಿಯೇ ಸರಿಯಾದ ತರಬೇತಿಯನ್ನು ಇವರಿಗೆ ಕೊಟ್ಟಿದ್ದರೆ, ಇಂಥ ಕಷ್ಟಪರಿಸ್ಥಿತಿಯಲ್ಲಿ ಇವರು ಇರಬೇಕಾಗಿರಲಿಲ್ಲ. ಇವರಿಗೆ ಊಟ ಮಾಡುವುದೂ ಗೊತ್ತಿರುವುದಿಲ್ಲ, ಇಂಥ ಶೋಚನೀಯ ಪರಿಸ್ಥಿತಿ ಇರುತ್ತದೆ. ಬೆಂಗಳೂರಿನಲ್ಲಿ ೩೦–೪೦ ಲಕ್ಷ ಜನಸಂಖ್ಯೆಯಲ್ಲಿ ಸುಮಾರು ೫೦–೬೦ ಸಾವಿರ ಜನರು ಇಂಥವರು ಇದ್ದಾರೆಂದರೆ ಅದು

ಅತಿಶಯೋಕ್ತಿಯಾಗಲಾರದು. ಇವರು ಎಲ್ಲಿಯೋ ಇದ್ದಾರೆ, ಇವರನ್ನು ಯಾರೂ ಕಂಡುಹಿಡಿದಿಲ್ಲ. ಕೆಲವೊಂದು ಪರಿಸ್ಥಿತಿಗಳು ಮಾತ್ರ ನಮ್ಮ ಗಮನಕ್ಕೆ ಬಂದಿವೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಗಂಡ ಹೆಂಡಿರು ಇಬ್ಬರೂ ಕೆಲಸಕ್ಕೆ ಹೋಗುವಾಗ ತಮ್ಮ ಮಕ್ಕಳನ್ನು ಮನೆಯಲ್ಲಿ ಕಟ್ಟಿಹಾಕಿ ಹೊರಗೆ ಹೋಗುವಂಥ ಪರಿಸ್ಥಿತಿ ಇದೆ. ಇಂಥ ಸಂದರ್ಭದಲ್ಲಿ ಮಕ್ಕಳ ಬುದ್ಧಿಮಾಂಧತೆಯನ್ನು ಗುರುತಿಸುವುದು ಕಷ್ಟವಾಗುತ್ತದೆ. ಬಾಲವಾಡಿ ಮತ್ತು ಅಂಗನವಾಡಿ ಹಂತದಲ್ಲಿಯೇ ಈ ಮಕ್ಕಳನ್ನು ಗುರುತಿಸಿ ಇವರಿಗೆ ಒಂದು ಸ್ಪೆಷಲ್ ಸ್ಕೂಲನ್ನು ತೆಗೆದು ಸರಿಯಾದ ತರಬೇತಿ ಕೊಡಬೇಕು. ಬೆಂಗಳೂರಿನಲ್ಲಿ ಇಂಥ ಸ್ಪೆಷಲ್ ಸ್ಕೂಲುಗಳು ಸುಮಾರು ೧೫–೨೦ ಇವೆಯೆಂದು ನಾನು ತಿಳಿದಿದ್ದೇನೆ. ಈ ವಿಷಯದಲ್ಲಿ ಸೋಫಿಯಾ ಸ್ಕೂಲು ಇಂಡಿಯಾ ದೇಶದಲ್ಲಿ ಹೆಸರು ವಾಸಿಯಾಗಿದೆ, ಇಲ್ಲಿ ಅಪರ್ಚುನಿಟಿ ಸೆಕ್ಷನ್ ಎಂದು ಒಂದು ಸ್ಪೆಷಲ್ ಸೆಕ್ಷನ್‌ನ್ನು ಇಟ್ಟುಕೊಂಡಿದ್ದಾರೆ. ಇಲ್ಲಿಯ ಮಕ್ಕಳಿಗೆ ಬೇರೆ ರೀತಿಯ ಶಿಕ್ಷಣವನ್ನು ಕೊಡುವಂಥ ಒಂದು ವ್ಯವಸ್ಥೆಯನ್ನು ಅವರು ಇಟ್ಟುಕೊಂಡಿದ್ದಾರೆ. ಅಲ್ಲದೆ ಅವರು ಈ ಮಕ್ಕಳಿಗೆ ಯಾವ ರೀತಿಯ ಶಿಕ್ಷಣವನ್ನು ಕೊಡಬೇಕು ಎಂದೂ ಕೂಡ ಹೇಳುತ್ತಾರೆ. ಇಂಥ ಶಾಲೆಗಳನ್ನು ನಮ್ಮ ಸರ್ಕಾರದ ವತಿಯಿಂದ ಮಾಡಲಿಕ್ಕೆ ಸಾಧ್ಯವೋ ಏನೋ ಗೊತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಇಂಥ ಸ್ಕೂಲುಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿ ಮಾಡಬೇಕಾಗಿ ಬರುತ್ತದೆ. ಈ ರೀತಿಯಾಗಿ ಸರ್ಕಾರದವರು ಯೋಚನೆ ಮಾಡಿ ಮಾಡಿದರೆ ಆ ಪ್ರದೇಶದಲ್ಲಿರುವ ಮಕ್ಕಳಿಗೆ ತುಂಬಾ ಅನುಕೂಲವಾಗುತ್ತದೆ. ನಾನು ಹೇಳಿದ ರೀತಿಯಲ್ಲಿ 'ಅಪರ್ಚುನಿಟಿ ಸೆಕ್ಷನ್' ಏನು ಇದೆ ಇದರ ಉಪಾಧ್ಯಾಯರೂ ಕೂಡ ಬೇರೆ ಒಂದು ತರಬೇತಿಯನ್ನು ಪಡೆಯಬೇಕಾಗಿರುತ್ತದೆ. ಇದಕ್ಕೂ ಕೂಡ ನಮ್ಮಲ್ಲಿ ಸರಿಯಾದ ವ್ಯವಸ್ಥೆಯಿಲ್ಲ. ಬೆಂಗಳೂರು ನಗರದಲ್ಲಿ ಎಲ್ಲಿಯೋ ಒಂದು ಕಡೆ ಬುದ್ಧಿಮಾಂಧತೆಯ ಮಕ್ಕಳ ಉಪಾಧ್ಯಾಯರಿಗೆ ಒಂದು ಟ್ರೈನಿಂಗ್ ಕೋರ್ಸ್ ಇದೆಯೆಂದು ನಾನು ಕೇಳಿದ್ದೇನೆ. ಇದು ಸಾಲದು, ನಿಮ್ಮ ಉಪಾಧ್ಯಾಯರಲ್ಲಿ ಬಿ.ಇ.ಡಿ. ಮತ್ತು ಟಿ.ಸಿ.ಎಚ್. ಆದವರನ್ನು ಇಂಥ ಕೆಲವು ಓರಿಯಂಟೇಷನ್ ಕೋರ್ಸ್‌ನಲ್ಲಿ ತರಬೇತಿಯನ್ನು ಪಡೆಯುವಂತೆ ವ್ಯವಸ್ಥೆ ಮಾಡಿ ಇವರ ಮೂಲಕ ಅಂಗನವಾಡಿ ಮತ್ತು ಬಾಲವಾಡಿ ಕಾರ್ಯಕರ್ತೆಯರಿಗೆ ತಿಳುವಳಿಕೆಯನ್ನು ಕೊಡುವಂಥ ವ್ಯವಸ್ಥೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಇದಲ್ಲದೆ, ಇವರಿಗೆ ಆಹಾರದ ಕೊರತೆಯ ವಿಚಾರದಲ್ಲಿಯೂ ಮತ್ತು ಇನ್ನೂ ಅನೇಕ ರೀತಿಯ ತರಬೇತಿಯನ್ನು ಕೊಟ್ಟು ಮೊದಲ ಹಂತದಲ್ಲಿಯೇ ಮಕ್ಕಳ ಬುದ್ಧಿಮಾಂಧತೆಯನ್ನು ಗುರುತಿಸುವಂಥ ಕೆಲಸ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯವೆಂದರೆ, ಇವರಿಗೆ ಆರ್ಥಿಕ ನೆರವನ್ನು ಕೊಡುವ ಬಗ್ಗೆ ಮಕ್ಕಳ ತಂದೆತಾಯಿಗಳ ಆದಾಯ ಯಾರಿಗೆ ೩,೬೦೦ ರೂಪಾಯಿಗಳು ಇದೆಯೋ ಅವರಿಗೆ ೪೦ ರೂಪಾಯಿಗಳ ಆರ್ಥಿಕ ನೆರವನ್ನು ಕೊಡುತ್ತಿದ್ದೀರಿ. ಬುದ್ಧಿಮಾಂಧತೆಯ ಮಕ್ಕಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕಾದರೆ ತಾವು ಕೊಡುವಂಥ ಹಣ ಏನೂ ಸಾಲದು. ಇದರಲ್ಲಿ ತಾವು ಕೆಲವೊಂದು ಕಂಡೀಷನ್ಸ್ ಕೂಡ ಹಾಕುತ್ತಿದ್ದೀರಿ ; ಅವೇನೆಂದರೆ, ಐ.ಕ್ಯೂ. ೩೫ ಪರ್ಸೆಂಟ್ ಇರಬೇಕು, ಮತ್ತು ಇದು ರಿಟಾರ್ಡೇಷನ್ ಎರಡು ಕೊನೆಯ ಹಂತರದಲ್ಲಿರತಕ್ಕ ಮಕ್ಕಳಿಗೆ ಸಿಕ್ಕಬಹುದು. ಮೊದಲನೆಯ ಎರಡು ಹಂತದಲ್ಲಿರುವವರಿಗೆ ಅಂದರೆ, ಮಾಡರೇಟ್ ಮತ್ತು ಮಾಡಲ್ ರಿಟಾರ್ಡೇಷನ್ ಮಕ್ಕಳಿಗೆ ತಮ್ಮ ಆರ್ಥಿಕ ನೆರವು ದೊರೆಯುವುದಿಲ್ಲ ಆದರೆ ಈ ಮಕ್ಕಳೂ ಸಹ ಹೆಚ್ಚು ಕಡಿಮೆ ಇದೇ ಪರಿಸ್ಥಿತಿಯಲ್ಲಿ ಇರುತ್ತಾರೆ, ಪ್ರಯುಕ್ತ ಈ ಮಕ್ಕಳಿಗೂ ಸಹ ಆರ್ಥಿಕ ನೆರವನ್ನು ಕೊಡುವುದು ಅವಶ್ಯಕ ಎಂದು ನಾನು ಹೇಳುತ್ತೇನೆ. ಪೋಷಕರ ಹಾಗೂ ತಂದೆತಾಯಿಗಳ ಆದಾಯದ ಬಗ್ಗೆ ಎರಡು ಮಾತನ್ನು ಹೇಳಬೇಕಾಗಿದೆ. ೩,೬೦೦ ರೂಪಾಯಿಗಳ ಆದಾಯದ ಮಿತಿಯನ್ನು ತಾವು ಹಾಕಿದ್ದೀರಿ ಈಗಿನ ಕಾಲದಲ್ಲಿ ಒಬ್ಬ ಕ್ಲಾಸ್ ೪ ಎಂಪ್ಲಾಯಿಂಗ್ ಕೂಡಾ ತಿಂಗಳಿಗೆ ೫೦೦ ರೂಪಾಯಿಗಳ ಸಂಬಳ ಬಂದರೆ, ವಾರ್ಷಿಕ ಆದಾಯ ೬,೦೦೦ ರೂಪಾಯಿಗಳಾಗುತ್ತದೆ. ಈ ಒಂದು ಆದಾಯ ನಮ್ಮ ಪೌರಕಾರ್ಮಿಕರಿಗೂ ಇರುತ್ತದೆ. ಆದ್ದರಿಂದ ತಮ್ಮ ಮಿತಿ ಏನು ಇದೆ ಅದನ್ನು ೬,೦೦೦ ರೂಪಾಯಿಗಳವರೆಗೂ ಏರಿಸಿ ಈ ವರ್ಗದವರಿಗೂ ತಾವು ಅನುಕೂಲ ಮಾಡಬೇಕು ಎಂದು ನಾನು ಹೇಳುತ್ತೇನೆ. ಅಲ್ಲದೆ ನಾಲ್ಕು ವರ್ಗಗಳ ಬುದ್ಧಿಮಾಂದತೆ ಏನು ಇದೆ ಅದನ್ನೂ ಸಹ ತಾವು ಪರಿಗಣಿಸಿ ಆರ್ಥಿಕ ನೆರವನ್ನು ಕೊಡುವ ಯೋಚನೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಮತ್ತು ಇವರಿಗೆ ಉದ್ಯೋಗದ ಬಗ್ಗೆ ನಾಲು ಪರ್ಸೆಂಟ್ ರಿಸರ್ವ್ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಒಬ್ಬ ಅಂಧನಿಗೆ ಡಾಕ್ಟರ್ ಕೆಲಸವನ್ನು ಕೊಟ್ಟಿದ್ದಾರೆ, ಕಳೆದ ಎರಡು ವರ್ಷದಿಂದ ಅಂಧ ಡಾಕ್ಟರ್ ಕೆಲಸ ಮಾಡುತ್ತಿದ್ದಾನೆ. ಅದೇರೀತಿ ಬಿ. ಎಚ್. ಇ. ಎಲ್. ನಲ್ಲಿ ನಾವು

ಸಾಕಷ್ಟು ಪ್ರಯತ್ನ ಮಾಡಿದ್ದರಿಂದ ಒಬ್ಬ ಕುರುಡನಿಗೆ ಮತ್ತು ಕಿವುಡನಿಗೆ ಕೆಲಸ ಸಿಕ್ಕಿದೆ. ನಮ್ಮ ರಾಜ್ಯ ಸರ್ಕಾರದ ಇಲಾಖೆಗಳಲ್ಲೇ ಆಗಲಿ ಅಥವಾ ಖಾಸಗೀ ಕೈಗಾರಿಕೆಗಳಲ್ಲೇ ಆಗಲಿ, ನಮ್ಮ ನೆರವು ಪಡೆದಂತಹ ಕೈಗಾರಿಕೆಗಳಲ್ಲೇ ಆಗಲಿ ಅವರಿಗೆ ಮೀಸಲಾತಿ ಹುದ್ದೆಗಳನ್ನು ಕೊಡುವುದಕ್ಕೆ ನಾವು ಒತ್ತಾಯ ಮಾಡ ಬೇಕಾಗುತ್ತದೆ. ಫಿಸಿಕಲ್ ಹ್ಯಾಂಡಿಕ್ಯಾಪ್ಡ್ ಪರ್ಸನ್ಸ್ ಯಾರು ಆಯಾ ಭಾಗದಲ್ಲಿ ಒಳ್ಳೆಯ ತರಬೇತಿ ಯನ್ನು ಪಡೆದು ಅರ್ಹತೆಯನ್ನು ಹೊಂದಿರುತ್ತಾರೋ ಅಂತಹವರಿಗೆ ಕೆಲಸ ಕೊಡುವುದಕ್ಕೆ ಅಲ್ಲಿ ಒತ್ತಾಯ ಹಾಕಬೇಕು. ಏಕೆಂದರೆ ಇವತ್ತು ಅಲ್ಲೆಲ್ಲಾ ಅವರಿಗೆ ಕೆಲಸಗಳನ್ನು ಕೊಡುತ್ತಾ ಇಲ್ಲ. ಅಲ್ಲಿರತಕ್ಕಂಥಾ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಇವರಿಗೆ ಅರ್ಹತೆ ಇದ್ದರೂ ಕೂಡ ಇವರಿಗಿಂತ ಬೇರೆಯವರು ಚೆನ್ನಾಗಿ ಕೆಲಸ ಮಾಡಬಲ್ಲರೇನೋ ಎನ್ನತಕ್ಕಂಥ ಭಾವನೆ ಇರುತ್ತದೆ ; ಬೇರೆಯವರಿಗೇ ಕೆಲಸಗಳನ್ನು ಕೊಡುತ್ತಾರೆ; ಆ ಭಾವನೆ ಏನಿದೆ ಅದು ತಪ್ಪು. ಯಾರಾದರಾಗಲೀ ಒಂದು ಅಂಶವನ್ನು ಮಾತ್ರ ಅರ್ಥಮಾಡಿಕೊಳ್ಳ ಬೇಕು ; ಹ್ಯಾಂಡಿಕ್ಯಾಪ್ಡ್ ಪರ್ಸನ್ಸ್‌ಗೆ ಇತರರಿಗಿಂತ ಕಾನ್‌ಸೆಂಟ್ರೇಷನ್ ಜಾಸ್ತಿ ಇರುತ್ತದೆ. ಕಿವುಡನೇ ಆಗಲೀ, ಕುರುಡನೇ ಆಗಲೀ ಆ ಸ್ಥಳದಲ್ಲಿ ಕುಳಿತಾಗ ತನಗೆ ಕೊಟ್ಟಷ್ಟು ಕೆಲಸವನ್ನು ಪೂರ್ಣ ಮಾಡಿ ಹೊರಗೆ ಹೋಗುತ್ತಾನೆ ಹೊರತಾಗಿ ಬೇರೆಯವರ ಹಾಗೆ ಕೋಟನ್ನು ಗೋಡೆಗೆ ತಗುಲಿಹಾಕಿ ಟೀ ಕುಡಿಯು ವುದಕ್ಕೆ, ಕಾಫಿ ಕುಡಿಯುವುದಕ್ಕೆ ಹೊರಗೆ ಹೋಗುವುದಿಲ್ಲ. ಇದೇ ನನ್ನ ಜೀವಕ್ಕೆ ದಾರಿ ಎಂದು ತಿಳಿದು ಕೊಂಡು ಆ ಒಂದು ಕೆಲಸದಲ್ಲಿ ಪೂರ್ಣವಾಗಿ ಕಾನ್‌ಸೆಂಟ್ರೇಷನ್ ಮಾಡುತ್ತಾನೆ. ಅಂತಹವರಿಗೆ ಕೆಲಸ ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಇನ್ನೊಂದು ವಿಚಾರವೇನೆಂದರೆ ಬೆಂಗಳೂರು ನಗರದಲ್ಲಿ ಸರ್ಕಾರದವರು ಬಾಲಭವನವನ್ನು ತೆರೆದಿದ್ದಾರೆ. ಅದು ಬಹಳ ಚೆನ್ನಾಗಿ ಇದೆ. ಅದೇ ರೀತಿ ಯಲ್ಲಿ ಜಿಲ್ಲಾ ಕೇಂದ್ರಗಳಲ್ಲೂ ಕೂಡ ಬಾಲಭವನಗಳನ್ನು ತೆರೆಯಬೇಕು ಎಂದು ಸಲಹೆ ಮಾಡುತ್ತೇನೆ. ಈ ಒಂದು ಸೃಜನಾತ್ಮಕ ಚಟುವಟಿಕೆಗಳಿಗಾಗಿ ಒಂದು ಶಿಬಿರವನ್ನು ಹೋದವರ್ಷ ಬೆಂಗಳೂರು ನಗರದಲ್ಲಿ ಮಾಡಿದ್ದರು ಎಂದು ಸರ್ಕಾರದವರು ಹೇಳಿದ್ದಾರೆ. ಆದರೆ ಈ ಸೃಜನಾತ್ಮಕ ಚಟುವಟಿಕೆಗಳಿಗಾಗಿ ಬಾಲ ಭವನದ ಕೇಂದ್ರಗಳಲ್ಲೇ ಒಂದು ಭಾಗವನ್ನು ತೆರೆಯಬೇಕಾಗುತ್ತದೆ. ಇದನ್ನು ಚಿಲ್ಡ್ರನ್ಸ್ ರಿಕ್ರಿಯೇ ಷನ್ ಸೆಂಟರ್ ಅಂತಲೇ ಅಥವಾ ಇನ್ನಾವುದೋ ಹೆಸರಿನಿಂದಲೋ ಅದನ್ನು ತೆರೆಯಬಹುದು. ನಾನು ಚೈನಾಕ್ಕೆ ಹೋಗಿದ್ದಾಗ ನೋಡಿದ್ದೇನೆ, ಅಲ್ಲಿ ನಗರಗಳಲ್ಲಿ ಮಕ್ಕಳಿಗೆ ಬಾಲಭವನದಲ್ಲೇ ಈ ಒಂದು ವ್ಯವಸ್ಥೆ ಮಾಡಿದ್ದಾರೆ ಕರಕುಶಲತೆ, ಸಂಗೀತ, ವರ್ಣಚಿತ್ರ ರಚನೆ—ಇಂತಹ ಸೃಜನಾತ್ಮಕ ಚಟುವಟಿಕೆ ಗಳನ್ನು ಬಾಲಭವನದ ಒಂದು ಭಾಗದಲ್ಲಿ ಇಟ್ಟುಕೊಂಡು ಮಾಡುತ್ತಿದ್ದಾರೆ. ಇದೇರೀತಿ ಬೆಂಗಳೂರಿನ ಬಾಲಭವನದಲ್ಲಿ ಮಾಡುವಹಾಗೆ ಜಿಲ್ಲಾ ಕೇಂದ್ರಗಳಲ್ಲೂ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಸರ್ಕಾರದವರೇನೋ ಒಳ್ಳೊಳ್ಳೆಯ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ ; ಇದನ್ನು ಯಾವತ್ತು ಮಾಡುತ್ತಾರೋ ಗೊತ್ತಿಲ್ಲ. ಇನ್ನು ಈ ಡಾಲ್ ಹೌಸ್ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಈ ಬೊಂಬೆಗಳ ಪ್ರದರ್ಶನಾಲಯ ಏನಿದೆ ಇದು ಬಹಳ ಮುಖ್ಯವಾದದ್ದು. ನಾವು ಹೊರಗಡೆ ಅನೇಕ ದೇಶಗಳಿಗೆ ಹೋಗಿ ನೋಡಿದ್ದೇವೆ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ತಾವು ಚೈನಾದ ಬಗ್ಗೆ ಹೇಳಿದಿರಲ್ಲ ; ಸಾಧಾರಣ ಎಷ್ಟು ಜನಸಂಖ್ಯೆ ಇರತಕ್ಕಂಥ ಏರಿಯಾದಲ್ಲಿ ಅದನ್ನು ಇಟ್ಟುಕೊಂಡಿದ್ದಾರೆ ?

ಶ್ರೀ ಎಂ. ಚಂದ್ರಶೇಖರ್.—ಅದು ನಗರಗಳಲ್ಲಿ ಮಾತ್ರ ಇದೆ. ಮಾನ್ಯ ಅಧ್ಯಕ್ಷರೇ, ಈ ಬೊಂಬೆಗಳ ಪ್ರದರ್ಶನಾಲಯ ನಮ್ಮ ಮಕ್ಕಳ ಹಿತದೃಷ್ಟಿಯಿಂದ ಬಹಳ ಪ್ರಾಮುಖ್ಯವಾದುದು. ಇದರಿಂದ ಚಿಕ್ಕವಯಸ್ಸಿನ ಮಕ್ಕಳಿಗೆ ನಮ್ಮ ರಾಷ್ಟ್ರದಲ್ಲಿರುವ ವಿವಿಧ ಪ್ರದೇಶಗಳ ಜನಜೀವನ, ಉಡುಗೆ ತೊಡುಗೆಗಳ ಪರಿಚಯವಾಗುವುದಲ್ಲದೆ ಈ ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿನ ಜನಜೀವನದ ಹಾಗೂ ಉಡುಗೆತೊಡುಗೆಗಳ ಪರಿಚಯವೂ ಸಹ ಆಗುತ್ತದೆ. ಈ ಬೊಂಬೆ ಪ್ರದರ್ಶನಾಲಯಗಳಿಂದ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನದ ಬಗ್ಗೆ ಕೂಡ ಅವರಿಗೆ ಪರಿಚಯ ಮಾಡಿಕೊಡಬಹುದು. ಆದ್ದರಿಂದ ಇದನ್ನು ಸದ್ಯಕ್ಕೆ ಬೆಂಗಳೂರು ನಗರದಲ್ಲಿ ಪ್ರಾರಂಭ ಮಾಡಿ ಆಮೇಲೆ ಜಿಲ್ಲಾ ಕೇಂದ್ರಗಳಲ್ಲಿ ಪ್ರಾರಂಭ ಮಾಡಿದರೆ ಅದರಿಂದ ಮಕ್ಕಳಿಗೆ ಬಹಳ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಕೊನೆಯದಾಗಿ ನಾನು ಹೇಳುವುದೇನೆಂದರೆ, ನಾವು ನಡೆಸುತ್ತಿರುವ ಒಂದು ಕೇಂದ್ರಕ್ಕೆ ತಮ್ಮನ್ನು ಕೂಡ ಕರೆದುಕೊಂಡು ಹೋಗುತ್ತೇನೆ ; ಅಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಬಗ್ಗೆ ತಾವು ಕನ್‌ವಿನ್ಸ್ ಆಗುತ್ತೀರೆಂದು ನಾನು ಭಾವಿಸುತ್ತೇನೆ. ಈ ಬುದ್ಧಿಮಾಂದ್ಯ ಮಕ್ಕಳ ಬಗ್ಗೆ ನಾನು ಏನೇನು ಸಲಹೆಗಳನ್ನು ಕೊಟ್ಟಿದ್ದೇನೆಯೋ ಅದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಕಾರ್ಯರೂಪಕ್ಕೆ ತರಬೇಕು ಎಂದು ಕೇಳಿಕೊಂಡು ಮಾನ್ಯ

ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತಂಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಮೋಟಮ್ಮ (ಮೂಡಿಗೆರೆ). —ಮಾನ್ಯ ಉಪಾಧ್ಯಕ್ಷರೇ, ಇವತ್ತು ಈ ಸಭೆಯ ಮುಂದೆ ಏನೊಂದು ಸಮಾಜ ಕಲ್ಯಾಣ ಇಲಾಖೆ ಹಾಗೂ ಮಕ್ಕಳ ಮತ್ತು ಮಹಿಳಾ ಕಲ್ಯಾಣ ಇಲಾಖೆಯ ಬೇಡಿಕೆಗಳನ್ನು ಮಂಡಿಸಿದ್ದಾರೆ ಅದನ್ನು ನಾನು ಸ್ವಾಗತಿಸುತ್ತಾ ಈ ಬಗ್ಗೆ ನಾನು ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ನಮ್ಮ ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಶ್ರೀ ಪಿ. ವೆಂಕಟರಮಣರವರು ಈ ಒಂದು ಇಲಾಖೆಯನ್ನು ವಹಿಸಿಕೊಂಡಮೇಲೆ ಕೆಲವೊಂದು ಬದಲಾವಣೆಗಳನ್ನು ಮಾಡಿದ್ದಾರೆ. ಹೆಚ್ಚಿನ ರೀತಿಯಲ್ಲಿ ಈ ಹಾಸ್ಟೆಲ್‌ಗಳನ್ನು ಸ್ಥಾಪನೆ ಮಾಡುವುದರಲ್ಲಿ ಮತ್ತು ಹಾಸ್ಟಲ್ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಹೆಚ್ಚಿಸುವುದರಲ್ಲಿ ಹಾಗೂ ಕೆಲವು ಹೊಸ ಸ್ಕೀಮ್‌ಗಳನ್ನು ಹಾಕುವುದರಲ್ಲಿ ಒಂದು ರೀತಿಯಾದ ಮಹತ್ತರವಾದ ಕಾರ್ಯವನ್ನು ಮಾಡಿದ್ದಾರೆ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಅವರ ಈ ಒಂದು ಇಲಾಖೆಯನ್ನು ವಹಿಸಿಕೊಂಡಮೇಲೆ ಇಡೀ ಸಮಾಜದಲ್ಲಿನ ಜನರ ಕಲ್ಯಾಣಕ್ಕಾಗಿ ಹೆಚ್ಚಿನ ಹಣವನ್ನು ತೆಗೆದುಕೊಂಡಿದ್ದಾರೆಯೇ ಎನ್ನುವುದು ಮೊದಲನೆಯ ಪ್ರಶ್ನೆ. ಇವತ್ತು ನಿಜವಾಗಿಯೂ ಕೂಡ ಬೇರೆ ರಾಜ್ಯಗಳಲ್ಲಿ ಈ ಹರಿಜನ ಗಿರಿಜನರ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಇಟ್ಟಿದ್ದಾರೆಯೋ ಅಷ್ಟು ಹಣವನ್ನು ಇವತ್ತು ನಮ್ಮ ರಾಜ್ಯದಲ್ಲಿ ಇಟ್ಟಿದ್ದಾರೆಯೋ ಎಂದರೆ ಎಷ್ಟು ಹಣವನ್ನು ಅವರೇ ಇಟ್ಟಿಲ್ಲ, ಆ ಹಣ ತೀರಾ ಕಡಿಮೆ. ಆಂಧ್ರ ಪ್ರದೇಶದಲ್ಲಿ ಅಲ್ಲಿನ ಸರ್ಕಾರದವರು ಜನ ಸಂಖ್ಯೆಗನುಸಾರವಾಗಿ ಸುಮಾರು ೪ ಪರ್ಸೆಂಟಿನಷ್ಟು ಹಣವನ್ನು ಇಟ್ಟಿದ್ದಾರೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತು ೧ ಪರ್ಸೆಂಟಿನಷ್ಟು ಹಣವನ್ನು ಇಟ್ಟಿದ್ದಾರೆ. ಇದು ನಿಜವಾಗಿಯೂ ಯಾವ ಮೂಲೆಗೆ ಆಗುತ್ತದೆ ಎಂದು ಕೇಳುತ್ತೇನೆ. ನಿಜವಾಗಿಯೂ ಇದರಿಂದ ಈ ಜನರ ಕಲ್ಯಾಣವನ್ನು ಮಾಡುವುದಕ್ಕೆ ಆಗುತ್ತದೆಯೋ ಎಂದು ಅವರನ್ನು ಪ್ರಶ್ನೆ ಮಾಡುತ್ತೇನೆ. ಇದರ ಜೊತೆಗೆ ಇವತ್ತು ಪ್ರತಿಯೊಂದು ಇಲಾಖೆಯಲ್ಲೂ ಹರಿಜನ ಗಿರಿಜನಾಭಿವೃದ್ಧಿಗಾಗಿ ೧೮ ಪರ್ಸೆಂಟ್‌ನಷ್ಟು ಹಣವನ್ನು ಇಟ್ಟುಕೊಂಡು ಖರ್ಚು ಮಾಡಬೇಕು ಎಂದಿದೆ ಆದರೆ ಇದರಿಂದ ಏನನ್ನು ಸಾಧಿಸುವುದಕ್ಕೆ ಸಾಧ್ಯ ? ನನಗೆ ತಿಳಿದ ಹಾಗೆ ನನ್ನ ಕ್ಷೇತ್ರದಲ್ಲಿ ಈ ತೋಟಗಾರಿಕೆ ಇಲಾಖೆಯವರು ಒಂದು ಫ್ಯಾಮಿಲಿಗೆ ೨ ತೆಂಗಿನ ಸಸಿಗಳನ್ನು ಕೊಡುತ್ತಾರೆ. ಅವರು ಆ ತೆಂಗಿನ ಸಸಿಗಳನ್ನು ನೆಟ್ಟು ಅದನ್ನು ಬೆಳಸಿ ಅದು ತೆಂಗಿನಕಾಯಿಗಳನ್ನು ಬಿಟ್ಟು ಆದರಿಂದ ಅವರು ಆರ್ಥಿಕವಾಗಿ ಮುಂದುವರೆಯಬೇಕಾದರೆ ಎಷ್ಟು ವರ್ಷ ಬೇಕಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಅದಲ್ಲದೇ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನಿಂದ ಹಾರೆ, ಗುದ್ದಲಿ, ಪಿಕಾಸಿಗಳನ್ನು ಕೊಡುತ್ತಾರೆ ಇದರಿಂದ ಅವರು ಆರ್ಥಿಕವಾಗಿ ಮುಂದೆ ಬರುವುದಕ್ಕೆ ಸಾಧ್ಯವೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇದನ್ನು ಬಿಟ್ಟು, ಆ ನಮ್ಮ ಜನರು ವ್ಯಾಪಾರ ಅಥವಾ ಏನಾದರೂ ಕಂಟ್ರಾಕ್ಟ್ ಕೆಲಸ ಮಾಡಿ ಮುಂದೆ ಬರುವುದಕ್ಕೆ ಈ ಇಲಾಖೆಯ ವತಿಯಿಂದ ಸಾಕಷ್ಟು ಹಣ ಸಹಾಯ ಮಾಡಿ ಎನ್‌ಕರೇಜ್ ಮಾಡಿದ್ದಾರೆಯೋ ಎಂದರೆ ಅದು ಏನೇನೂ ಇಲ್ಲ. ಇಂತಹದಕ್ಕೆ ಮಾನ್ಯ ಸಚಿವರು ಹೆಚ್ಚಿನ ಗಮನ ಕೊಡಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು. —ಅವರಿಗೆ ತೆಂಗಿನ ಸಸಿಗಳನ್ನು ಕೊಡುವುದು ಬಹಳ ಯೋಗ್ಯ ಇದಕ್ಕಾಗಿ ಅವರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುವುದು ಒಳ್ಳೆಯದು.

ಶ್ರೀಮತಿ ಮೋಟಮ್ಮ. —ಇರಬಹುದು. ೨ ತೆಂಗಿನ ಸಸಿಯಲ್ಲಿ ಅವನ್ನು ತನ್ನ ಸಂಸಾರವನ್ನು ಉದ್ಧಾರ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸಚಿವರು ಒಂದು ಸಾರಿ ನಮ್ಮ ಇಲಾಖೆ ಸಮುದ್ರ ಇದ್ದ ಹಾಗೆ ಇದೆ. ಎಂದು ಹೇಳಿದ್ದಾರೆ. ಈ ಸಮುದ್ರದಂತಹ ಇಲಾಖೆಯ ಜವಾಬ್ದಾರಿಯನ್ನು ಅವರು ಹೊತ್ತಿರಬೇಕಾದರೆ ಅವರು ಎಷ್ಟು ಕೆಲಸ ಮಾಡಿದರೂ ಅದು ಸಾಲದು ಅವರು ಮತ್ತು ಅವರ ಅಧಿಕಾರಿಗಳ ಹಗಲು ರಾತ್ರಿ ಈ ಇಲಾಖೆಯಲ್ಲಿ ಕೆಲಸ ಮಾಡಿ ಈ ಒಂದು ಜನಾಂಗವನ್ನು ಆರ್ಥಿಕವಾಗಿ ಮುಂದೆ ತರಬೇಕಾಗುತ್ತದೆ. ಇದನ್ನು ಮಾಡುತ್ತಾರೆಯೋ ಎಂದು ನಾನು ಕೇಳುತ್ತೇನೆ. ಎರಡನೆಯದಾಗಿ ಮಾನ್ಯ ಸಚಿವರು ಆ ಇಲಾಖೆಯ ಅಭಿವೃದ್ಧಿ ಕೆಲಸಕಾರ್ಯಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಿದ್ದಾರೆ. ಆದರೆ ಇಲಾಖೆಯ ಆಡಳಿತದಲ್ಲಿ ಏನಾದರೂ ಬದಲಾವಣೆ ಆಗಿದೆಯೋ ಎಂದರೆ ಅದು ಏನೇನೂ ಆಗಿಲ್ಲ. ಇತ್ತೀಚೆಗೆ ಹುಟ್ಟಿದಂತಹ ಬ್ಯಾಕ್‌ವರ್ಡ್ ಕ್ಲಾಸ್ ಇಲಾಖೆ ಏನಿದೆ

ಅದು ಸಾಕಷ್ಟು ಅಭಿವೃದ್ಧಿಯಾಗುತ್ತಾ ಇದೆ. ಆದರೆ ಈ ಇಲಾಖೆಗೆ ಏನಿದೆ ಇದು ಸ್ವಾತ್ಯಂತ್ರ ಬಂದ ನಂತರ ಆಗಿರುವ ಇಲಾಖೆ, ಏನಾದರೂ ಇಂಪ್ರೂವ್ ಆಗಿದೆಯೋ ಎಂದರೆ ಇದರಲ್ಲಿ ನಿಲ್ ರಿಸಲ್ಟ್, ಇಲ್ಲಿಗೆ ಬರುವ ಅಧಿಕಾರಿಗಳಿಗೆ ಸ್ವಲ್ಪವಾದರೂ ಸರ್ವೀಸ್ ಡೆಡಿಕೇಷನ್ ಎನ್ನತಕ್ಕಂಥಾದ್ದು ಇರಬೇಕು. ಅದು ಆ ಅಧಿಕಾರಿಗಳಲ್ಲಿ ಇದೆಯೋ ಎಂದು ಪ್ರಶ್ನೆ ಮಾಡಿದರೆ ಅದು ಅದರಲ್ಲಿ ಏನೇನೂ ಇಲ್ಲ. ಹಿಂದೆ ನಾವೆಲ್ಲಾ ಈ ಹಾಸ್ಟೆಲ್‌ಗಳಲ್ಲಿ ಓದುತ್ತಾ ಇರಬೇಕಾದರೆ ಪ್ರತಿಯೊಬ್ಬ ಅಧಿಕಾರಿಗಳೂ ಕೂಡ ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಭೇಟಿ ಕೊಟ್ಟು ಇಲಾಖೆಯು ಏನೇನೂ ಕಾರ್ಯಕ್ರಮಗಳನ್ನು ಹಾಕಿ ಕೊಂಡಿದೆಯೋ ಅದೆಲ್ಲಾ ಕಾರ್ಯಗತವಾಗಿದೆಯೋ ಇಲ್ಲವೇ ಎಂಬುದನ್ನು ಪರ್ಸನಲ್ ಆಗಿ ಇನ್ಸ್‌ಪೆಕ್ಟ್ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದರು, ಇವತ್ತು ಆ ಒಂದು ಪದ್ಧತಿ ಕುಂಠಿತವಾಗಿದೆ. ನಾನು ವಿದ್ಯಾಭ್ಯಾಸ ಮಾಡುತ್ತಿದ್ದಂತಹ ಕಾಲದಲ್ಲಿ ಡೈರೆಕ್ಟರ್ —ಶ್ರೀ ಮಣಿಕಟ್ಟಿ ಎನ್ನುವವರು ಇದ್ದರು. ಅವರ ಬಗ್ಗೆ ನಿಜವಾಗಿಯೂ ನನಗೆ ಅಭಿಮಾನ ಇದೆ. ಅವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದರು. ಹಾಸ್ಟೆಲ್ ಮಕ್ಕಳಿಗೆ ಕೇವಲ ಊಟ ಕೊಡುವುದರಿಂದ, ಬಟ್ಟೆ ಕೊಡುವುದರಿಂದ ಏನೂ ಪ್ರಯೋಜನವಿಲ್ಲ. ಆ ಕೆಲಸವನ್ನು ಯಾರಾದರೂ ಮಾಡಬಹುದು. ಮನೆಯಲ್ಲಿ ತಂದೆ ತಾಯಿಗಳೂ ಅದನ್ನು ನೋಡುತ್ತಾರೆ. ಹಾಸ್ಟೆಲ್‌ಗಳಲ್ಲಿ ಆ ಮಕ್ಕಳ ಅಭಿವೃದ್ಧಿ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ನೋಡಬೇಕಾದರೆ ಅಧಿಕಾರಿಗಳು ಆ ಬಗ್ಗೆ ಹೆಚ್ಚಿನ ಗಮನಹರಿಸಬೇಕಾಗುತ್ತದೆ. ಇದರ ಜೊತೆಗೆ ಹಾಸ್ಟೆಲ್‌ಗಳಲ್ಲಿ ಮತ್ತು ಸಂಬಂಧಪಟ್ಟ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಅಧಿಕಾರ ವರ್ಗದವರು ಏನಿದ್ದಾರೆ ಅವರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೋ ಇಲ್ಲವೇ, ಮಕ್ಕಳ ಅಭಿವೃದ್ಧಿಯ ಬಗ್ಗೆ ಗಮನಹರಿಸಿದ್ದಾರೆಯೋ ಇಲ್ಲವೇ ಎಂಬುದನ್ನು ನೋಡಬೇಕಾದರೆ ಮೇಲಧಿಕಾರಿಗಳು ಅವರ ಮೇಲೆ ಒಂದು ಸೂಪರ್‌ವಿಷನ್ ಇಟ್ಟುಕೊಳ್ಳಬೇಕಾಗುತ್ತದೆ. ಶ್ರೀ ಮಣಿಕಟ್ಟಿಯವರು ಹಾಸ್ಟೆಲ್‌ಗಳಿಗೆ ವಿಸಿಟ್ ಕೊಡತಕ್ಕಂಥ ಸಂದರ್ಭದಲ್ಲಿ ಅಲ್ಲಿ ಮಕ್ಕಳ ಊಟದ ವ್ಯವಸ್ಥೆಯನ್ನು ನೋಡುವುದರ ಜೊತೆಗೆ, ಮಕ್ಕಳು ಹೇಗೆ ಓದುತ್ತಿದ್ದಾರೆ, ಅವರ ಪರ್‌ಫಾರ್ಮೆನ್ಸ್ ಏನು ಎಂಬುದನ್ನು ಪರ್ಸನಲ್ ಆಗಿ ನೋಡಿದ್ದಾರೆ. ನಾನು ೯ನೇ ತರಗತಿಯಲ್ಲಿ ಓದುತ್ತಿದ್ದಾಗ ನನ್ನನು ಪರ್ಸನಲ್ಲಾಗಿ ಕರೆದು ನೀನು ಏನು ಓದುತ್ತಿದ್ದೀಯಾ ಎಂದು ಕೇಳಿದರು. ನಾನು ಪುಸ್ತಕ ಓದುತ್ತಿದ್ದೇನೆ. ಎಂದು ಉತ್ತರ ಕೊಟ್ಟೆ. ಈ ತರಹ ಉತ್ತರ ಕೊಡುತ್ತಿದ್ದಿಯಲ್ಲಾ ಎಂದು ನನಗೆ ಒಂದು ಏಟು ಕೊಟ್ಟರು. ನನಗೆ ಗೊತ್ತಾಗಲಿಲ್ಲ ಎಂದು ಹೇಳಿದೆ. ಆ ಮೇಲೆ ಯಾವ ತರಗತಿಯಲ್ಲಿ ಓದುತ್ತಿದ್ದೀಯಾ ಎಂದು ಕೇಳಿದರು. ಆಗ ನಾನು ಸರಿಯಾದ ಉತ್ತರ ಕೊಟ್ಟೆ. ಇಂತಹ ಒಂದು ಪದ್ಧತಿ ಈಗ ಇಲ್ಲ. ಮೇಲಾಧಿಕಾರಿಗಳು ಎಲ್ಲಿರುತ್ತಾರೋ ಅಲ್ಲೇ ಕುಳಿತಿರುತ್ತಾರೆ. ಇದಕ್ಕೆ ಜಾಯಿಂಟ್ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್ ಎಂದು ಇರುತ್ತಾರೆ, ಮೈಸೂರಿನವರು ಮೈಸೂರಿನಲ್ಲೇ ಇರುತ್ತಾರೆ, ಬೆಂಗಳೂರಿನವರು ಬೆಂಗಳೂರಿನಲ್ಲೇ ಇರುತ್ತಾರೆ. ಅವರು ಪೀರಿಯಾಡಿಕಲ್ ಇನ್ಸ್‌ಪೆಕ್ಷನ್ ಮಾಡುವುದಿಲ್ಲ. ಆ ಒಂದು ಪದ್ಧತಿ ಇಲ್ಲವೇ ಇಲ್ಲ. ಈ ಬಗ್ಗೆ ಮಾನ್ಯ ಸಚಿವರು ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಇದರ ಜೊತೆಗೆ ನಮ್ಮ ಚಿಕ್ಕಮಂಗಳೂರಿನಲ್ಲಿ ಇತ್ತೀಚೆಗೆ ಒಂದು ಹಾಸ್ಟೆಲ್‌ನಲ್ಲಿ ಒಂದು ಘಟನೆ ನಡೆಯಿತು. ಇದರಲ್ಲಿ ಹೆಚ್ಚಿನ ಹೊಣೆ ಈ ಇಲಾಖೆಯ ಅಧಿಕಾರಿಗಳದೇ ಎಂದು ನನಗೆನ್ನಿಸುತ್ತದೆ. ಅಲ್ಲಿ ಒಬ್ಬ ಮಹಿಳಾ ವಾರ್ಡನ್, ೮ ವರ್ಷದಿಂದ ಇದ್ದಾಳೆ. ಹೋದ ವರ್ಷ ಬೇರೆ ಕಡೆಗೆ ಆಕೆಯ ಟ್ರಾನ್ಸ್‌ಪರ್ ಆಗಿತ್ತು ಈಗ ಮತ್ತೆ ಆಕೆಯನ್ನು ಅಲ್ಲೇ ರೀಟೈನ್ ಮಾಡಿದ್ದಾರೆ. ಅಲ್ಲೆ ಒಂದು ಹುಡುಗಿಯನ್ನು ಸಾಯಿಸಿದ್ದಾರೆ. ಆಕೆ ೮ ವರ್ಷದಿಂದ ಅಲ್ಲಿ ಏನಿದ್ದಾಳೆ ಅವಳು ಮುಂಜಾಗ್ರತೆಯ ಕ್ರಮವನ್ನು ತೆಗೆದುಕೊಂಡಿದ್ದಾರೆ ಅಥವಾ ವಿದ್ಯಾರ್ಥಿಗಳ ಅಭಿವೃದ್ಧಿಯ ಬಗ್ಗೆ ಗಮನ ಕೊಟ್ಟಿದ್ದರೆ ಇಂತಹ ಒಂದು ಬ್ಯಾಡ್ ಇನ್‌ಸಿಡೆಂಟ್ ಆಗುತ್ತಾ ಇರಲಿಲ್ಲ. ಈ ಸಮಾಜ ಕಲ್ಯಾಣ ಇಲಾಖೆಯ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳು ಈ ತರಹ ಬೇಜವಾಬ್ದಾರಿಯಿಂದ ಕೆಲಸ ಮಾಡಿದರೆ ಚಿಕ್ಕಮಂಗಳೂರಿನಲ್ಲಿ ಆದಂತಹ ಘಟನೆ ಹಲವಾರು ಕಡೆಗಳಲ್ಲಿ ಆಗುವ ಸಂಭವ ಇದೆ ಎಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ಸಿ. ನಾನಯ್ಯ.—ಅಲ್ಲಿಗೆ ಒಬ್ಬ ಸರಿಯಾಗಿ ಕೆಲಸ ಮಾಡುವಂತಹ ಗಂಡಸು ವಾರ್ಡನ್ ಅನ್ನು ಹಾಕಿದರೆ ನೀವು ಒಪ್ಪಿಕೊಳ್ಳುತ್ತೀರಾ ?

ಶ್ರೀಮತಿ ಮೋಟಮ್ಮ.—ನಾನು ಆ ಬಗ್ಗೆ ಹೇಳಲಿಲ್ಲ. ನಾನು ಹೆಂಗಸರು ಎನ್ನುವ ದೃಷ್ಟಿಯಿಂದ ಹೇಳಲಿಲ್ಲ. ಆಕೆ ೮ ವರ್ಷದಿಂದ ಅಲ್ಲಿದ್ದು, ಹೋದ ವರ್ಷ ಟ್ರಾನ್ಸ್‌ಫರ್ ಮಾಡಿ ಮತ್ತೆ

ಈ ವರ್ಷ ಆಕೆಯನ್ನು ಅಲ್ಲಿ ರೀಟೈನ್ ಮಾಡಿದ್ದರಿಂದ ಆಕೆ ಎಷ್ಟರ ಮಟ್ಟಿಗೆ ಕೆಲಸ ಮಾಡಿದ್ದಾಳೆ ಎನ್ನುವ ದೃಷ್ಟಿಯಿಂದ ನಾನು ಹೇಳಿದ್ದೇ ಹೊರತು ಆಕೆ ಹೆಣ್ಣು ಎನ್ನುವ ದೃಷ್ಟಿಯಿಂದ ಹೇಳಲಿಲ್ಲ.

ಶ್ರೀಮತಿ ಎಂ. ಸಿ. ನಾಣಯ್ಯ,—ಹಾಗಾದರೆ ಗಂಡಸರ ಬಗ್ಗೆ ಕುಮಾರಿ ಪ್ರಮಿಳಾರವರು ಮಾತನಾಡಿದ ಮಾತುಗಳು ಸಂಪೂರ್ಣವಾಗಿ ಸತ್ಯವಲ್ಲ ಎನ್ನುವುದನ್ನು ನೀವು ತೋರಿಸಿಕೊಟ್ಟಿರಿ.

೧೨-೩೦ ಪಿ. ಎಂ.

ನಮ್ಮ ಸಮಾಜ ಕಲ್ಯಾಣ ಇಲಾಖೆಯವರು ಸ್ಪೆಷಲ್ ಕಾಂಪೋನೆಂಟ್ ಸ್ಕೀಮ್‌ನಲ್ಲಿ ಟ್ರೈಬ್ಸ್ ರವರಿಗೆ ಕೆಲವು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಆದರೆ ಈ ಯೋಜನೆಯಿಂದ ಗಿರಿಜನರಿಗೆ ಯಾವ ವಿಧವಾದಂತಹ ಸೌಲಭ್ಯಗಳು ಸಿಗುತ್ತಿವೆ ಎನ್ನುವುದರ ಬಗ್ಗೆ ನಾನು ಮಾನ್ಯ ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳಿದ್ದೆ ಅದು ಏನೆಂದರೆ ನನ್ನ ಸ್ವಂತ ಸ್ಥಳದಲ್ಲಿ ಗಿರಿಜನರ ಸಂಖ್ಯೆಯೇ ಇಲ್ಲ. ಆದರೆ ಗಿರಿಜನರಿಗೆ ೧೪ ಮನೆಗಳನ್ನು ಕಟ್ಟಿಕೊಟ್ಟಿದ್ದೇವೆ, ಭಾವಿಗಳನ್ನು ತೋಡಿಸಿಕೊಟ್ಟಿದ್ದೇವೆ, ಮತ್ತು ಸಾಗುವಳಿ ಮಾಡುವುದಕ್ಕೆ ಭೂಮಿಯನ್ನು ಕೊಟ್ಟಿದ್ದೇವೆ. ಎಂದು ಹೇಳಿದರು. ಆದರೆ ಆಗ ಮಾನ್ಯ ಮಂತ್ರಿಗಳನ್ನು ನಾನು ಕೇಳಿದೆ ನನ್ನ ಸ್ವಂತ ಸ್ಥಳದಲ್ಲಿ ಗಿರಿಜನರೇ ಇಲ್ಲದೆ ಇರುವಾಗ ನೀವು ಯಾರಿಗೆ ಕೊಟ್ಟಿದ್ದೀರಿ ಎಂದು ಪ್ರಶ್ನೆ ಮಾಡಿದೆ. ಅದಕ್ಕೆ ಮಾನ್ಯ ಮಂತ್ರಿಗಳು ಹೇಳಿದರು ಅದು ನನ್ನ ಗಮನಕ್ಕೆ ಬಂದಿಲ್ಲ, ಎಂದು ಉತ್ತರ ಹೇಳಿದರು ಈ ರೀತಿಯಲ್ಲಿ ಟ್ರೈಬ್ಸ್‌ರವರ ಹೆಸರಿನಲ್ಲಿ ಅನಾಹುತಗಳು ನಡೆಯುತ್ತಿವೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ರೀತಿಯ ಅನಾಹುತಗಳು ನಡೆಯುವುದಕ್ಕೆ ತಮ್ಮ ಇಲಾಖೆಯ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿರುವಂತಹ ಅಧಿಕಾರಿಗಳು ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇಂತಹ ಜನರಿಗೆ ಹಣವನ್ನು ಮಂಜೂರು ಮಾಡುವಾಗ ಸರಿಯಾದಂತಹ ಮಾಹಿತಿಯನ್ನು ಪಡೆದುಕೊಂಡು ಹಣ ಮಂಜೂರು ಮಾಡಬೇಕು. ಇನ್ನು ನಮ್ಮ ಸಮಾಜ ಕಲ್ಯಾಣದಲ್ಲಿ ಸೋಷಿಯಲ್ ಸೆಕ್ಯೂರಿಟಿ ಬಗ್ಗೆ ಮಾತನಾಡುವುದರಿಂದ ಏನೂ ಪ್ರಯೋಜನವಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಹರಿಜನ ಮತ್ತು ಗಿರಿಜನರಿಗೆ ಸೋಷಿಯಲ್ ಸೆಕ್ಯೂರಿಟಿ ಇದೆ ಎಂದು ಕಾನೂನು ಮಾಡಿದ್ದಾರೆ. ಆದರೆ ಈ ಸೋಷಿಯಲ್ ಸೆಕ್ಯೂರಿಟಿಯ ಕಾನೂನಿನಿಂದ ನಮಗೆ ಯಾವ ರಕ್ಷಣೆಯೂ ಸಿಗುತ್ತಿಲ್ಲ ಎನ್ನುವ ಮಾತನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಮತ್ತೇ ಸ್ಪೆಷಲ್ ಪೋಲೀಸ್ ಸೆಲ್ ಎಂದು ಮಾಡಿದ್ದಾರೆ. ಈ ಸ್ಪೆಷಲ್ ಪೋಲೀಸ್ ಸೆಲ್ ಇರುವುದು ಹರಿಜನ ಮತ್ತು ಗಿರಿಜನರ ರಕ್ಷಣೆ ಮಾಡುವುದಕೋಸ್ಕರ ಮತ್ತು ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುಗಕ್ಕಾಗಿ. ಆದರೆ ನಮ್ಮ ಹಾಸನ ಜಿಲ್ಲೆಯಲ್ಲಿ ಹೋನಬಲಿ ಹೋಬಳಿ, ಹೊರಡಿ ಗ್ರಾಮದಲ್ಲಿ, ಒಬ್ಬ ಕಾಕ ಅಂಗಡಿಯವನು ಒಂದು ಟೀ ಸ್ಟಾಲ್ ಇಟ್ಟುಕೊಂಡಿದ್ದಾನೆ. ಆತನು ಹರಿಜನ ಮತ್ತು ಗಿರಿಜನರಿಗೆ ಕಾಫಿಯನ್ನು ಕೊಡಬೇಕಾದರೆ ಪ್ರತ್ಯೇಕವಾದಂತಹ ಗ್ಲಾಸ್‌ಗಳನ್ನು ಇಟ್ಟುಕೊಂಡಿದ್ದಾನೆ. ಈ ರೀತಿಯಲ್ಲಿ ಅಸ್ಪೃಶ್ಯತೆ ಎಂಬುದು ಮುಂದುವರಿಯುತ್ತಿದ್ದರೆ ನಮ್ಮ ರಾಜ್ಯದಲ್ಲಿ ಸೋಷಿಯಲ್ ಸೆಕ್ಯೂರಿಟಿ ಏತಕ್ಕೆ ಇರಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಪ್ರಶ್ನೆ ಮಾಡಬೇಕಾಗಿದೆ.

ಶ್ರೀ ಎಂ. ಶೇರ್‌ಖಾನ್.— ಮಾನ್ಯ ಅಧ್ಯಕ್ಷರೇ ಈಗಾಗಲೇ ೧೨-೩೫ ನಿಮಿಷಗಳಾಗಿದೆ. ನಾವು ಬೆಳಗ್ಗೆ ೯ ಗಂಟೆಗೆ ಬಂದಿದ್ದೇವೆ, ನಮಗೆ ಬೆಂಗಳೂರಿನಲ್ಲಿ ಮನೆ ಇಲ್ಲ. ಆದ್ದರಿಂದ ನಾವು ಊಟಕ್ಕೆ ಹೋಗುವುದು ಬೇಡವೇ?.

ಶ್ರೀಮತಿ ಮೋಟಮ್ಮ —ಇನ್ನು ಹಾಸ್ಟಲ್‌ಗಳ ಬಗ್ಗೆ ಹೇಳುವುದಾದರೆ ನೀವು ಈ ಸೋಷಿಯಲ್ ಸೆಕ್ಯೂರಿಟಿ ಮತ್ತು ಇತರ ಕೆಲಸ ಕಾರ್ಯಗಳಿಗೆ ಉಪಯೋಗಿಸುವಂತಹ ಹಣವನ್ನು ಈ ಹಾಸ್ಟಲ್‌ಗಳಿಗೆ ಖರ್ಚು ಮಾಡಿ ಹರಿಜನ ಮತ್ತು ಗಿರಿಜನರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿದರೆ ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ನಮ್ಮ ರಾಜ್ಯದಲ್ಲಿ ಹಾಸ್ಟಲ್‌ಗಳ ಸಂಖ್ಯೆ ಜಾಸ್ತಿಯಾಗಿವೆ. ಆದರೆ ಹಾಸ್ಟಲ್‌ಗಳಲ್ಲಿ ಸರಿಯಾದಂತಹ ಊಟದ ವ್ಯವಸ್ಥೆಯನ್ನು ಮಾಡಿಕೊಟ್ಟಿಲ್ಲ ಮತ್ತು ಒಬ್ಬ ಹುಡುಗನಿಗೆ ಒಂದು ವರ್ಷಕ್ಕೆ ಸುಮಾರು ೪ ಜೊತೆ ಬಟ್ಟೆಗಳನ್ನು ಕೊಡುತ್ತಾರೆ, ಆದರೆ ಈ ಸೋಷಿಯಲ್ ವೆಲ್‌ಫೇರ್ ಆಫೀಸರ್ಸ್ ಏನು ಮಾಡುತ್ತಾರೆ ಎಂದರೆ ಬಟ್ಟೆಯನ್ನು ಯಾರೋ ಒಬ್ಬ ಏಜೆಂಟರ ಮುಖಾಂತರ ಕಡಿಮೆ ಬೆಲೆಯ ಬಟ್ಟೆಯನ್ನು ತೆಗೆದುಕೊಂಡು ೧೨ ವರ್ಷದ ಹುಡುಗನಿಗೆ ೬ ವರ್ಷದ

ಬಟ್ಟೆಯನ್ನು ಹೊಲಿದು ಕೊಡುತ್ತಾರೆ, ಒಂದು ರೀತಿಯಲ್ಲಿ ಬಟ್ಟೆಯನ್ನು ಖರೀದಿ ಮಾಡುವುದರಲ್ಲಿಯೂ ಸಹ ಲಾಭವನ್ನು ಪಡೆದುಕೊಳ್ಳುತ್ತಾರೆ ಮತ್ತೆ ಹೊಲಿಸಿಕೊಡುವುದರಲ್ಲಿಯೂ ಲಾಭ ಪಡೆದುಕೊಳ್ಳುತ್ತಾರೆ. ಇದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಸರ್ಕಾರದವರು ಒಬ್ಬ ಹುಡುಗನಿಗೆ ಕೊಡುವ ೪ ಜೊತೆ ಬಟ್ಟೆಯಲ್ಲಿ ಒಂದು ಜೊತೆ ಆ ಶಾಲೆಯ ಸಮವಸ್ತ್ರವನ್ನು ಹೊಲಿಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕಾರಣವೇನೆಂದರೆ ಆ ಹುಡುಗ ತನ್ನ ತಂದೆ ತಾಯಿಯವರ ಹತ್ತಿರ ಹೋಗಿ ನನಗೆ ಸಮವಸ್ತ್ರ ಬೇಕೆಂದು ಹೇಳಿ ಅವರನ್ನು ಗೋಳು ಮಾಡುತ್ತಾನೆ. ಆದ್ದರಿಂದ ಈ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಈ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಪ್ರೀ ಮೆಟ್ರಿಕ್ ಶಾಲೆಯ ವಿದ್ಯಾರ್ಥಿಗಳಿಗೆ ನಾವು ಹಾಸ್ಟಲ್‌ಗಳಲ್ಲಿ ಊಟ' ಬಟ್ಟೆ, ಎಣ್ಣೆ, ಇತ್ಯಾದಿ ಸೌಲಭ್ಯಗಳನ್ನು ಒದಗಿಸಿಕೊಡುತ್ತೀರಿ, ಆದರೆ ಅದೇ ಹುಡುಗ ಪೋಸ್ಟ್ ಮೆಟ್ರಿಕ್‌ಗೆ ಬಂದಾಗ ತಾವು ಹಾಸ್ಟಲ್‌ಗಳಲ್ಲಿ ಯಾವ ಒಂದು ಸೌಲಭ್ಯವನ್ನು ಸಹ ಒದಗಿಸಿಕೊಡುವುದಿಲ್ಲ. ಇದಕ್ಕೆ ಕಾರಣವೇನು ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕೂಲಿ ಮಾಡುವಂತಹ ಜನ ಎಸ್.ಎಸ್.ಎಲ್.ಸಿ. ಪಾಸು ಮಾಡಿಕೊಂಡು ಪೋಸ್ಟ್ ಮೆಟ್ರಿಕ್‌ಗೆ ಬರುತ್ತಾರೆ. ಅವರು ಬಿ.ಎ. ಅಥವಾ ಎಂ.ಎ. ಮಾಡಬೇಕಾದರೆ ಬೆಂಗಳೂರು ಮತ್ತು ಮಂಗಳೂರು ಇಂತಹ ಕಡೆಗಳಿಗೆ ಹೋಗಬೇಕಾಗುತ್ತದೆ. ಆಗ ಅವರಿಗೆ ಈ ಸೌಲಭ್ಯಗಳು ದೊರೆಯದಿದ್ದರೆ ಆತನು ಹೇಗೆ ವ್ಯಾಸಂಗ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ಪೋಸ್ಟ್ ಮೆಟ್ರಿಕ್ ಶಾಲಾ ವಿದ್ಯಾರ್ಥಿಗಳಿಗೂ ಸಹ ಪ್ರೀ ಮೆಟ್ರಿಕ್ ಹಾಸ್ಟಲ್‌ಗಳಲ್ಲಿ ಒದಗಿಸಿಕೊಡುವಂತಹ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಹರಿಜನ ಮತ್ತು ಗಿರಿಜನರಿಗೆ ೧೮ ಪರ್ಸೆಂಟ್ ಮೀಸಲಾತಿಯನ್ನು ಏನು ಇಟ್ಟಿದ್ದಾರೆ. ಇದು ಎಲ್ಲಾ ಇಲಾಖೆಗಳಲ್ಲಿ ಸರಿಯಾಗಿ ಸಿಗುತ್ತಿದೆಯೋ ಎನ್ನುವುದನ್ನು ನಾವು ನೋಡಬೇಕಾಗಿದೆ. ಈಗ ಹುದ್ದೆಗಳಲ್ಲಿ ಹರಿಜನ ಮತ್ತು ಗಿರಿಜನರಿಗೆ ೧೮ ಪರ್ಸೆಂಟ್ ಮೀಸಲಾತಿಯನ್ನು ಕೊಡಬೇಕೆಂದು ಸರ್ಕಾರದವರು ಮಾಡಿದ್ದಾರೆ. ಆದರೆ ಇದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ ಅದು ಏನೆಂದರೆ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಲ್ಲಿ ೧೪ ಅಸಿಸ್ಟೆಂಟ್ ಡೈರೆಕ್ಟರ್ ಹುದ್ದೆಗಳನ್ನು ಶಿಫಾರಸ್ಸು ಮಾಡಿ ಕಳುಹಿಸಿದ್ದಾರೆ. ಅದರಲ್ಲಿ ಎರಡು ಹುದ್ದೆಗಳನ್ನು ಹರಿಜನ ಮತ್ತು ಗಿರಿಜನರನ್ನು ಸೇರಿಸಿದ್ದಾರೆ. ಆದರೆ ಅಲ್ಲಿರುವ ಡಿ.ಆರ್.ಸಿ. ಕಮಿಟಿಯವರು ಒಂದು ಹುದ್ದೆಯನ್ನು ಹರಿಜನ ಮತ್ತು ಗಿರಿಜನರಿಗೆ ಕೊಟ್ಟು ಇನ್ನು ೯ ಜನರಿಗೆ ಕೊಟ್ಟಿದ್ದಾರೆ. ಇನ್ನು ಉಳಿದ ೧ ಹುದ್ದೆ ಹರಿಜನ ಮತ್ತು ಗಿರಿಜನರಿಗೆ ಮೀಸಲಾಗಿದ್ದು ಅದನ್ನು ಡೆಲಿಬರೇಟ್ ಮಾಡಿ ತಡೆಗಟ್ಟಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನು ಪರಿಶೀಲನೆ ಮಾಡಿ ಸೂಕ್ತ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ

ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಗೆ ಸಂಬಂಧಪಟ್ಟ ಹಾಗೆ ಕೆಲವಾರು ವಿಷಯಗಳನ್ನು ನಾನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಮಹಿಳಾ ಸಚಿವರು ನನ್ನ ತಾಲ್ಲೂಕಿಗೆ ಒಂದು ಅಂಗನವಾಡಿಯನ್ನು ಈ ಸಾರಿ ಕೊಟ್ಟಿದ್ದಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ. ಇದರಿಂದ ನಿಜವಾಗಿಯೂ ಕೂಡ ಕೂಲಿ ಮಾಡುವಂತಹ ಹರಿಜನ ಮತ್ತು ಗಿರಿಜನರಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ಹಿಂದೆ ನಮ್ಮ ತಾಲ್ಲೂಕಿನಲ್ಲಿ ಇರುವಂತಹ ಸೋಷಿಯಲ್ ವೆಲ್‌ಫೇರ್ ಬೋರ್ಡಿನವರು ನಡೆಸುತ್ತಿರುವ ಬಾಲವಾಡಿಯಲ್ಲಿ ಕೆಲಸ ಮಾಡುತ್ತಿದ್ದಂತಹವರಿಗೆ ಕೇವಲ ೭೫ ರೂಪಾಯಿಗಳನ್ನು ಕೊಡುತ್ತಾರೆ. ಅವರು ಬೇರೆ ಎಲ್ಲಿಯಾದರೂ ಕೂಲಿಗೆ ಹೋದರೆ ಒಂದು ದಿವಸಕ್ಕೆ ೧೦ ರೂಪಾಯಿಗಳು ಕೊಡುತ್ತಾರೆ. ಹೀಗಿರುವಾಗ ೭೫ ರೂಪಾಯಿಗಳನ್ನು ತೆಗೆದುಕೊಂಡು ಏನು ಪೌಷ್ಟಿಕ ಆಹಾರವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ತಾವು ಕೊಡುವ ಪೌಷ್ಟಿಕ ಆಹಾರಕ್ಕೆ ಇನ್ನೂ ಹೆಚ್ಚು ಹಣವನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ನಮ್ಮ ಮೂಡಿಗೆರೆ ತಾಲ್ಲೂಕಿನಲ್ಲಿ ತಮ್ಮ ಇಲಾಖೆಯಲ್ಲಿ ಡೆಪ್ಯುಟಿ ಡೈರೆಕ್ಟರ್ ಮತ್ತು ಅಸಿಸ್ಟೆಂಟ್ ಡೈರೆಕ್ಟರ್ ಹುದ್ದೆಗಳು ಖಾಲಿ ಇವೆ. ಆ ಹುದ್ದೆಗಳನ್ನು ಹೆಣ್ಣು ಮಕ್ಕಳಿಗೆ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ನಾನು ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗ ಸಭೆಯು ಮೇಲಕ್ಕೆದ್ದು ಮಧ್ಯಾಹ್ನ ೨ ಗಂಟೆ ೩೦ ನಿಮಿಷಕ್ಕೆ ಸೇರಲಿದೆ.

(ಸಭೆಯು ೧೨ ಗಂಟೆ ೪೦ ನಿಮಿಷಗಳಿಗೆ ಮುಕ್ತಾಯವಾಗಿ ಮತ್ತೇ ಮಧ್ಯಾಹ್ನ ೨ ಗಂಟೆ ೩೦ ನಿಮಿಷಕ್ಕೆ ಸೇರಲು ನಿಶ್ಚಯಿಸಿತು.)

ಸಭೆಯು ಪುನಃ ೨-೪೦ ಗಂಟೆಗೆ ಸೇರಿತು. ಅಧ್ಯಕ್ಷರು ಪೀಠವನ್ನಲಂಕರಿಸಿದರು.

†ಶ್ರೀ ಆರ್. ಅಂಬಣ್ಣ ನಾಯಕ್ ದೊರ್ಯೆ (ಮಾನ್ವಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಂದಿರುವ ಸಮಾಜ ಕಲ್ಯಾಣ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಬೇಡಿಕೆಗಳನ್ನು ಬೆಂಬಲಿಸುತ್ತಾ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಅನೇಕ ಶತಮಾನಗಳಿಂದಲೂ ಸಮಾಜ ಆಚರಿಸಿಕೊಂಡು ಬಂದಿರುವ ಈ ಒಂದು ವಿಕ್ಷಿಪ್ತ ವರ್ತನೆಯಿಂದ ಉಂಟಾಗಿರುವ ಹರಿಜನರ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ, ಅವರ ಸಾಮಾಜಿಕ ಸ್ಥಿತಿಗತಿಗಳನ್ನು, ಸ್ಥಾನಮಾನಗಳನ್ನು ಸಮಗ್ರವಾಗಿ ಸುಧಾರಿಸುವಲ್ಲಿ ಮತ್ತು ಸರಿಸಮಾನವಾದ ಸ್ಥಾನಗಳನ್ನು ದೊರಕಿಸಿಕೊಡುವುದರಲ್ಲಿ ನಮ್ಮ ಘನ ಸರ್ಕಾರ ಅನೇಕ ಯೋಜನೆಗಳನ್ನು ಹಮ್ಮಿಕೊಂಡಿದೆ. ಹರಿಜನ-ಗಿರಿಜನರ ಶ್ರೇಯೋಭಿವೃದ್ಧಿಗಾಗಿ ಈ ಸರ್ಕಾರ ೧೯೮೦-೮೧ರಲ್ಲಿ ೮೯.೫೭ ಕೋಟಿ ರೂಪಾಯಿಗಳು ಮತ್ತು ೧೯೮೧-೮೨ರಲ್ಲಿ ೧೩೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಇವರ ಪ್ರಗತಿಯ ಸಾಧನೆಗಾಗಿ ಈ ಕಾರ್ಯಕ್ರಮಗಳನ್ನು ಸರ್ಕಾರ ಹಮ್ಮಿಕೊಂಡಿದೆ. ಪ್ರತಿಯೊಂದು ಜಿಲ್ಲೆಯಲ್ಲೂ ಐದಾರು ಹಳ್ಳಿಗಳಲ್ಲಿ ಅಂದರೆ ಎಲ್ಲಿ ಹರಿಜನ-ಗಿರಿಜನರ ಕಾನ್‌ಸೆನ್‌ಟ್ರೇಟೆಡ್ ಪಾಪುಲೇಷನ್ ಇದೆಯೋ ಅಲ್ಲಿ ಅವರ ಪುರೋಭಿವೃದ್ಧಿಗಾಗಿ ಸಾಮೂಹಿಕ ನೀರಾವರಿ ವ್ಯವಸ್ಥೆ, ಬೇಸಾಯ, ಇನ್ನಿತರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ಮತ್ತು ರೈತರಿಗೆ ಕಡಿಮೆ ದರದಲ್ಲಿ ಸುಧಾರಿತ ಬೀಜಗಳನ್ನು ಕೊಡಬೇಕೆಂಬ ಉದ್ದೇಶದಿಂದ ಅದನ್ನೂ ಕೂಡ ಒದಗಿಸಿಕೊಟ್ಟಿದೆ. ಮತ್ತು ಕುಶಲಕರ್ಮಿಗಳಿಗೆ ಕಚ್ಚಾ ವಸ್ತುಗಳನ್ನು ಸರಬರಾಜು ಮಾಡುವುದರಲ್ಲಿ ಸರ್ಕಾರ ಹೆಚ್ಚಿನ ಆಸ್ಥೆಯನ್ನು ತೋರಿಸಿದೆ, ಅಲ್ಲದೆ ಕುಶಲಕರ್ಮಿಗಳಿಗೆ ಸಂಘಸಂಸ್ಥೆಗಳನ್ನು ಸ್ಥಾಪಿಸುವುದರಲ್ಲಿ ನೆರವು ನೀಡಿದೆ. ನಮ್ಮ ರಾಜ್ಯದಲ್ಲಿ ಬಡತನದಲ್ಲಿ ನರಳತಕ್ಕ ಹರಿಜನ-ಗಿರಿಜನರ ಕುಟುಂಬಗಳು ೫.೩ ಲಕ್ಷ ಇವೆ. ಇವರ ಅಭಿವೃದ್ಧಿಗಾಗಿ ಮತ್ತು ಇವರ ಆರ್ಥಿಕ ಪರಿಸ್ಥಿತಿಯ ಸುಧಾರಣೆಗಾಗಿ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ, ಇದನ್ನು ನಾನು ಸ್ವಾಗತಿಸುತ್ತೇನೆ. ೧೯೮೨-೮೩ರ ಪ್ರೋಗ್ರಾಂ ಪ್ರಕಾರ ಸ್ಟೇಟ್ ಪ್ಲಾನ್‌ನಲ್ಲಿ ೪೪೮.೧೧ ಲಕ್ಷ ಮತ್ತು ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂನಲ್ಲಿ ೨೭೩.೭೦ ಲಕ್ಷ ಹಾಗೂ ನಾನ್ ಪ್ಲಾನ್‌ನಲ್ಲಿ ೧೦೭೦.೧೧ ಲಕ್ಷ, ಈ ಪ್ರಕಾರ ಬಡ್ಜೆಟನ್ನು ಪ್ರೊವೈಡ್ ಮಾಡಿದೆ. ಇದಲ್ಲದೆ ಸ್ಪೆಷಲ್ ಕಾಂಪೊನೆಂಟ್ ಸ್ಕೀಂನಲ್ಲಿ ಹರಿಜನ-ಗಿರಿಜನರ ಸರ್ವತೋಮುಖ ಅಭಿವೃದ್ಧಿಗಾಗಿ ರೈತರಿಗೆ ಸಿಗತಕ್ಕ ಸೌಲಭ್ಯಗಳನ್ನು ಒದಗಿಸುವುದು, ಕಡಿಮೆ ದರದಲ್ಲಿ ಸುಧಾರಿತ ಬೀಜಗಳನ್ನು ಒದಗಿಸುವುದು, ಸಿರಿಕಲ್ಚರ್‌ನಲ್ಲಿ ಅವರಿಗೆ ಬೇಕಾದ ನೆರವನ್ನು ಒದಗಿಸುವುದು ಮುಂತಾದ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ನಮ್ಮ ರಾಜ್ಯದಲ್ಲಿ ಈ ವರ್ಗದ ಜನಸಂಖ್ಯೆ ಸುಮಾರು ೧೪ ಪರ್ಸೆಂಟ್ ಆಗುತ್ತದೆ. ಇವರ ಅಭಿವೃದ್ಧಿಗಾಗಿ ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ೧೯೭೧ರ ಸೆನ್ಸಸ್ ಪ್ರಕಾರ ಹರಿಜನರ ಸಂಖ್ಯೆ ೩೮.೫೧ ಲಕ್ಷ ಆಗುತ್ತದೆ. ಅದೇ ಪ್ರಕಾರ ಷೆಡ್ಯೂಲ್ಡ್ ಟ್ರೈಬ್ ಸಂಖ್ಯೆ ೨.೩೧ ಇದೆ. ಈ ಒಂದು ಅಂಕಿಅಂಶಗಳನ್ನು ಈ ವರದಿಯಲ್ಲಿ ಹೇಳಿದ್ದಾರೆ ೧೯೭೬ರಲ್ಲಿ ಈ ಒಂದು ಏರಿಯಾ ರಿಸ್ಟ್ರಿಕ್ಷನ್ ರಿಮೂವ್ ಮಾಡಿದ್ದಾರೆ, ರಿಮೂವ್ ಆದಮೇಲೆ ಹರಿಜನರ ಸಂಖ್ಯೆ ೧೦ ಲಕ್ಷ ಜಾಸ್ತಿಯಾಗಿದೆಯೆಂದು ಈ ಅಂಕಿಸಂಖ್ಯೆಗಳ ಪ್ರಕಾರ ನಮಗೆ ಗೊತ್ತಾಗುತ್ತದೆ. ಆದರೆ ಈ ಒಂದು ಏರಿಯ ರಿಸ್ಟ್ರಿಕ್ಷನ್ ರಿಮೂವ್ ಆದಮೇಲೆ ಗಿರಿಜನರ ಸಂಖ್ಯೆ ಎಷ್ಟು ಹೆಚ್ಚಾಗಿದೆ ಎಂದು ತೋರಿಸಿಲ್ಲ ಇದಕ್ಕೆ ಏನು ಕಾರಣ ಎಂದು ಮಾನ್ಯ ಮಂತ್ರಿಗಳನ್ನು ನಾನು ಕೇಳಬಯಸುತ್ತೇನೆ. ಈ ರೀತಿ ಷೆಡ್ಯೂಲ್ಡ್ ಟ್ರೈಬ್ ಬಗ್ಗೆ ಯಾವ ರೀತಿಯ ತಾರತಮ್ಯ ಆಗಬಾರದು. ಟ್ರೈಬಲ್ ಸಬ್ ಪ್ಲಾನ್‌ನಲ್ಲಿ ೫ನೇ ಪಂಚವಾರ್ಷಿಕ ಯೋಜನೆ ಪ್ರಕಾರ ೧೯೮೧-೮೨ರಲ್ಲಿ ೪೫೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ಒಂದು ಸಬ್ ಪ್ಲಾನ್ ಪ್ರಾಜೆಕ್ಟ್‌ನಲ್ಲಿ ಕೆಲವೊಂದು ಏರಿಯಾವನ್ನು ಸೀಮಿತವಾಗಿ ಮಾಡಿಕೊಂಡಿದ್ದಾರೆ, ಇದು ಸರಿಯಲ್ಲ. ಏಕೆಂದರೆ, ಗಿರಿಜನರ ಪಂಗಡಕ್ಕೆ ಸೇರಿದ ಜನರು ಗುಡ್ಡಗಾಡಿನಲ್ಲಿರತಕ್ಕ ಜನರ ಸ್ಥಿತಿಗತಿಗಳನ್ನು ನೋಡಿ, ಹಳೇ ಮೈಸೂರಿನಲ್ಲಾಗಲಿ, ಇನ್ನು ಕೆಲವು ಜಿಲ್ಲೆಗಳಲ್ಲಾಗಲೀ, ಅವರನ್ನು ಈ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು, ಬೇರೆಯವರನ್ನು ಅಲಕ್ಷ್ಯ ಮಾಡುವುದು ಸರಿಯಲ್ಲ. ಹೈದರಾಬಾದ್ ಕರ್ನಾಟಕ ಏರಿಯ

ಬಹಳ ಹಿಂದುಳಿದ ಕ್ಷೇತ್ರ, ರಾಯಚೂರು ಬಹಳ ಹಿಂದುಳಿದ ಕ್ಷೇತ್ರ. ಅಲ್ಲಿ ಟ್ರೈಬಲ್ ಸಬ್ ಪ್ಲಾನ್, ಪ್ರಾಜೆಕ್ಟ್ ಸ್ಕೀಮ್ಸ್ ಮುಂತಾದ ಯೋಜನೆಗಳನ್ನು ಇಂಟರ್‌ಡ್ಯೂಸ್ ಮಾಡಬೇಕು. ಆ ಜಿಲ್ಲೆಯಲ್ಲಿರತಕ್ಕ ಜನ ಇವತ್ತು ಗುಡ್ಡಗಾಡಿನಲ್ಲಿದ್ದಾರೆ. ಇದರಲ್ಲಿ ಗಿರಿಜನರನ್ನು ಕೆಲವರನ್ನು ಅಳವಡಿಸಿಕೊಳ್ಳುವುದು, ಕೆಲವರನ್ನು ಅಲಕ್ಷ್ಯ ಮಾಡುವುದು ಸರಿಯಲ್ಲ ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಇದಕ್ಕೆ ಹೆಚ್ಚಿನ ಗಮನಕೊಟ್ಟು ಈ ವರ್ಷವಾದರೂ ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಿ, ಈ ಯೋಜನೆಯನ್ನು ಅಲ್ಲಿ ಇಂಟರ್‌ಡ್ಯೂಸ್ ಮಾಡಬೇಕು ಎಂದು ತಮ್ಮ ಮೂಲಕ ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಈ ಸದನದಲ್ಲಿ ಮಾನ್ಯ ಸ್ನೇಹಿತರು ಕೆಲವರನ್ನು ನಿನ್ನೆ ಮಾತನಾಡಿದ್ದಾರೆಂದು ಗೊತ್ತಾಯಿತು. ಏನೆಂದರೆ, ಗಿರಿಜನರ ಪಂಗಡಕ್ಕೆ ಸೇರಿದ ನಾಯಕ ಜನಾಂಗ ಇದೆ. ೧೯೫೦ನೇ ಕಾನ್‌ಸ್ಟಿಟ್ಯೂಷನ್ ಆರ್ಡರ್ ಪ್ರಕಾರ ೩೮ನೇ ಪಟ್ಟಿಯಲ್ಲಿ ನಾಯಕ ಜನಾಂಗವನ್ನು ಸೂಚಿಸಲಾಗಿದೆ. ಆದರೆ ೧೯೭೬ಕ್ಕೆ ಮುಂಚಿತವಾಗಿ ಈ ಜನಾಂಗದವರು ತಮ್ಮ ಹಕ್ಕುಗಳನ್ನು ಪಡೆಯುವುದರಲ್ಲಿ ನಿರ್ಬಂಧವನ್ನು ಹಾಕಲಾಗಿತ್ತು. ಆ ಸಮಯದಲ್ಲಿ ಒಂದು ಭಾಗದಲ್ಲಿ ಮಾತ್ರ ಆ ಜನಾಂಗದ ವಿದ್ಯಾರ್ಥಿಗಳು, ನಾಗರೀಕರು ತಮ್ಮ ಹಕ್ಕುಗಳನ್ನು ಪಡೆಯುವುದರಲ್ಲಿ ನಿರ್ಬಂಧವನ್ನು ಇಟ್ಟಿದ್ದರು, ಅವರಿಗೆ ಅನಾನುಕೂಲತೆ ಉಂಟಾಗುತ್ತಿತ್ತು. ೧೯೭೬ರಲ್ಲಿ ಈ ನಿರ್ಬಂಧವನ್ನು ಸಡಿಲ ಮಾಡಿದಮೇಲೆ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಭಾಗದಲ್ಲಿರತಕ್ಕ ನಾಯಕ ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳಾಗಲಿ, ನಾಗರೀಕರಾಗಲಿ ತಮ್ಮ ಹಕ್ಕುಗಳನ್ನು ಪಡೆಯುವುದರಲ್ಲಿ ಸ್ವಾತಂತ್ರ್ಯ ಬಂದಿದೆ. ಇದನ್ನು ಕೆಲವೊಂದು ಪಟ್ಟಭದ್ರಹಿತಾಸಕ್ತಿಗಳು ತಪ್ಪು ತಿಳಿದುಕೊಂಡು ಅವರ ಹಕ್ಕುಗಳನ್ನು ಮೊಟಕುಗೊಳಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವ ವಿಷಯ ಗೊತ್ತಾಗಿದೆ.

ಏತಕ್ಕೆಂದರೆ ವಿದ್ಯಾರ್ಥಿಗಳಿಗೂ ಸಹ ಇದರಿಂದ ಬಹಳ ತೊಂದರೆಯಾಗುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳವರ ಗಮನಕ್ಕೂ ಸಹ ತಂದಿದ್ದೇನೆ. ನಾಯಕ್ ಕಮ್ಯೂನಿಟಿ ಎಂದರೆ ಬೇರೆ ಜನಾಂಗದವರು ಒಂದು ಸರ್ಟಿಫಿಕೇಟ್ ಪಡೆದುಕೊಂಡು ಅದರಿಂದ ದುರುಪಯೋಗ ಪಡಿಸಿಕೊಳ್ಳುತ್ತಿದ್ದರು. ಹಿಂದೆ ಶ್ರೀ ಹಾವನೂರ್‌ರವರು ವರದಿ ಕೊಟ್ಟಿರುವ ಪ್ರಕಾರವಾಗಿ ನಮ್ಮ ಸರ್ಕಾರದ ಅಧಿಕೃತ ಪತ್ರದ ಪ್ರಕಾರವಾಗಿ ಈ ಒಂದು ನಾಯಕ ಜಾತಿಯನ್ನು ಒಂದು ಬಿ.ಸಿ. ಟ್ರೈಬ್ ಎಂದು ಸೇರಿಸಲಾಗಿತ್ತು. ಅದರ ಸರಿಸಮಾನವಾದ ಪದಗಳು ಬೇಡ, ವಾಲ್ಮೀಕಿ ಪದಗಳನ್ನು ಅದರಲ್ಲಿ ಸೇರಿಸಲಾಗಿತ್ತು, ಇದನ್ನು ನಮ್ಮ ಸರ್ಕಾರದವರು ಒಪ್ಪಿಕೊಂಡ ಮೇಲೆ ನಾಯಕ ಪಟ್ಟಿ ಗಿರಿಜನರ ಪಟ್ಟಿ ೩೧ ಇಡಿ ಅದರಲ್ಲಿತ್ತು. ಅದನ್ನು ಅಲ್ಲಿಂದ ಡಿಲೀಟ್ ಮಾಡಿದರು. ಇದೆಲ್ಲಾ ಒಂದೇ ಜಾತಿ ಎಂದು ಪರಿಗಣಿಸಿದ ಮೇಲೆ, ಇದರಲ್ಲಿ ತಾರತಮ್ಯ ಬರಬಾರದೆಂದು ಈ ಬೇಡ ಕಮ್ಯೂನಿಟಿಯನ್ನು ಕೂಡ ನಾಯಕ ಕಮ್ಯೂನಿಟಿ ಎಂದು ಮಾಡಿದರು. ಈ ಎಲ್ಲಾ ಕಮ್ಯೂನಿಟಿ ನಾಯಕ್ ಕಮ್ಯೂನಿಟಿಯಲ್ಲಿ ಬರುತ್ತದೆಂದು ಚರಿತ್ರಾಗಾರರು ಸಹ ಬರೆದಿದ್ದಾರೆ. ಈ ಗುಡ್ಡಗಾಡಿನ ಜನರಾದ ನಾಯಕ ಜನಾಂಗದವರು ಏನಿದ್ದಾರೆ ಅವರಿಗೆ ಸಿಗಬೇಕಾದ ನ್ಯಾಯವಾದ ಸೌಲಭ್ಯಗಳು ದೊರೆಯುತ್ತಿಲ್ಲ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಇವರು ಬಹಳ ಹಿಂದುಳಿದಿದ್ದಾರೆ ಮತ್ತು ವಿದ್ಯಾರ್ಥಿಗಳಿಗೂ ಸಹ ಅವರಿಗೆ ಯಾವ ಒಂದು ಸೌಲಭ್ಯಗಳು ಸಿಗಬೇಕಾಗಿತ್ತೋ ಅದು ಸಿಗದೇ ಬಹಳಷ್ಟು ತೊಂದರೆಗೊಳಪಟ್ಟಿದ್ದಾರೆಂದು ಕೇಳಿದ್ದೇನೆ. ಇದನ್ನು ಹೋಗಲಾಡಿಸುವುದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳವರಿಗೂ ಸಹ ಮನವಿಯನ್ನು ಕೊಟ್ಟಿದ್ದಾರೆ. ಸರ್ಕಾರದ ಒಂದು ಸುತ್ತೋಲೆ ಪ್ರಕಾರವಾಗಿ ಅವರ ಗುಣ ಲಕ್ಷಣಗಳನ್ನು ನೋಡಿಕೊಂಡು ನಮೂದಿಸಬೇಕೆಂದು ಹೇಳಿದ್ದಾರಂತೆ, ಇದರಿಂದ ನಾಯಕ್ ಜನಾಂಗದವರಿಗೆ ಬಹಳ ತೊಂದರೆಯಾಗುತ್ತಿದೆ. ಏತಕ್ಕೆಂದರೆ ಇವರು ಹಿಂದೆ ಕಾಡು ಗುಡ್ಡಗಳಲ್ಲಿ ಬಿಲ್ಲು ಬಾಣಗಳನ್ನು ಹಿಡಿದುಕೊಂಡು ಶಿಕಾರಿ ಮಾಡುತ್ತಿದ್ದರು. ಈಗಿನ ವಿದ್ಯಾರ್ಥಿಗಳಿಗೂ ಸಹ ಅದನ್ನು ತಂದು ತೋರಿಸಬೇಕೆಂದರೆ ಒತ್ತಾಯ ಮಾಡುತ್ತಿದ್ದಾರೆ ಇದರಿಂದ ನಮ್ಮ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಆ ದೃಷ್ಟಿಯಿಂದ ನೀವು ಏನು ಸರ್ಕ್ಯುಲರ್ ಹೊರಡಿಸಿದ್ದೀರಿ ಇದು ಬಹಳ ಅನ್ಯಾಯವೆಂದು ಅನ್ನಿಸುತ್ತದೆ ಏತಕ್ಕೆಂದರೆ ಬೇರೆ ಎಸ್.ಸಿ. ಜನಾಂಗಕ್ಕೆ ಸೇರಿದಂಥ ಜನರಿಗೆ ನೀವು ಯಾವುದೇ ತರಹದಲ್ಲಿ ಇನ್‌ಸಿಸ್ಟ್ ಮಾಡದೇ ಈ ಒಂದು ಜನಾಂಗದವರಿಗೆ ಮಾತ್ರ ಈ ರೀತಿ ಧೋರಣೆಯನ್ನು ಅನುಸರಿಸುತ್ತಿರುವುದು ಸರಿಯಲ್ಲ.

ಕುಮಾರಿ ಪ್ರಮೀಳಾರವರು ಮಾತನಾಡಿ ಮುದಕರಿ ನಾಯಕ್ ಜನಾಂಗದವರು hunters were rulers ಎಂದು ಹೇಳಿದರು. ಇರಬಹುದು ಹಿಂದೆ ತಮ್ಮ ಶಕ್ತಿ ಪ್ರದರ್ಶನವನ್ನು ಮಾಡಿ ಕೆಲವರು ಚಕ್ರವರ್ತಿಗಳಾಗಿರಬಹುದು. ಆದರೆ ಈಗ ಆ ಜನಾಂಗದವರನ್ನು ನೋಡಿದರೆ ಅವರ ಪರಿಸ್ಥಿತಿ ಹೇಗಿದೆ

ಎಂಬುದು ಗೊತ್ತಾಗುವುದಿಲ್ಲವೇ ? ಆ ಒಂದು ದೃಷ್ಟಿಯಿಂದ ಹೇಳಬೇಕೆಂದರೆ ಬಹಳ ಅನ್ಯಾಯವಾಗಿದೆ. ಇದನ್ನು ಹೋಗಲಾಡಿಸುವುದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ಪ್ರಕಾರವಾಗಿ ರಾಯಚೂರು ಜಿಲ್ಲೆಯಲ್ಲಿ ನಾಯಕ ಸಮಾಜಕ್ಕೆ ಸೇರಿದಂಥ ವಿದ್ಯಾರ್ಥಿಯೊಬ್ಬ ಸರ್ಟಿಫಿಕೇಟ್‌ನ್ನು ಕೇಳುವುದಕ್ಕೆ ಹೋದಾಗ ಅಲ್ಲಿದ್ದ ಒಬ್ಬ ಅಧಿಕಾರಿ ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಅದನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ೨೦-೧೦-೧೯೮೧ರಲ್ಲಿ ಎಲ್.ಟಿ. ಪಾಟೀಲ್, ಡಿಸ್ಟ್ರಿಕ್ಟ್ ಆಫೀಸರ್, ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಮೈನಾರಿಟಿ, ರಾಯಚೂರು ರವರು ಪತ್ರ ಬರೆಯುತ್ತಾರೆ ಅದರಲ್ಲಿ ಏನೆಂದು ಬರೆದಿದ್ದಾರೆಂದರೆ,

> "As discussed with you on 22-10-1981 in connection with the issue of Caste certificate to Nayaka, I am to inform you that this caste has been deleted from Backward Tribe as per G.O. No. SWL/12/TBS/77, dated 23-1-1978 and they have been included in S.T......"

ಎಂದು ಹೇಳಿದ್ದಾರೆ. ಮತ್ತೆ ಏನು ಹೇಳುತ್ತಾರೆ ಎಂದರೆ ಇದರಲ್ಲಿ ತಮ್ಮ ಸ್ವಂತ ಅಧಿಕಾರವನು ದುರುಪಯೋಗಪಡಿಸಿಕೊಂಡು ಹೇಳುತ್ತಾರೆ.

> "......Further I am to inform you that this caste of Nayaka is not existing in Raichur District. Plase note while issue of this caste certificate."

ಎಂದು ತಹಶೀಲ್ದಾರ್, ಮಾನ್ವಿಯವರಿಗೆ ಬರೆದಿದ್ದಾರೆ. ಈ ಒಂದು ಸಮಾಜದಿಂದ ಅವರು ಏನಾದರೂ ಬೇಸರಗೊಂಡಿದ್ದಾರೆಯೋ ? ಈ ಒಂದು ಸಮಾಜದವರು ಅವರಿಗೆ ಹಿಡಿಸುವುದಿಲ್ಲವೇ ? ಒಬ್ಬ ಗಿರಿಜನರ ಕಲ್ಯಾಣವನ್ನು ಆ ಅಧಿಕಾರಿ ಬಯಸುವುದಿಲ್ಲವೇ ? ತಮ್ಮ ಸ್ವಂತ ಅಭಿಪ್ರಾಯವನ್ನು ಬರೆದು ಗೊಂದಲಕ್ಕೆ ಈಡು ಮಾಡಿದ್ದಾರೆ. ಇಂಥಾ ಗೊಂದಲವನ್ನು ಹೋಗಲಾಡಿಸಿ ಅಂಥಾ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಆ ರೀತಿ ಕ್ರಮ ತೆಗೆದುಕೊಂಡು ದುರ್ಬಲ ವರ್ಗದವರ ಮೇಲೆ ತಮಗೆ ಇರುವ ಅನುಕಂಪವನ್ನು ತಾವು ತೋರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಈ ನಾಯಕ ಜನಾಂಗದವರು ನಮ್ಮ ರಾಜ್ಯದಲ್ಲಿ ೩೫,೪೦ ಲಕ್ಷ ಜನರಿದ್ದಾರೆ ಅವರಿಗೆ ಸಿಗತಕ್ಕ ಹಕ್ಕುಗಳನ್ನು ಮೊಟಕುಗೊಳಿಸುವುದಕ್ಕೆ ಯಾರೂ ಪ್ರಯತ್ನ ಮಾಡಬಾರದು ಆ ರೀತಿ ಪ್ರಯತ್ನ ಮಾಡಿದ್ದೇ ಆದರೆ ಅಂಥಾ ಅಧಿಕಾರಿಗಳು ಯಾರೇ ಇರಲಿ ಎಷ್ಟೇ ಶಕ್ತಿವಂತರಿರಲಿ ಅಂಥವರ ಮೇಲೆ ಉಗ್ರ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ವಿ ತಾಲ್ಲೂಕ್ ಬಹಳ ಹಿಂದುಳಿದ ಪ್ರದೇಶ ಮತ್ತು ಬಾರ್ಡರ್ ಏರಿಯಾ, ಆಂಧ್ರ ಪ್ರದೇಶಕ್ಕೆ ಹತ್ತಿರದಲ್ಲಿದೆ. ಅದು ನನ್ನ ಕ್ಷೇತ್ರವಾಗಿದೆ. ಅಲ್ಲಿಗೆ ಒಂದು ಕಮ್ಯೂನಿಟಿ ಹಾಲ್‌ನ್ನು ಮತ್ತು ಆಶ್ರಮ ಸ್ಕೂಲ್‌ನ ಬಗ್ಗೆ ನಾನು ಸರ್ಕಾರದವರನ್ನು ಕೇಳಿಕೊಂಡಿದ್ದೆ. ಆದರೆ ಇದರ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಆದುದರಿಂದ ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳವರು ಹೆಚ್ಚಿನ ಆಸಕ್ತಿ ವಹಿಸಿ ಬಹುಶಃ ಆದಷ್ಟು ಬೇಗ ನನ್ನ ಕ್ಷೇತ್ರದಲ್ಲಿ ಈ ಕಮ್ಯೂನಿಟಿ ಹಾಲ್ ಮತ್ತು ಆಶ್ರಮ ಸ್ಕೂಲ್‌ಗಳನ್ನು ತೆರೆಯಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಹಿಂದುಳಿದ ವರ್ಗದವರ ಬಗ್ಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಶೇಕಡ ೬೦ರಷ್ಟು ಮಂದಿ ಹಿಂದುಳಿದ ವರ್ಗದವರು ಇದ್ದಾರೆಂದು ಅಂಕಿ ಸಂಖ್ಯೆಗಳಿಂದ ಗೊತ್ತಾಗುತ್ತದೆ. ಆದರೆ ಇಲ್ಲಿ ಹಿಂದುಳಿದ ವರ್ಗದವರ ಪುರೋಭಿವೃದ್ಧಿಗಾಗಿ ಯಾವ ಅಂಥ ಕಾರ್ಯಕ್ರಮಗಳೂ ಜಾರಿಯಲ್ಲಿಲ್ಲ. ಜಾರಿಯಲ್ಲಿರ ತಕ್ಕದ್ದು ಏನೆಂದರೆ ಹಿಂದುಳಿದ ವರ್ಗದ ಅಭಿವೃದ್ಧಿ ನಿಗಮ. ಆದರೆ ಇದು ಏನೇನು ಕೆಲಸ ಮಾಡುತ್ತಿಲ್ಲ. ಅದಕ್ಕೆ ಹಣ ಸಹಾಯವನ್ನು ಒದಗಿಸಿಲ್ಲ. ಹೀಗಾದರೆ ಹಿಂದುಳಿದ ವರ್ಗದವರ ಅಭಿವೃದ್ಧಿ ಹೇಗೆ ಆಗಬೇಕು ? ಈ ಬಗ್ಗೆ ಕ್ರಮ ಕೈಗೊಂಡು ಅದನ್ನು ಚುರುಕುಗೊಳಿಸಬೇಕೆಂದು ಹೇಳುತ್ತೇನೆ. ಹಿಂದುಳಿದ ವರ್ಗದ ಅಭಿವೃದ್ಧಿ ಆದರೆ ದೇಶಕ್ಕೆ ಕಲ್ಯಾಣವಾಗುತ್ತದೆ. ಸರ್ಕಾರೀ ನೌಕರಿಯಲ್ಲಿ ಹಿಂದುಳಿದ ವರ್ಗದ ಮತ್ತು ಗಿರಿಜನ ಪಂಗಡಕ್ಕೆ ಸೇರಿದ ಅಧಿಕಾರಿಗಳು ಹೆಚ್ಚು ಇಲ್ಲ. ಆದ್ದರಿಂದ, ರೆಕ್ರೂಟ್‌ಮೆಂಟ್

ರೂಲ್ಸ್‌ನಲ್ಲಿ ಬದಲಾವಣೆ ಮಾಡಿ ಅವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾತಿನಿಧ್ಯ ದೊರೆಯುವಂತೆ ಮಾಡಬೇಕು. ಗಿರಿಜನ ಪಂಗಡಕ್ಕೆ ಸೇರಿದವರಿಗೆ ಶಾಸನ ಸಭೆಗಳಲ್ಲಿ, ರಾಜಕೀಯದಲ್ಲಿ ಹಾಗೂ ಆರ್ಥಿಕ ಸಾಮಾಜಿಕ ರಂಗಗಳಲ್ಲಿ ಸರಿಯಾದ ಪ್ರಾತಿನಿಧ್ಯ ದೊರೆಯುವಂತೆ ಮಾಡಬೇಕು. ಈ ಶಾಸನ ಸಭೆಯಲ್ಲಿರತಕ್ಕ ೨೨೫ ಸ್ಥಾನಗಳಲ್ಲಿ ಸಾಕಷ್ಟು ಸ್ಥಾನಗಳನ್ನು ಗಿರಿಜನ ಪಂಗಡಕ್ಕೆ ಸೇರಿದವರಿಗಾಗಿ ಮೀಸಲಿಡಬೇಕು. ಈ ಒಂದು ವ್ಯವಸ್ಥೆ ಅಗತ್ಯವಾಗಿ ಆಗಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇನ್ನು ಭೂಸುಧಾರಣೆಯ ಬಗ್ಗೆ ಹೇಳುವುದಾದರೆ, ಈ ದಿಸೆಯಲ್ಲಿ ನಮ್ಮ ರಾಜ್ಯದಲ್ಲಿ ಒಂದು ಲಕ್ಷ ಎಕರೆಗೂ ಮೇಲ್ಪಟ್ಟು ಜಮೀನನ್ನು ವಶಪಡಿಸಿಕೊಳ್ಳಲಾಗಿದೆ. ಆದರೆ ೭೫ ಸಾವಿರ ಎಕರೆಯಲ್ಲಿ ಸರ್‌ಪ್ಲಸ್ ಲ್ಯಾಂಡನ್ನು ಏನು ಹಂಚಲಾಗಿದೆ ಅದರಲ್ಲಿ ೨೭ ಸಾವಿರ ಎಕರೆ ಜಮೀನನ್ನು ಹರಿಜನರಿಗೆ ಹಂಚಲಾಗಿದೆ, ಆದರೆ ಕೇವಲ ೨ ಸಾವಿರ ಎಕರೆಯನ್ನು ಗಿರಿಜನರಿಗೆ ಹಂಚಲಾಗಿದೆ. ಪರ್ಸೆಂಟೇಜ್ ಪ್ರಕಾರ ಹರಿಜನರಿಗೆಷ್ಟು ಜಮೀನನ್ನು ನೀಡಲಾಗುತ್ತದೋ ಅದೇ ಲೆಕ್ಕದಲ್ಲಿ ಗಿರಿಜನರಿಗೂ ದೊರೆಯುವಂತೆ ಮಾಡುವ ಕಡೆ ಮಂತ್ರಿಗಳು ಗಮನ ಹರಿಸಬೇಕೆಂದು ಹೇಳುತ್ತೇನೆ. ಹಿಂದುಳಿದ ವರ್ಗದವರ ಹಾಗೂ ಹರಿಜನ-ಗಿರಿಜನರ ಮಾಡತಕ್ಕ ಅಭಿವೃದ್ಧಿ ಕಾರ್ಯಗಳನ್ನು ಚೆಕ್ ಮಾಡತಕ್ಕ ಕಮಿಟಿಗಳು ಬೇರೆ ರಾಜ್ಯಗಳಲ್ಲಿ ಹೇಗೆ ಇವೆ ಅದೇ ರೀತಿ ಇಲ್ಲಿಯೂ ಕೂಡ ಶಾಸಕರ ಸಮಿತಿಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದುಳಿದ ವರ್ಗಕ್ಕೆ ಸೇರಿದ ಕೃಷಿ ಕಾರ್ಮಿಕರಿಗೆ ಸಿಗತಕ್ಕ ಸೌಕರ್ಯಗಳು ಸಿಗುವಂತಾಗಬೇಕು. ಅವರು ಸಾಲ ತೆಗೆದುಕೊಳ್ಳುವುದಕ್ಕೆ ಹೋದರೆ ಪಹಣಿಯಲ್ಲಿ ನಿಮ್ಮ ಹೆಸರು ಇಲ್ಲವೆಂದು ವಾಪಸ್ಸು ಕಳುಹಿಸಿರುವ ನಿದರ್ಶನಗಳು ಇವೆ. ಕಲ್ಟಿವೇಟ್ ಮಾಡತಕ್ಕ ಆಧಾರದ ಮೇಲೆ ಭೂಅಭಿವೃದ್ಧಿಗಾಗಿ ಬೇಕಾದ ಸಾಲ ಸೌಲಭ್ಯಗಳು ದೊರೆಯುವ ವ್ಯವಸ್ಥೆ ಆಗಬೇಕು. ಭೂಸುಧಾರಣಾ ಕಾನೂನು ಪ್ರಕಾರ ಹರಿಜನ-ಗಿರಿಜನರಿಗೆ ಶೇಕಡ ೫೦ರಷ್ಟು ಭೂಮಿಯನ್ನು ಹಂಚಬೇಕೆಂದು ಇದೆ, ಅದೇ ಪ್ರಕಾರ ಹಿಂದುಳಿದ ವರ್ಗದವರಿಗೂ ಸಹ ಕೊಡತಕ್ಕ ವ್ಯವಸ್ಥೆಯಾಗಬೇಕು. ಈ ಒಂದು ವರ್ಗಗಳಿಗೆ ರಿಸರ್ವೇಷನ್ ಮತ್ತೊಂದು ವ್ಯವಸ್ಥೆಗಳನ್ನು ಮಾಡುವ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಮಂತ್ರಿಗಳನ್ನು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

SRI H. GANGADHARAN.—Sir,......

SRI C. M. ARUMUGHAM.—Sir, I would like to speak on this demand. Kindly permit me to speak for a few minutes.

MR. SPEAKER.—I will permit you after sometime. Let Sri Gangadharan speak.

SRI C. M. ARUMUGHAM.—Sir, I am only appealing to you, for the last 5–6 days I have not participated on any subject. This is a very important demand so far as I am concerned. If you could permit me, I will speak for two minutes. Gangadharan speaks on every demand and he is a master of all subjects.

MR. SPEAKER.—Let him speak, I will givs you a chance afterwards.

ಶ್ರೀ ಹೆಚ್. ಗಂಗಾಧರನ್ (ಚಾಮರಾಜ).—ಸನ್ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣದ ಬಗ್ಗೆ ನಮ್ಮ ದೇಶದಲ್ಲಿ ನಡೆದಿರತಕ್ಕ ಕೆಲವು ಕಾರ್ಯಕ್ರಮಗಳನ್ನು ವಿಶ್ಲೇಷಿಸುತ್ತಾ ಬಹಳ ಮುಖ್ಯವಾಗಿ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರ ಅಭಿವೃದ್ಧಿ ಬಗ್ಗೆ ನಾವು ಸಾಧಿಸಿದ ಸಾಧನೆ ಏನು ಎಂಬುದನ್ನು ಅವಲೋಕಿಸಬೇಕಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ವೀಕ್ಷಿಸಿದಾಗ ಅವರ ಅಭಿವೃದ್ಧಿಗಾಗಿ ನಾವು ಮಾಡುವ ಕಾರ್ಯಕ್ಕಿಂತ ಅವರು ಮಾಡಿರುವುದು ಹೆಚ್ಚಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಆಧಾರವೇನೆಂದರೆ, ಪಂಚವಾರ್ಷಿಕ ಯೋಜನೆಗಳಿಗೆ ಕೇಂದ್ರ ಸರ್ಕಾರದವರು ಖರ್ಚು ಮಾಡಿರತಕ್ಕ ಹಣ ೧೧೬೭ ಕೋಟಿ ೫೮ ಲಕ್ಷ ರೂಪಾಯಿಗಳು ನಂತರ ೧೯೭೩-೭೪ರಲ್ಲಿ ಎಸ್.ಸಿ.ಎಸ್.ಟಿ. ಕಮೀಷನರ್ ಬರೆದ ವರದಿಯಲ್ಲಿ ಹೇಳುತ್ತಾರೆ ೫ ಪಂಚವಾರ್ಷಿಕ ಯೋಜನೆಗಳ ಪರಿಣಾಮವಾಗಿ ರಾಷ್ಟ್ರದಲ್ಲಿ ಗಣನೀಯ ಪ್ರಗತಿಯಾಗಿದೆ, ಆದರೆ ಇದರಿಂದ ದೀನದಲಿತರಿಗೆ ನಿರೀಕ್ಷಿತ

ಫಲ ದೊರೆತಿಲ್ಲ ಎಂದು. ೧೯೭೫-೭೬. ೭೬– ೭೭ರ ವರದಿಯಲ್ಲಿ ಬಹಳ ದುಃಖದಿಂದ ಹೇಳಿರುವ ಮಾತು ಎಂದರೆ ಅನೇಕ ಕಡೆಗಳಲ್ಲಿ ಹರಿಜನರು ಇನ್ನೂ ಒಂದೇ ಬಾವಿಯಿಂದ ನೀರು ಕುಡಿಯುವಂತಿಲ್ಲ, ಬೀದಿ ಯಲ್ಲಿ ಹೆಣದ ಮೆರವಣಿಗೆ ತೆಗೆದುಕೊಂಡು ಹೋಗುವಂತಿಲ್ಲ ಹೀಗೆಯೇ ಹೇಳುತ್ತಾ ೬ನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗುವ ಮುನ್ನ ಒಂದು ಮಾತು ಹೇಳಿದರು, ಅದೇನೆಂದರೆ, 'ಅತ್ಯಂತ ದುಃಖಕ್ಕೆ ಈಡಾಗಿರುವ ಹರಿಜನರನ್ನು ನೋಡಿದರೆ ಅನೇಕ ವರ್ಷಗಳಿಂದ ಇರುವ ನಮ್ಮ ಸಮಾಜದ ಬಡತನ ಇನ್ನೂ ಅಳಿಸಿಲ್ಲ ಎಂಬುದು ವ್ಯಕ್ತವಾಗುತ್ತದೆ.' ೬ನೇ ಯೋಜನೆಯ ಕರಡನ್ನು ಬರೆದಾಗ ಅದರ ಮುನ್ನುಡಿಯಲ್ಲಿ ಇದುವರೆಗೆ ಏನು ಸಾಧನೆ ಮಾಡಿದ್ದೇವೆಂಬುದನ್ನು ಲೆಕ್ಕ ಹಾಕಿ ಹೇಳಿದ್ದಾರೆ. ಐದು ಪಂಚವಾರ್ಷಿಕ ಯೋಜನೆಗಳಲ್ಲಿ ೧೦೬೮ ಕೋಟಿ ೩೯ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಾ ೩೦ ವರ್ಷಗಳನ್ನು ಕಳೆದಿದ್ದೇವೆ. ಇದನ್ನು ಲೆಕ್ಕ ಹಾಕಿದರೆ ಹರಿಜನರಿಗೆ ತಲಾ ೩೦೦ ರೂಪಾಯಿಗಳಂತೆ ಖರ್ಚು ಮಾಡಿದ್ದಾರೆ. ನಮ್ಮ ರಾಜ್ಯದ ಕಡೆಗೆ ಬಂದಾಗ ನಮ್ಮ ರಾಜ್ಯದಲ್ಲಿ ೫ ಪಂಚ ವಾರ್ಷಿಕ ಯೋಜನೆಗಳಲ್ಲಿ ಮತ್ತು ಎರಡು ವಾರ್ಷಿಕ ಯೋಜನೆಗಳಲ್ಲಿ ಖರ್ಚು ಮಾಡಬೇಕೆಂದು ನಿರೀಕ್ಷಿಸಿದ ಹಣ ೩೦.೨ ಕೋಟಿ ರೂಪಾಯಿಗಳು. ಆದರೆ ಅದರಲ್ಲಿ ಖರ್ಚು ಮಾಡಿರತಕ್ಕ ಹಣ ೨೭ ಕೋಟಿ ೭೪ ಲಕ್ಷ ರೂಪಾಯಿಗಳು ಮಾತ್ರ. ಕೊಟ್ಟಂತಹ ಹಣದಲ್ಲಿ ೩ ಕೋಟಿ ರೂಪಾಯಿಗಳು ಖರ್ಚಾಗಲಿಲ್ಲ. ಅದರಲ್ಲಿ ಹರಿಜನರಿಗಾಗಿ ಖರ್ಚು ಮಾಡಿರತಕ್ಕದ್ದು ತಲಾ ೬೦ ರೂಪಾಯಿಗಳು. ಹೀಗಾದರೆ ಹರಿಜನರ ಅಭಿವೃದ್ಧಿ ಹೇಗೆ ಸಾಧ್ಯವಾಗುತ್ತದೆಂಬುದನ್ನು ಯೋಚಿಸಬೇಕಾಗಿದೆ. ೧೯೮೦-೮೧ರಲ್ಲಿ ಕೊಟ್ಟಿರತಕ್ಕ ಹಣದಲ್ಲಿ ೨೦ ಲಕ್ಷ ರೂಪಾಯಿಗಳನ್ನು ಅಧಿಕಾರಿಗಳು ಉಳಿತಾಯ ಮಾಡಿದ್ದಾರೆ ಏತಕ್ಕೆ ಅದನ್ನು ಖರ್ಚು ಮಾಡಲಿಕ್ಕೆ ಆಗಲಿಲ್ಲ? ನಾನ್ ಪ್ಲಾನ್ ಸ್ಕೀಂನಲ್ಲಿ ೪೬ ಲಕ್ಷ ರೂಪಾಯಿಗಳನ್ನು ಉಳಿತಾಯ ಮಾಡಿದ್ದಾರೆ. ಸೆಂಟ್ರಲ್ ಸ್ಪಾನ್ಸರ್ಡ್ ಯೋಜನೆಯಲ್ಲಿ ೨೬ ಲಕ್ಷ ರೂಪಾಯಿಗಳನ್ನು ಉಳಿತಾಯ ಮಾಡಿದ್ದಾರೆ. ಇಷ್ಟು ಹಣವನ್ನು ಖರ್ಚು ಮಾಡಿದ್ದರೆ ಸಮಾಜದ ಎಷ್ಟು ಜನರಿಗೆ ಉಪಯೋಗವಾಗುತ್ತಿತ್ತು, ಎಷ್ಟು ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಬಹುದಾಗಿತ್ತು ಎಂಬುದನ್ನು ಆಲೋಚನೆ ಮಾಡಬೇಕು. ಏತಕ್ಕೆ ಈ ಹಣವನ್ನು ಖರ್ಚು ಮಾಡಲಿಲ್ಲ ? ಇದರಲ್ಲಿ ಮಂತ್ರಿಮಂಡಲದ ಅಥವಾ ಬೇರೆ ಯಾರ ಹೊಣೆಗಾರಿಕೆ ಇದೆ ? ಇದನ್ನು ತೀವ್ರವಾಗಿ ಪರಿಶೀಲಿಸಬೇಕಾದುದು ಅಗತ್ಯ. ಕೇಂದ್ರ ಸರ್ಕಾರದ ಘೋಷಣೆಗಳು ಎಷ್ಟರ ಮಟ್ಟಿಗೆ ಕಾರ್ಯಗತವಾಗಿವೆ ಎಂಬುದನ್ನು ಈ ಪುಟ್ಟ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಕೇಂದ್ರದಲ್ಲಿ ಹರಿಜನರಿಗಾಗಿ ಮೀಸಲಿದ್ದ ಹುದ್ದೆಗಳ ಸಂಖ್ಯೆ ೬೪೮೯೯ ಆದರಲ್ಲಿ ಕೊಟ್ಟಿದ್ದು ೩೨೬೬೫ ಜನರಿಗೆ ಮಾತ್ರ. ಇನ್ನೂ ಉದ್ಯೋಗಕ್ಕಾಗಿ ಕಾಯುತ್ತಿರುವವರ ಸಂಖ್ಯೆ ೧೪೭೯೦೩೫ ಗಿರಿಜನರಿಗೆ ಘೋಷಿತವಾಗಿದ್ದ ಕೆಲಸ ಗಳು ೨೯೭೭೨, ಅದರಲ್ಲಿ ಕೊಟ್ಟಿದ್ದು ೯೪೧೮ ಜನರಿಗೆ ಮಾತ್ರ ಇನ್ನೂ ಉದ್ಯೋಗಕ್ಕಾಗಿ ಕಾಯುತ್ತಿರುವ ವರು ೩೩೯೮೮೪ ಜನ. ಇನ್ನು ನಮ್ಮ ಹಣೇಬರಹವನ್ನು ನೋಡುವುದಾದರೆ, ೧೯೭೮ರಲ್ಲಿ ಹರಿಜನರಿಗಾಗಿ ಘೋಷಿಸಿದ ಹುದ್ದೆಗಳು ೪೬೮೭, ಅದರಲ್ಲಿ ಕೊಟ್ಟಿದ್ದು ೨೪೯೧ ಜನರಿಗೆ. ಇನ್ನೂ ಹುದ್ದೆಗಳಿಗಾಗಿ ಕಾಯುತ್ತಿರುವವರ ಸಂಖ್ಯೆ ೫೩೬೮೩. ಗಿರಿಜನರಿಗಾಗಿ ಘೋಷಿಸಿದ ಹುದ್ದೆಗಳು ೧೨೧೪, ಅದರಲ್ಲಿ ಕೆಲಸಕ್ಕೆ ತೆಗೆದುಕೊಂಡಿದ್ದು ೪೨೬, ಇನ್ನೂ ಕೆಲಸಕ್ಕಾಗಿ ಕಾಯುತ್ತಿರುವವರು ೪೩೮೨ ಜನ. ಇದು ನಮ್ಮ ಪ್ರಗತಿಯ ಸಾಧನೆ.

ಹೀಗೆ ನಾವು ಸಾಧನೆ ಮಾಡುತ್ತಾ ಹೋದರೆ ಎಲ್ಲಿಯವರೆಗೆ ಹರಿಜನರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯ? ಇದನ್ನು ನಾನು ಎರಡು ದೃಷ್ಟಿಯಿಂದ ವಿಚಾರ ಮಾಡುತ್ತೇನೆ. ಒಂದು ಆರ್ಥಿಕ ದೃಷ್ಟಿ. ಇನ್ನೊಂದು, ಸಾಮಾಜಿಕ-ದೃಷ್ಟಿ. ಇದನ್ನು ಬಗೆಹರಿಸುವುದು ಹೇಗೆ ಎಂಬುದಕ್ಕಿಂತ ಮುಂಚೆ ಹಿಂದಿನ ಸರ್ಕಾರ ಈ ದಿಸೆಯಲ್ಲಿ ಮಾಡಿದ ಕಾರ್ಯಗಳ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಕೆಲವು ಮಾನ್ಯ ಸದಸ್ಯರು ಹಿಂದಿನ ಸರ್ಕಾರ ಮಾಡುತ್ತಿದ್ದ ಕೆಲಸಕಾರ್ಯಗಳು ನಿಂತುಹೋಗಿವೆಯೇನೋ ಎಂಬ ಅತಂಕ ವನ್ನೂ ವ್ಯಕ್ತಪಡಿಸಿದ್ದಾರೆ. ಈ ಇಲಾಖೆಗೆ ಬೇಡಿಕೆ ಬಂದಿರತಕ್ಕದ್ದು ೧೯೭೨-೭೩ ರಲ್ಲಿ ೧೧.೧೩ ಕೋಟಿ ರೂಪಾಯಿಗಳು; ೧೯೭೩-೭೪ ರಲ್ಲಿ ೧೪.೩೯ ಕೋಟಿ; ೧೯೭೪-೭೫ ರಲ್ಲಿ ೧೦.೯೫ ಕೋಟಿ: ೧೯೭೫-೭೬ರಲ್ಲಿ ೯.೭೩ ಕೋಟಿ; ೧೯೭೬-೭೭ ರಲ್ಲಿ ೯.೭೨ ಕೋಟಿ; ೧೯೭೮-೭೯ ರಲ್ಲಿ ೧೩.೨೫ ಕೋಟಿ; ೧೯೭೯-೮೦ರಲ್ಲಿ ೨೩.೫೦ ಕೋಟಿ; ೧೯೮೦-೮೧ ರಲ್ಲಿ ೨೬.೨೫ ಕೋಟಿ; ಈ ವರ್ಷ ೩೦.೫೦ ಕೋಟಿ ಮಾನ್ಯ ವೀರಪ್ಪ ಮೊಯಿಲಿಯವರು ಅರ್ಥಮಂತ್ರಿಗಳಾಗಿ ಬಂದಮೇಲೆ ಹೆಚ್ಚಿಗೆ ಕೊಟ್ಟಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ೧೯೭೩ ರಿಂದೀಚೆಗೆ ಕೆಲಸ ನಿಂತುಹೋಗಿದೆ ಎಂದು ಮಾನ್ಯ ಸದಸ್ಯರು ಆತಂಕ ವ್ಯಕ್ತಪಡಿಸಿದ್ದರೂ ಹಣ ಅದಕ್ಕೆ ಹೆಚ್ಚು ಕೊಟ್ಟಿದ್ದಾರೆ. ಹಣ ಹೆಚ್ಚು ಕೊಟ್ಟತಕ್ಷಣ ಕೆಲಸ ತೃಪ್ತಿಕರ

ವಾಗಿದೆ ಎಂದು ಅರ್ಥ ಅಲ್ಲ. ಸರ್ಕಾರ ಹೆಚ್ಚು ಹಣ ಕೊಟ್ಟಿಲ್ಲ ಎಂಬ ಭಾವನೆ ಬರಬಾರದು. ಸರ್ಕಾರ ಮಾಡಿರುವ ಒಳ್ಳೆಯ ಕೆಲಸದ ಬಗ್ಗೆ ಒಳ್ಳೆಯ ಮಾತನ್ನು ಆಡುವುದು ಆಗತ್ಯ. ನಮ್ಮ ರಾಜ್ಯದಲ್ಲಿ ಇಂದಿನ ಸೆನ್‌ಸಸ್ ಪ್ರಕಾರ ೪೦ ಲಕ್ಷ ಜನ ಹರಿಜನಗಿರಿಜನರಿದ್ದಾರೆ. ಒಂದು ಕುಟುಂಬಕ್ಕೆ ೫ ಜನರಂತೆ ಲೆಕ್ಕ ಹಾಕಿದರೂ ಕೂಡ ೮ ಲಕ್ಷ ಕುಟುಂಬಗಳಾಗುತ್ತವೆ. ಈ ೮ ಲಕ್ಷ ಕುಟುಂಬಗಳ ಅಭ್ಯುದಯದ ಸಾಧನೆ ಮಾಡುವುದಕ್ಕಾಗುವುದಿಲ್ಲವೆ? ಸರ್ಕಾರದ ನಿಯಮಾವಳಿ ಪ್ರಕಾರ ೧೮ ಪರ್ಸೆಂಟ್ ಸರ್ಕಾರಿ ನೌಕರಿ ಕೊಟ್ಟರೆ ೯೦ ಸಾ..ರ ಜನರಿಗೆ ನೌಕರಿ ಕೊಟ್ಟಂತಾಗುತ್ತದೆ. ಅದೇರೀತಿ ಸರ್ಕಾರಿ ಹಾಗೂ ಖಾಸಗಿ ವಲಯಗಳಲ್ಲಿರತಕ್ಕ ಕಾರ್ಮಿಕರ ಸಂಖ್ಯೆ ೧೨ ಲಕ್ಷ. ಅದರಲ್ಲಿ ೧೮ ಪರ್ಸೆಂಟ್‌ನಂತೆ ನೌಕರಿ ಕೊಟ್ಟರೆ ೨ ಲಕ್ಷ ಹರಿಜನಗಿರಿಜನರಿಗೆ ನೌಕರಿ ಒದಗಿಸುವುದಕ್ಕೆ ಸಾಧ್ಯವಿರುತ್ತಿತ್ತು. ಆ ೨ ಲಕ್ಷ ಜನರಿಗೆ ನೌಕರಿ ಒದಗಿಸಿಕೊಟ್ಟಿದ್ದರೆ ಸಮಾಜದ ಪ್ರಗತಿ ಎಷ್ಟರಮಟ್ಟಿಗೆ ಸಾಧ್ಯವಾಗುತ್ತಿತ್ತು ಎಂಬುದನ್ನು ನೋಡಬಹುದು. ಖಾಸಗಿ ಮತ್ತು ಸರ್ಕಾರಿ ವಲಯಗಳಲ್ಲಿ ಸಾರಿಗೆ ಮತ್ತಿತರ ಸಂಸ್ಥೆಗಳಲ್ಲಿ ೩ ಲಕ್ಷ ಜನರಿದ್ದಾರೆ. ಅಲ್ಲಿ ೧೮ ಪರ್ಸೆಂಟ್‌ನಂತೆ ನೌಕರಿ ಕೊಟ್ಟಿದ್ದರೆ ೫೦ ಸಾವಿರ ಜನರಿಗೆ ನೌಕರಿ ಕೊಡಿಸ ಬಹುದಾಗಿತ್ತು. ಈ ಕೆಲಸ ಮಾಡುವಲ್ಲಿ ಸರ್ಕಾರ ಏತಕ್ಕೆ ಅಸಮರ್ಥವಾಗಿದೆ ಎಂಬುದನ್ನು ಮುಖ್ಯ ವಾಗಿ ಗಮನಿಸಬೇಕಾಗಿದೆ. ಈ ಪ್ರಮುಖವಾದ ಸಮಾಜದ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸರ್ಕಾರ ಅತ್ಯಂತ ತೀವ್ರವಾಗಿ ಹೆಜ್ಜೆಯಿಡಬೇಕು. ಈ ಜನರನ್ನು ಮುಖ್ಯವಾಗಿ ವಾಣಿಜ್ಯ ಮಾರ್ಗದತ್ತ ಕರೆ ದೊಯ್ಯುವ ಮಾರ್ಗವನ್ನು ಅನುಸರಿಸಬೇಕಾಗಿದೆ. ಹರಿಜನ ಗಿರಿಜನರಿಗೆ ವಾಣಿಜ್ಯ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಪ್ರವೇಶ ಮಾಡತಕ್ಕ ಅವಕಾಶವನ್ನು ನಾವು ಕಲ್ಪಿಸಿಕೊಟ್ಟಿಲ್ಲ. ಜನತಾ ಸರ್ಕಾರ ಕೇಂದ್ರದಲ್ಲಿದ್ದಾಗ ಅವರು ಒಂದು ಕಾನೂನನ್ನು ಮಾಡಿದ್ದರು. ಸರ್ಕಾರ ಕೈಗಾರಿಕೆಗಳಿಗಾಗಲೀ ಅಥವಾ ಇನ್ಯಾವುದೇ ಏಜೆನ್ಸಿಗಾಗಲೀ ಲೈಸೆನ್ಸ್ ಕೊಡುವಾಗ ೧೮ ಪರ್ಸೆಂಟಿನಷ್ಟು ಹರಿಜನಗಿರಿಜನರಿಗೆ ಕೊಡಲೇಬೇಕು ಎಂಬ ಕಾನೂನನ್ನು ಮಾಡಿದ್ದರು. ಪೆಟ್ರೋಲ್‌ಬಂಕ್‌ನಿಂದ ಹಿಡಿದು ಬಯೋಗ್ಯಾಸ್ ಏಜೆನ್ಸಿವರೆಗೆ ಯಾವು ದಕ್ಕೇ ಆಗಲಿ ಸರ್ಕಾರಿ ಉತ್ಪನ್ನ ವಸ್ತುಗಳ ಮಾರಾಟದಲ್ಲಿ ಲೈಸೆನ್ಸ್ ಕೊಡುವಾಗ ೧೮ ಪರ್ಸೆಂಟ್‌ನಷ್ಟು ಹರಿಜನಗಿರಿಜನರಿಗೆ ಕೊಡಬೇಕೆಂದು ಜನತಾ ಸರ್ಕಾರ ಮಾಡಿತ್ತು. ಜನತಾ ಸರ್ಕಾರ ಹೋದಮೇಲೆ ಆ ಕೆಲಸ ನಿಂತುಹೋಗಿದೆ. ಈ ಕೆಲಸವನ್ನು ಏತಕ್ಕೆ ಮಾಡಬಾರದು ಎಂಬ ಗ್ಗೆ ಸರ್ಕಾರ ತೀವ್ರವಾಗಿ ಯೋಚನೆ ಮಾಡಬೇಕು. ಇಷ್ಟು ಕೆಲಸ ಮಾಡಿದರೆ ೬ ಲಕ್ಷ ಜನ ಕರ್ನಾಟಕ ರಾಜ್ಯದಲ್ಲಿ ಟ್ರೇಡ್ ಅಂಡ್ ಕಾಮರ್ಸ್ ಕ್ಷೇತ್ರದಲ್ಲಿ ದುಡಿದು ಜೀವನ ಸಾಗಿಸಬಹುದು. ಇದರಲ್ಲಿ ೧ ಲಕ್ಷ ಜನರಿಗಾದರೂ ಅವಕಾಶ ಮಾಡಿಕೊಟ್ಟರೆ ಇಡೀ ೪೦ ಲಕ್ಷ ಜನರಲ್ಲಿ ೮ ಲಕ್ಷ ಕುಟುಂಬಗಳಲ್ಲಿ ೫ ಲಕ್ಷ ಕುಟುಂಬಗಳನ್ನು ಬಡತನದ ರೇಖೆಯಿಂದ ಮೇಲಕ್ಕೆತ್ತಬಹುದು. ಸರ್ಕಾರಿ ಲೆಕ್ಕದ ಪ್ರಕಾರ ಶೇಕಡ ೬೦ ರಷ್ಟು ಮಂದಿ ಬಡತನದ ರೇಖೆಯಿಂದ ಕೆಳಗಿದ್ದಾರೆ. ಅದರಲ್ಲಿ ಶೇಕಡ ೮೦ ರಷ್ಟು ಮಂದಿ ಹರಿಜನಗಿರಿಜನರಿದ್ದಾರೆ. ಅದರಲ್ಲಿ ದಾಮಾಶಾ ಲೆಕ್ಕವನ್ನು ತೆಗೆದುಕೊಂಡರೆ ೩೦ ಲಕ್ಷ ಜನ ಬಡತನದ ರೇಖೆಯಿಂದ ಕೆಳಗಿರತಕ್ಕವರು ಕಾಣು ತ್ತಾರೆ. ಈ ೩೦ ಲಕ್ಷ ಜನರನ್ನು ಮೇಲಕ್ಕೆತ್ತುವುದು ಆಗದಂಥ ಕಷ್ಟದ ಕೆಲಸವೇನಲ್ಲ. ಹೀಗೆ ೫ ಲಕ್ಷ ಕುಟುಂಬಗಳವರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡುವುದರ ಮೂಲಕ ಬಡತನದ ರೇಖೆಯಿಂದ ಮೇಲಕ್ಕೆತ್ತಬಹುದು. ೫ ಲಕ್ಷ ಕುಟುಂಬದವರನ್ನು ಬಡತನದ ರೇಖೆಯಿಂದ ಮೇಲೆತ್ತಿದ್ದರೂ ಇನ್ನೂ ೩ ಲಕ್ಷ ಕುಟುಂಬಗಳು ಉಳಿಯುತ್ತವೆ. ಈ ಮೂರು ಲಕ್ಷ ಕುಟುಂಬಗಳ ಅಭ್ಯುದಯವನ್ನು ಸಾಧನೆ ಮಾಡಲಿಕ್ಕೆ ಮಾರ್ಗ ಇದ್ದೇ ಇದೆ. ಇಡೀ ಕರ್ನಾಟಕದಲ್ಲಿ ಒಂದು ಕೋಟಿ ಹೆಕ್ಟೇರ್ ಬೆಳೆ ಬೆಳೆಯತಕ್ಕ ಭೂಮಿ ಇದೆ. ಅದು ತರಿ, ಖುಷ್ಕಿ, ಬಾಗಾಯಿತು ಯಾವುದೇ ಆಗಿರಬಹುದು. ನಮ್ಮ ಯೋಜನೆ ಗಳು ಕಾರ್ಯಗತವಾದರೆ ಆ ಭೂಮಿಯಲ್ಲಿ ೧೩೬ ಲಕ್ಷ ಎಕರೆ ಭೂಮಿ ಇಡೀ ರಾಜ್ಯನಲ್ಲಿ ನೀರಾವರಿ ಯಾಗುತ್ತದೆ. ಆ ೧೩೬ ಲಕ್ಷ ಎಕರೆ ಭೂಮಿಯಲ್ಲಿ ೧೬ ಲಕ್ಷ ಎಕರೆ ಭೂಮಿಯನ್ನು ಸರ್ಕಾರದವರು ಈ ಜನರಿಗಾಗಿ ಮೀಸಲು ಮಾಡುವುದಕ್ಕೆ ಆಗುವುದಿಲ್ಲವೆ? ಹಾಗೆ ಮೀಸಲು ಮಾಡಿ ಒಂದು ಕುಟುಂಬಕ್ಕೆ ಎರಡು ಹೆಕ್ಟೇರಿನಂತೆ ಕೊಟ್ಟರೂ ಕೂಡ ಒಂದು ಲಕ್ಷ ಹೆಕ್ಟೇರ್ ಭೂಮಿಯನ್ನು ಅವರಿಗೆ ಒದಗಿಸಬಹುದು. ಇವತ್ತು ಮೂರು ಲಕ್ಷ ಕುಟುಂಬಗಳಿಗೆ ಭೂಮಿಯನ್ನು ಒದಗಿಸಿಕೊಡುವುದಕ್ಕೆ ಅಸಮರ್ಥರಾಗಿದ್ದೇವೆಂದರೆ ಸರ್ಕಾರ ವಾಸ್ತವಿಕವಾಗಿ ಈ ದಿಸೆಯಲ್ಲಿ ಯಾವರೀತಿ ಕೆಲಸ ಮಾಡಿದೆಯೆಂಬುದನ್ನು ಗಮನಿಸಬೇಕಾಗಿದೆ. ವಾಣಿಜ್ಯ ಕ್ಷೇತ್ರವಲ್ಲಿ ಈ ಜನರು ಪ್ರವೇಶ ಮಾಡತಕ್ಕ ಅವಕಾಶವನ್ನು ಏತಕ್ಕೆ ಕಲ್ಪಿಸಿಕೊಡಲಿಲ್ಲ? ಅದಕ್ಕೆ ಅವಕಾಶ ಇರಲಿಲ್ಲವೆ? ಕ್ಷೇತ್ರ ಇರಲಿಲ್ಲವೇ? ಸನ್ಮಾನ್ಯ ಸಭಾಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಭಾರತ ದಲ್ಲಿರತಕ್ಕ ಕೋಟಿ ಕೋಟಿ ಜನರ ಪಾದರಕ್ಷೆಯನ್ನು ಮಾಡತಕ್ಕವರು ಯಾರಿದ್ದಾರೆ ಅವರ ಶ್ರಮದಿಂದ ತಯಾರಾಗತಕ್ಕ ಪಾದರಕ್ಷೆಗಳನ್ನು ದೇಶವಿದೇಶಗಳಿಗೆ ಕಳುಹಿಸಿ ಹಣ ಗಳಿಸತಕ್ಕ ವ್ಯವಸ್ಥೆ ಇವತ್ತಿದೆ.

ಕೋಟ್ಯಾಂತರ ಜನರಿಗೆ ಪಾದರಕ್ಷೆಯನ್ನು ತಯಾರು ಮಾಡತಕ್ಕ ಜನಾಂಗ ಏನಿದೆ ಆ ಜನಾಂಗದ ಕೈಯಲ್ಲಿ ಆ ಟ್ರೇಡ್ ಇಲ್ಲ. ಅದಿರುವುದು ಬಾಟಾ ಅವರ ಕೈಯಲ್ಲಿ, ಕ್ಯಾಸಿನೋ ಅವರ ಕೈಯಲ್ಲಿ, ಕರೋನಾ ಅವರ ಕೈಯಲ್ಲಿ. ಯಾರು ಬೆವರು ಸುರಿಸಿ ಈ ಕ್ಷೇತ್ರದಲ್ಲಿ ದುಡಿಯುತ್ತಾರೋ ಅವರಿಗೆ ತಮ್ಮ ವೃತ್ತಿಯಲ್ಲಿ ಪ್ರತಿಭೆಯನ್ನು ಪ್ರತಿಷ್ಠಾಪಿಸತಕ್ಕ ಅವಕಾಶವನ್ನು ಮಾಡಿಕೊಟ್ಟಿಲ್ಲ. ೩೫ ವರ್ಷಗಳ ಸಾಧನೆಯಲ್ಲಿ ಆ ಸಮಾಜದ ಅಭ್ಯುದಯದ ಬಗ್ಗೆ ನಾವು ಗಮನ ಹರಿಸಿಲ್ಲ ಎಂದರೆ ಮೊಸಳೆ ಕಣ್ಣೀರು ಹಾಕಿದಂತಾಗಿದೆ ಎಂದು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ೩೦೦ ಕೋಟಿ ರೂಪಾಯಿಗಳನ್ನು ಎಕ್ಸೈಜ್‌ನಿಂದ ಸಂಪಾದನೆ ಮಾಡುತ್ತಿದ್ದೇವೆ. ಇದರಲ್ಲಿ ಬಹಳಷ್ಟು ಹಣ ಯಾರಿಂದ ಬರುತ್ತಿದೆ? ಇವತ್ತು ಹರಾಜು ಮಾಡುವುದರ ಮೂಲಕ ಎಕ್ಸೈಜ್ ಕಂಟ್ರಾಕ್ಟರುಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿದ್ದೀರಿ. ಇಡೀ ರಾಜ್ಯದಲ್ಲಿ ೧೫ ಪರ್ಸೆಂಟಿನಷ್ಟಾದರೂ ಹರಿಜನಗಿರಿಜನರಿಗೆ ಕಂಟ್ರಾಕ್ಟ್ ಕೊಡುವಂತೆ ನಿಯಮಾವಳಿಗಳನ್ನು ಮಾಡಿದ್ದರೆ ಎಷ್ಟು ಕುಟುಂಬಗಳ ಆರ್ಥಿಕ ಸಂಪತ್ತಿನ ಅಭ್ಯುದಯವನ್ನು ಸಾಧಿಸಬಹುದಾಗಿತ್ತು ಎಂಬುದನ್ನು ಯೋಚನೆ ಮಾಡಿ ಇದನ್ನು ಏತಕ್ಕೆ ಮಾಡಲಿಲ್ಲ? ಎಕ್ಸೈಜ್‌ನಿಂದ ಇಷ್ಟು ಹಣ ಬರುತ್ತಿದ್ದರೂ ಈ ಜನಾಂಗದ ಕಲ್ಯಾಣದ ಕಡೆ ಏತಕ್ಕೆ ಗಮನಹರಿಸಿಲ್ಲ? ಇವತ್ತು ಬ್ರಿವರೀಸ್ ಕಂಪೆನಿ ಯಾರ ಕೈಯಲ್ಲಿದೆ? ಆ ಕ್ಷೇತ್ರದಲ್ಲಿ ದುಡಿಯುವ ಜನ ಇವರಾದರೂ ಆ ಸಂಸ್ಥೆಗಳಿರತಕ್ಕದ್ದು ಖೋಡೆ ಅವರ ಕೈಯಲ್ಲಿ; ಮೋಹನ್ ಮೇಕಿನ್ಸ್ ಅವರ ಕೈಯಲ್ಲಿ; ಎಚ್‌ಡಿ ಅವರ ಕೈಯಲ್ಲಿ; ಮ್ಯಾಕ್‌ಡೆವಲ್ ಕಂಪೆನಿಯವರ ಕೈಯಲ್ಲಿ; ಜೆಮಿನಿ ಅವರ ಕೈಯಲ್ಲಿ, ಬ್ರಿವರೀಸ್ ಅವರ ಕೈಯಲ್ಲಿ. ಹೀಗೆ ಯಾರಿಂದಲೋ ದುಡಿಸಿಕೊಂಡು, ಅವರ ರಕ್ತ ಹೀರಿ, ಅವರಿಗೆ ಕೆಲವಾರು ಪೈಸೆಗಳ ಕೂಲಿ ಕೊಟ್ಟು ಬಂಡವಾಳ ಮಾಡಿಕೊಳ್ಳತಕ್ಕ ಸಂಸ್ಥೆಯನ್ನು ಅನ್ಯರ ಕೈಯಲ್ಲಿ ಕೊಡುವ ಬದಲು ಈ ಸಂಸ್ಥೆಯನ್ನು ನಡೆಸತಕ್ಕ ವ್ಯವಸ್ಥೆಯನ್ನು ಹರಿಜನಗಿರಿಜನರಿಗೆ ಮಾಡಿಕೊಟ್ಟು ಪರಿಸರವನ್ನು ನಿರ್ಮಾಣ ಮಾಡುವಲ್ಲಿ ಸರ್ಕಾರದವರು ಏತಕ್ಕೆ ವಿಫಲರಾಗಿದ್ದೀರಿ? ಆರ್ಥಿಕವಾಗಿ ಅವರ ಅಭ್ಯುದಯದ ಸಾಧನೆಗೆ ಯಾವ ಮಾರ್ಗವನ್ನು ಅನುಸರಿಸಬೇಕೋ ಅದನ್ನು ಅನುಸರಿಸಿಲ್ಲ. ನಿನ್ನೆ ತಾನೇ ಲೋಕಸಭೆಯಲ್ಲಿ ಮಾನ್ಯ ಅರ್ಥಸಚಿವರು ಒಂದು ಮಾತನ್ನು ಹೇಳಿದ್ದಾರೆ. ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ೮೫ ಕೋಟಿ ರೂಪಾಯಿಗಳನ್ನು ದೇಶದಲ್ಲಿ ಮೀಸಲಾಗಿರಿಸಿದ್ದರೆ ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ೮೦೦ ಕೋಟಿ ರೂಪಾಯಿಗಳನ್ನು ಇರಿಸಿದ್ದೇವೆಂದು ಹೇಳಿದ್ದಾರೆ ಇದು ಸಂತೋಷದ ಸಂಗತಿ. ರಾಜ್ಯಗಳು ಮತ್ತು ಕೇಂದ್ರದ ಒಟ್ಟು ಮೊತ್ತ ೫ ಸಾವಿರ ಕೋಟಿ ರೂಪಾಯಿಗಳನ್ನು ಪಂಚವಾರ್ಷಿಕ ಯೋಜನೆಗಳಿಗಾಗಿ ಮೀಸಲು ಮಾಡಿದ್ದಾರೆ. ಅದರ ಪ್ರಕಾರ ಹರಿಜನರಲ್ಲಿ ಒಬ್ಬೊಬ್ಬರಿಗೆ ೩ ಸಾವಿರ ರೂಪಾಯಿಗಳನ್ನು ಐದು ವರ್ಷಗಳಲ್ಲಿ ಖರ್ಚು ಮಾಡಬಹುದು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಮತ್ತು ಆ ಜನರ ಅಭ್ಯುದಯಕ್ಕೆ ಆ ಹಣವನ್ನು ವಿನಿಯೋಗ ಮಾಡುವಂಥ ಕೆಲಸವನ್ನು ಮಾಡಬೇಕೆಂದು ನಾನು ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ.

ಆರ್ಥಿಕ ದೃಷ್ಟಿಯಿಂದ ಮಾಡುವಂತ ಮಾರ್ಗಗಳನ್ನು ನಾನು ಸೂಚಿಸಿದ್ದೇನೆ. ಇನ್ನು ಸಾಮಾಜಿಕವಾಗಿ ''ಅಸ್ಪೃಶ್ಯತೆ''ಯನ್ನು ನಿವಾರಿಸುವುದು ಅತ್ಯಂತ ಮುಖ್ಯವಾದ ಕರ್ತವ್ಯ. ನಮ್ಮ ದೇಶದಲ್ಲಿ ಸ್ವಾಭಾವಿಕವಾಗಿ ಇಂಥ ಸಮಸ್ಯೆಗಳು ಬಂದಾಗ, ರಾಜಕೀಯ ಬಣ್ಣ ಕೊಡತಕ್ಕಂಥ ಪ್ರವೃತ್ತಿ ಬೆಳೆದುಕೊಂಡು ಬಂದಿದೆ. ಇಡೀ ಸಮಾಜದ, ದೇಶದ ಹಾಗೂ ರಾಷ್ಟ್ರದ ಘನತೆ ಗೌರವದ ಪ್ರಶ್ನೆ ಇದರಲ್ಲಿದೆ, ಸಾಂಸ್ಕೃತಿಕ ಪ್ರಶ್ನೆ ಇದರಲ್ಲಿದೆ. ಸಾಮಾಜಿಕ ಶೋಷಣೆಗೆ ಒಳಗಾಗಿರತಕ್ಕ ಜನತೆಯ ಪ್ರಶ್ನೆ ಬಂದಾಗ ಅದಕ್ಕೆ ರಾಜಕೀಯ ಬಣ್ಣ ಬಳಿಯುವಂತ ದೋಷವನ್ನು ಪರಿಹಾರ ಮಾಡುವಂತ ಒಂದು ಭಾವನೆ, ಸಮಗ್ರವಾಗಿ ಹಾಗೂ ಸಾಂಕೇತಿಕವಾಗಿ ಅತ್ಯಗತ್ಯವಾಗಿ ಆಗಬೇಕಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಈ ಸದನದ ಕೆಲವು ಮಿತ್ರರು ಮಾತನಾಡುತ್ತಾ ಅಸ್ಪೃಶ್ಯತೆಯ ಕಳಂಕವನ್ನು ಒಂದು ಸಮಾಜದ ಮೇಲೆ ದೋಷಾರೋಪಣೆ ಮಾಡುವಂತ ರೀತಿಯಲ್ಲಿ ಮಾತನಾಡಿದರು. ೫ ಶತಮಾನಗಳ ಕಾಲ ಈ ರಾಷ್ಟ್ರ ಸಾಮ್ರಾಜ್ಯಷಾಹಿ ದವಡೆಯಲ್ಲಿದ್ದರೂ ಕೂಡ ಈ ಸಮಸ್ಯೆಯನ್ನು ಏತಕ್ಕೆ ಪರಿಹರಿಸಲಿಲ್ಲ? ಮೂರು ಶತಮಾನಗಳ ಕಾಲ ಈ ರಾಷ್ಟ್ರವನ್ನು ಬ್ರಿಟೀಷ್‌ನವರು ರಾಜ್ಯಭಾರ ಮಾಡಿದರೂ ಏತಕ್ಕೆ ಈ ಸಮಸ್ಯೆಯನ್ನು ಬಗೆಹರಿಸಲಿಲ್ಲ? ನಮ್ಮ ಒಡನಾಡಿಗಳಾಗಿ ನಮ್ಮನ್ನು ಬಿಟ್ಟುಹೋಗಿರತಕ್ಕ ನಮ್ಮ ನೆರೆರಾಜ್ಯಗಳಾದ ಬಾಂಗ್ಲಾ ದೇಶ ಇರಬಹುದು, ಪಾಕಿಸ್ತಾನ ಇರಬಹುದು. ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಂಡಿರುವಾಗ, ಈ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಏತಕ್ಕೆ ವಿಫಲವಾದವು? ಈ ಸಮಸ್ಯೆ ಹಾಗೆ ಉಳಿಯುವುದಕ್ಕೆ

ಕಾರಣ ಏನು ? ನಮ್ಮ ಅನೇಕ ಮಿತ್ರರು ಯೋಚನೆ ಮಾಡುತ್ತಿದ್ದಾರೆ, ಮತಾಂತರದ ಸಮಸ್ಯೆ ಇದಕ್ಕೆ ಉತ್ತರವಾಗಬಹುದೇ ? ಎಂದು. ಇದು ಇದಕ್ಕೆ ಮಾರ್ಗವಲ್ಲ. ಸಾಮಾಜಿಕವಾಗಿ, ಸಾಂಕೇತಿಕವಾಗಿ, ವಿಶ್ವಾಸದಿಂದ ಈ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಸರ್ವರೂ ಕೂಡ ಭಾಗಿಗಳಾಗಬೇಕಾದ ಅವಶ್ಯಕತೆ ಇದೆ ಎನ್ನು ಮಾತನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮಿತ್ರರೊಬ್ಬರು ಒಂದು ಮಾತನ್ನು ಹೇಳಿದರು, ಹಿಂದೆ ಬಸವಣ್ಣನವರು ಸಾಮಾಜಿಕ ಕಾರ್ಯವನ್ನು ಅದರಲ್ಲಿಯೂ ಹರಿಜನ ಗಿರಿಜನರ ಸಮಸ್ಯೆಯನ್ನು, "ಅಸ್ಪೃಶ್ಯತೆಯನ್ನು" ತಡೆಯುವುದಕ್ಕೆ ಹೋರಾಟ ಮಾಡಿದರು. ಅವರ ಭಕ್ತರು ಏನು ಮಾಡುತ್ತಿದ್ದಾರೆಂದು ಪ್ರಶ್ನೆ ಎತ್ತಿದ್ದರು. ಬಸವಣ್ಣನವರು ತಮ್ಮ ಕಾಲದಲ್ಲಿ ಅದ್ಭುತವಾದಂತ, ಜಗದ್ವಿಖ್ಯಾತವಾದಂತ ಸಾಧನೆಯನ್ನು ಮಾಡಿದ್ದಾರೆ. ಇತಿಹಾಸ ಪ್ರಸಿದ್ಧವಾದಂತ, ಕ್ರಾಂತಿಕಾರಕವಾದಂತ ಸಾಮಾಜಿಕ ಕಾರ್ಯಗಳನ್ನು ಮಾಡಿದ ಭಗವಾನ್ ಬಸವಣ್ಣನವರು ತಮ್ಮ ಸ್ಥಾನಮಾನಗಳನ್ನು ಕಳೆದುಕೊಳ್ಳಬೇಕಾಯಿತೆಂಬ ಅಂಶವನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ತಮ್ಮ ಹಕ್ಕು ಭಾದ್ಯತೆಗಳನ್ನು ಕಳೆದುಕೊಳ್ಳಬೇಕಾಯಿತು, ಅವರು ನಂಬಿದ್ದ ಧರ್ಮದ ಹಿರಿಮೆ ಗರಿಮೆಗಳನ್ನು ಕಳೆದುಕೊಳ್ಳಬೇಕಾಯಿತು. ಆದರೂ ಕೂಡ ಅವರು ಆ ದಿಕ್ಕಿನಲ್ಲಿ ತಮ್ಮ ಸೇವೆಯನ್ನು ಮಾಡಿದರು ಎನ್ನುವ ಅಂಶವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ೧೯೪೦ನೇ ಇಸವಿಯಿಂದೀಚೆಗೆ ಈ ದೇಶದಲ್ಲಿ ಬಡ ಮಕ್ಕಳಿಗೆ ಅನ್ನ ಕೊಟ್ಟು, ಅಕ್ಷರ ಕಲಿಸತಕ್ಕ ಕೆಲಸವನ್ನು ಮಾಡಿದವರು ಬಸವಣ್ಣನವರ ಭಕ್ತ ಜನವೆ. ರಾಷ್ಟ್ರದಲ್ಲಿ, ರಾಜ್ಯಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ ಲಕ್ಷ ಲಕ್ಷ ಮಕ್ಕಳಿಗೆ ಅನ್ನ ಕೊಟ್ಟು, ವಿದ್ಯಾಸಂಸ್ಥೆಗಳನ್ನು ತೆರೆದು, ಅಕ್ಷರ ಕಲಿಸತಕ್ಕ ವ್ಯವಸ್ಥೆ ಮಾಡಿದವರು ಬಸವಣ್ಣನವರ ಜನರೇ. ಇವತ್ತು ಸಿದ್ಧಗಂಗಾ ಕ್ಷೇತ್ರದಲ್ಲಿ ಹತ್ತು ಸಾವಿರ ಮಕ್ಕಳಿಗೆ, ಹರಿಜನರು ಗಿರಿಜನರೂ, ಹಿಂದುಳಿದವರೂ ಸೇರಿ ಅನ್ನ ಕೊಡುವಂತ ವ್ಯವಸ್ಥೆ ಮಾಡಿದ್ದಾರೆ. ಸುತ್ತೂರು ಮಠದಲ್ಲಿ ಆರು ಸಾವಿರ ಮಕ್ಕಳಿಗೆ ಅನ್ನ ಕೊಡತಕ್ಕ ವ್ಯವಸ್ಥೆಯಿದ್ದು, ಸುಮಾರು ಒಂದು ಸಾವಿರ ಹರಿಜನ ಗಿರಿಜನ ಮಕ್ಕಳಿಗೆ ಅನ್ನ ಕೊಟ್ಟು ಅಕ್ಷರ ಕೊಡತಕ್ಕ ವ್ಯವಸ್ಥೆ ಮಾಡಿದ್ದಾರೆ. ಸಿರಿಗೆರೆ ಕ್ಷೇತ್ರದಲ್ಲಿ ೬೦೦೦ ಜನ ಮಕ್ಕಳಿಗೆ ಅನ್ನ ಕೊಡುವಂತ ವ್ಯವಸ್ಥೆಯಿದ್ದು, ಸುಮಾರು ಒಂದೂವರೆ ಸಾವಿರ ಹರಿಜನ ಮಕ್ಕಳು ಅಲ್ಲಿ ಇದ್ದುಕೊಂಡು ವ್ಯಾಸಂಗ ಪಡೆಯುತ್ತಿದ್ದಾರೆ. ಈ ದೇಶದಲ್ಲಿ ಸಾಮಾಜಿಕ ದಿಕ್ಕಿನಲ್ಲಿ ಮುನ್ನಡೆ ನಡೆದಿದ್ದರೆ ಅದು ಬಸವಣ್ಣನವರ ಭಕ್ತ ಜನರಿಂದಲೇ ನಡೆದಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಆದರೂ ನಡೆದಿರತಕ್ಕ ಕೆಲಸ ತೃಪ್ತಿಕರವಾಗಿ ನಡೆದಿಲ್ಲ. ಬಸವಣ್ಣನವರು ಕೈಗೊಂಡಂತ ಸಮಗ್ರವಾದ ಕ್ರಾಂತಿಯ ಮಾರ್ಗದಲ್ಲಿ ನಡೆಯಬೇಕಾದಂತ ಅವಕಾಶವನ್ನು ಮುಂದುವರಿಸಿಕೊಂಡು ಹೋಗುತ್ತಿರುವಂತ ಸಂಸ್ಥೆಗಳ ಕಡೆಗೆ ಯಃಕಶ್ಚಿತ್ ಕೃತಜ್ಞತೆ ಭಾವನೆಯಿಂದ ನೋಡುವಂತ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕೆಂದು ಹೇಳುತ್ತೇನೆ, ಜೊತೆಗೆ ಇಂದಿಗೂ ಬಸವಣ್ಣನವರ ಮಾರ್ಗದಲ್ಲಿ ಶೋಷಿತ ವರ್ಗದವರಿಗೆ ಅನ್ನ ಮತ್ತು ಅಕ್ಷರದ ಮಾರ್ಗವನ್ನು ನೀಡುವಂತ ಸಂಸ್ಥೆ ಹಾಗೂ ಮಠಗಳಿಗೆ ಈ ಸಭೆಯ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಕೊನೆಯದಾಗಿ, ಮೈಸೂರಿನಲ್ಲಿ ಕುರುಡರಿಗೆ ಮತ್ತು ಕಿವುಡರಿಗೆ ಒಂದು ಪಾಠಶಾಲೆಯನ್ನು ಪ್ರಾರಂಭ ಮಾಡಿದ್ದಾರೆ. ಕುರುಡರಿಗೆ ವಿಶೇಷವಾದ ಜ್ಞಾನವನ್ನು ಕೊಡುವಂತ ಬ್ರೈಲ್ ಪ್ರಿಂಟಿಂಗ್ ಪುಸ್ತಕಗಳಿಗೆ ಸಂಬಂಧಪಟ್ಟಂತೆ ವ್ಯವಸ್ಥೆ ಇಲ್ಲ. ಜನರಿಗೆ ಪ್ರಿಂಟಿಂಗ್‌ನಲ್ಲಿ ಪ್ರಿಂಟಾಗುವಂತ ವ್ಯವಸ್ಥೆ ಮಾಡಿದ್ದಾರೆ. ಅಲ್ಲದೆ, ನಮ್ಮ ದಕ್ಷಿಣ ಭಾರತದಲ್ಲಿ ಕುರುಡರಿಗೆ ಉನ್ನತ ವ್ಯಾಸಂಗವನ್ನು ಕೊಡುವಂತ ಸಂಸ್ಥೆಯಿಲ್ಲ, ಡೆಹರಾಡೂನ್‌ನಲ್ಲಿ ಮಾತ್ರ ಅವಕಾಶ ಇದೆ. ನಮ್ಮ ರಾಜ್ಯದಲ್ಲಿಯೂ ಕುರುಡರಿಗೆ ವಿಶೇಷ ಜ್ಞಾನವನ್ನು ಕೊಡುವಂತ ಒಂದು ಸಂಸ್ಥೆಯನ್ನು ತೆರೆಯುವುದಕ್ಕೆ ಸರ್ಕಾರದವರು ಆಲೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಮಹಿಳೆಯರ ತೊಂದರೆ, ನೋವು ನಲಿವುಗಳನ್ನು ಮಂತ್ರಿಗಳು ಮಾತ್ರ ಪರಿಹರಿಸುವುದಕ್ಕೆ ಸಾಧ್ಯವಿಲ್ಲ. ಇವತ್ತು ರಾಜ್ಯದಲ್ಲಿ ಹರಿಜನರಿಗೆ ಆಗತಕ್ಕ ತೊಂದರೆಗಳನ್ನು ನಿವಾರಣೆ ಮಾಡಲು ಒಂದು ಸೆಲ್ ಮಾಡಿದ್ದಾರೆ, ಅದೇ ಮಾದರಿಯಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಹಿಳಾ ಸಬ್ ಇನ್ಸ್‌ಪೆಕ್ಟರುಗಳನ್ನು ನೇಮಿಸಿ, ಮಹಿಳೆಯರ ಬಗ್ಗೆ ದೂರು ಬಂದ ಕೂಡಲೇ ಸೋಮೋಟೀವ್ ಆಗಿ ಸ್ವತಃ ಪರಿಶೀಲನೆ ನಡೆಸಿ, ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವಂತಹ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವೆಯರಲ್ಲಿ ಪ್ರಾರ್ಥಿಸಿಕೊಂಡು, ಸಮಾಜದ ಮೇಲೆ ಹಾಗೂ ರಾಷ್ಟ್ರದ ಮೇಲೆ ಇರತಕ್ಕ ಸಾಮಾಜಿಕ ಕಳಂಕವನ್ನು ತೊಡೆದು ಹಾಕುವ ದಿಕ್ಕಿನಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಸರ್ಕಾರ

ದವರು ಹಾಕಿಕೊಳ್ಳಲಿ ಎಂದು ಹೇಳಿ. ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

†SRI PRABHAKAR R. TELKAR (Chitapur).- Sir, while supporting the Demands on Social Security and Welfare as well as the Women and Children Welfare, I would like to submit a few facts which are to be considered by the Government for Backward Classes and Minorities. It is mentioned in the annual report that about 250 Pre-matric Hostels and about 50 Post-matric Hostels have been provided for the Backward Classes. The Hostels provided by the Government to the Backward Classes and Minorities are not in proportion to their population. Still there are several talukas and big towns where Backward Classes Hostels have not been provided and as such the students by and large are facing much difficulties with regard to the accomodation. I would request the Government to increase the number of hostels for Backward Classes and Minorities in Karnataka State. Another thing is that the boarders are being given Rs. 75 only per month towards the boarding fees. I think, it is quite less. They cannot just get nutritious food for Rs. 75. Therefore, I demand the Government to increase the Boarding fees to Rs. 100.

Then regarding working of the department, I feel that the Directorate of Social Welfare is not functioning properly. I have got reasons to say like this. Sir, during the year 1981-82, under the self-employment programme, an amount of Rs. 5 lakhs was placed at the disposal of the Directorate of Backward classes. What is this self-employment scheme? They have given a list of so many works that could be entrusted to the people from the backward classes and this amount of Rs. 5 lakhs was meant for them. But I am very sorry to say that the whole amount has not been utilised and hence it was lapsed. Who is responsible for this? Is this the work of the Directorate of the Backward classes? Is this the work of the department of backward classes which is boasting that the department has come to help the people belonging to backward classes in Karnataka State? Sir, the amount placed at the disposal of this department is very less and that is one of the reasons as to why the amounts are lapsed. I urge that the Directorate of Social Welfare should work actively and effectively and ensure that the funds earmarked are utilised to the fullest extent. The department cannot sit idle and see that the amounts provided are not lapsed. Then, an amount of Rs. 16.70 lakhs was provided during the year 1981-82 for the progress of hostels. I do not know whether this amount is spent or not. Where are the hostels? Whether the construction of hostels have taken place? What happened to the amount of Rs. 16.70 lakhs which is provided for the progress of hostels? The answer is not

